ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 11 | ಮಾರ್ಚ್ 8–14, 2021 | ಪುಟ 16 | ರೂ.10/-

https://janashakthi.wordpress.com e-mail : js_weekly@gmail.com



ಮಹಿಳಾ ದಿನಾಚರಣೆ 2021

ಮಹಿಳೆಯರಿಗೆ ಭೂಮಿ ಹಕ್ಕು ಮತ್ತು ಶ್ರಮಕ್ಕೆ ಮಾನ್ಯತೆ ಬೇಕು




ಸಮತೆಯ ನಾಳೆಗಳ ಸಾಧನೆಗೆ ನಾಯಕತ್ವ

“ಕೋಟಿ ಹೆಜ್ಜೆ ವಿಧಾನ ಸೌಧದೆಡೆಗೆ”

ಹರಿದು ಬಂದ ಕಾರ್ಮಿಕ ಸಾಗರ



ಬಿಜೆಪಿಯ ಏಕಾಧಿಪತ್ಯಕ್ಕೆ ಸವಾಲು





‘ಎಂಎಸ್‌ಪಿ ಕೊಡಿಸಿ ರಾಷ್ಟ್ರೀಯ ಆಂದೋಲನ’ ಆರಂಭ

ಚುನಾವಣೆ ನಡೆಯುವ ರಾಜ್ಯಗಳಲ್ಲಿ ಬಿಜೆಪಿ ವಿರುದ್ಧ ಪ್ರಚಾರ-ಎಸ್.ಕೆ.ಎಂ. ನಿರ್ಧಾರ

ಮಾರ್ಚ್ 15– ಖಾಸಗೀಕರಣದ ವಿರುದ್ಧ ಕಾರ್ಮಿಕರ ಪ್ರತಿಭಟನೆಗೆ ಬೆಂಬಲ

ಮಾರ್ಚ್ 2 ರಂದು ನಡೆದ ಸಂಯುಕ್ತ ಕಿಸಾನ್ ಮೋರ್ಚಾ(ಎಸ್.ಕೆ.ಎಂ.)ದ ಸಾಮಾನ್ಯ ಸಭೆ ರೈತರ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸಲು ನಿರ್ಧರಿಸಿದೆ. ಕೇಂದ್ರದಲ್ಲಿ ಆಳುವ ಪಕ್ಷದ ಮೇಲೆ ಒತ್ತಡ ತರಲು ವಿಧಾನ ಸಭಾ ಚುನಾವಣೆಗಳು ಘೋಷಿಸಲ್ಪಟ್ಟಿರುವ ಪಶ್ಚಿಮ ಬಂಗಾಲ, ಅಸ್ಸಾಂ, ಕೇರಳ. ತಮಿಳುನಾಡು ರಾಜ್ಯಗಳಲ್ಲಿ ಹಾಗೂ ಪುದುಚೇರಿ ಕೇಂದ್ರಾಡಳಿತ ಪ್ರದೇಶದಲ್ಲಿ ಬಿಜೆಪಿ ವಿರುದ್ಧ ಪ್ರಚಾರ ನಡೆಸಲು ನಿರ್ಧರಿಸಿದೆ.

ಈ ಐದು ಕಡೆಗಳಿಗೆ ಎಸ್.ಕೆ.ಎಂ ತಂಡಗಳನ್ನು ಕಳಿಸಲಾಗುತ್ತದೆ. ಇವು ಯಾವುದೇ ರಾಜಕೀಯ ಪಕ್ಷವನ್ನು ಬೆಂಬಲಿಸುವುದಿಲ್ಲ. ಆದರೆ ಮೋದಿ ಸರಕಾರ ರೈತರೊಂದಿಗೆ ನ್ಯಾಯಯುತವಾಗಿ ವರ್ತಿಸುತ್ತಿಲ್ಲವಾದ್ದರಿಂದ ಅದರ ವಿರುದ್ಧ ಪ್ರಚಾರ ಮಾಡಲಾಗುವುದು, ರೈತರ ಹೋರಾಟದ ವಿರುದ್ಧ ಅದರ ಅಪಪ್ರಚಾರಕ್ಕೆ ಪ್ರತ್ಯುತ್ತರ ಕೊಡಲಾಗುವುದು ಎಂದು ಎಸ್.ಕೆ.ಎಂ. ಮುಖಂಡರು ಹೇಳಿದ್ದಾರೆ. ಮಾರ್ಚ್ 12ರಂದು ಕೊಲ್ಕತಾದಲ್ಲಿ ನಡೆಯಲಿರುವ ರೈತರ ರ್‍ಯಾಲಿಯಲ್ಲಿ ಎಸ್.ಕೆ.ಎಂ. ಮುಖಂಡರು ಭಾಗವಹಿಸುತ್ತಾರೆ.

ಇದಕ್ಕೆ ಮೊದಲು **ಮಾರ್ಚ್ 5 ರಂದು ಎಂ.ಎಸ್.ಪಿ. ದಿಲಾವೋ ಅಭಿಯಾನ್(ಎಂ.ಎಸ್.ಪಿ. ಕೊಡಿಸಿ ಪ್ರಚಾರಾಂದೋಲನ) ಆರಂಭಿಸಲಾಗುವುದು.** ಇದು ಕರ್ನಾಟಕದಿಂದ ಆರಂಭವಾಗಿ ಆಂಧ್ರಪ್ರದೇಶ ಮತ್ತು ತೆಲಂಗಾಣಕ್ಕೆ ಹೋಗುತ್ತದೆ ಎಂದು ಎಸ್.ಕೆ.ಎಂ. ತಿಳಿಸಿದೆ.

ಮಾರ್ಚ್ 6 ರಂದು ಮೂರು ಕಾಯ್ದೆಗಳ ರದ್ಧತಿಗೆ ಆಗ್ರಹಿಸುವ 'ದಿಲ್ಲಿ ಚಲೋ' ಹೋರಾಟದ ಭಾಗವಾಗಿ ಸಾವಿರಾರು ರೈತರು ದಿಲ್ಲಿ ಗಡಿಗಳಿಗೆ ತಲುಪಿ ನೂರು ದಿನಗಳಾಗುತ್ತವೆ. ಅಂದು ಪಶ್ಚಿಮ ವರ್ತುಲ ಹೆದ್ದಾರಿ ಅಥವ ಕುಂಡ್ಲಿ–ಮನೇಸರ್–ಪಲ್ವಲ್ ಎಕ್ಸ್ ಪ್ರೆಸ್ ವೇಯಲ್ಲಿ 11ರಿಂದ 4 ಗಂಟೆಯ ವರೆಗೆ ರಸ್ತೆ ತಡೆ ನಡೆಸಲು ಎಸ್.ಕೆ.ಎಂ. ನಿರ್ಧರಿಸಿದೆ. ದಿಲ್ಲಿಯನ್ನು ಸುತ್ತುವರೆದಿರುವ ಈ ಆರು ಪಥಗಳ ಹೆದ್ದಾರಿ ರೈತರು ಪ್ರತಿಭಟನೆ ನಡೆಸುತ್ತಿರುವ ಸ್ಥಳಗಳಾದ ಸಿಂಘು, ಟಿಕ್ರಿ ಮತ್ತು ಗಾಜೀಪುರವನ್ನು ಜೋಡಿಸುವಂತದ್ದು. ಅಂದು ದೇಶದ ಇತರ ಭಾಗಗಳಲ್ಲಿ ರೈತ ಹೋರಾಟದ ಬೆಂಬಲಿಗರು 'ಕಪ್ಪು ದಿನಾಚರಣೆ' ನಡೆಸುತ್ತಾರೆ.

ಈ ಹೋರಾಟಗಳಿಗೆ ಕಾರ್ಮಿಕ ಸಂಘಗಳು ಬೆಂಬಲ ಸೂಚಿವೆ.

ಕಾರ್ಮಿಕ–ರೈತರ ಐಕ್ಯ ಹೋರಾಟ

ಫೆಬ್ರುವರಿ 27 ರಂದು ಕಿಸಾನ್–ಮಜ್ದೂರ್ ಏಕತಾ ದಿನಾಚರಣೆಯ ನಂತರ ರೈತರು ಮತ್ತು ಕಾರ್ಮಿಕರ ಜಂಟಿ ಹೋರಾಟವನ್ನು ಬಲಪಡಿಸಲು ಮಾರ್ಚ್ 1 ರಂದು ಸಂಯುಕ್ತ ಕಿಸಾನ್ ಮೋರ್ಚಾ ಮತ್ತು 10 ಕೇಂದ್ರೀಯ ಕಾರ್ಮಿಕ ಸಂಘಗಳು ಹಾಗೂ ಅಖಿಲ ಭಾರತ ಒಕ್ಕೂಟಗಳ ಜಂಟಿ ವೇದಿಕೆಯ ಮುಖಂಡರ ಸಭೆ ನಡೆಯಿತು. ರೈತರ 'ದಿಲ್ಲಿ ಚಲೋ' ಹೋರಾಟದ ಹಿಂದಿನ ದಿನ ನವಂಬರ್ 26ರಂದು ದೇಶದ ಕಾರ್ಮಿಕರ ಸಾರ್ವತ್ರಿಕ ಮುಷ್ಕರಕ್ಕೆ ರೈತ ಸಂಘಟನೆಗಳು ಬೆಂಬಲ ನೀಡಿದ್ದವು. ಮರುದಿನದಿಂದ 'ಮೂರು ಕೃಷಿ ಕಾಯ್ದೆಗಳು ಮತ್ತು ವಿದ್ಯುಚ್ಛಕ್ತಿ ಮಸೂದೆಯ ರದ್ಧತಿ ಆಗ್ರಹಿಸಿ, ಎಂಎಸ್‌ಪಿ ಕುರಿತ ಕಾನೂನು ತರಬೇಕು ಎಂದು ಆಗ್ರಹಿಸಿ ದಿಲ್ಲಿಯ ಗಡಿಗಳಲ್ಲಿ ಆರಂಭವಾದ ರೈತರ ಹೋರಾಟಕ್ಕೆ ಕಾರ್ಮಿಕ ಸಂಘಗಳು ಬೆಂಬಲ ನೀಡುತ್ತ ಬಂದಿವೆ, ದೇಶಾದ್ಯಂತ ಹಲವು ಬಾರಿ ಸೌಹಾರ್ದ ಕಾರ್ಯಾಚರಣೆಗಳನ್ನು ನಡೆಸಿವೆ.

ಮಾರ್ಚ್ 1ರ 'ಸಭೆ'ಯಲ್ಲಿ ಕಾರ್ಮಿಕ ಸಂಘಗಳ ಜಂಟಿವೇದಿಕೆಯ ಮುಖಂಡರು ರೈತರ ಸಂಘಟನೆಗಳ ಸಂಯುಕ್ತ ವೇದಿಕೆಯ ಮುಖಂಡರಿಗೆ ಖಾಸಗೀಕರಣದಿಂದ ದೇಶಕ್ಕೆ ಆಗುವ ಅಪಾಯಗಳು, ಮತ್ತು ಮೂರು ಕೃಷಿ ಕಾಯ್ದೆಗಳಂತೆ ತರಾತುರಿಯಿಂದ ಪಾಸು ಮಾಡಿಸಿಕೊಂಡ ನಾಲ್ಕು ಕಾರ್ಮಿಕ ಸಂಹಿತೆಗಳಿಂದ ಕಾರ್ಮಿಕ ವರ್ಗದ ಮೇಲೆ ಆಗುವ ಅನ್ಯಾಯಗಳ ಬಗ್ಗೆಯೂ ಚರ್ಚಿಸಲಾಯಿತು.

ಸರಕಾರ ರೈತರ ಮತ್ತು ಇತರ ದುಡಿಯುವ ಜನಸಮೂಹಗಳ ಕಾರ್ಪೊರೇಟ್ ಲೂಟಿಯ ಪರವಾದ ನಿಲುವು ತಳೆಯುತ್ತಿದೆ. ಇದು ದೇಶದ ರೈತರು ಮತ್ತು ಕಾರ್ಮಿಕರ ಮುಂದಿರುವ ಸಮಾನ ಸವಾಲು, ಇದನ್ನು ಒಟ್ಟಾಗಿ ಎದುರಿಸಲು ಈ ಸಭೆಯಲ್ಲಿ ನಿರ್ಧರಿಸಲಾಯಿತು. ಮೂರು ಕೃಷಿ ಕಾಯ್ದೆಗಳನ್ನು ರದ್ದು ಮಾಡಬೇಕು ಮತ್ತು ಎಂಎಸ್‌ಪಿ ಕಾನೂನು ತರಬೇಕು ಎಂಬ ರೈತರ ಬೇಡಿಕೆ ಮತ್ತು ಕಾರ್ಮಿಕ ಸಂಹಿತೆಗಳನ್ನು ರದ್ದು ಮಾಡಬೇಕು ಹಾಗೂ ಖಾಸಗೀಕರಣವನ್ನು ನಿಲ್ಲಿಸಬೇಕು ಎಂಬ ಕಾರ್ಮಿಕರ ಬೇಡಿಕೆಗಳ ಮೇಲೆ ಜಂಟಿಯಾಗಿ ಹೋರಾಟ ನಡೆಸಲು ನಿರ್ಧರಿಸಲಾಯಿತು.

ಇದರ ಭಾಗವಾಗಿ ಮಾರ್ಚ್ **15 ರಂದು ಕಾರ್ಮಿಕ ಸಂಘಗಳು ನಡೆಸಲಿರುವ ಖಾಸಗೀಕರಣ–ವಿರೋಧಿ ದಿನಾಚರಣೆಗೆ ಬೆಂಬಲ ನೀಡಲು ಎಸ್.ಕೆ.ಎಂ. ಮರುದಿನ ಮಾರ್ಚ್ 2ರಂದು ನಡೆದ ಸಭೆಯಲ್ಲಿ ನಿರ್ಧರಿಸಿದೆ.** ಮಾರ್ಚ್ 15 ಮತ್ತು 16 ರಂದು ಬ್ಯಾಂಕು ಸಂಘಗಳ ಐಕ್ಯವೇದಿಕೆಯ ಕರೆಯಂತೆ ಬ್ಯಾಂಕ್ ಖಾಸಗೀಕರಣದ ವಿರುದ್ಧ ನಡೆಯಲಿರುವ ದೇಶವ್ಯಾಪಿ ಮುಷ್ಕರ, ಮಾರ್ಚ್ 17 ರಂದು ಸಾಮಾನ್ಯ ವಿಮಾ ಕ್ಷೇತ್ರದಲ್ಲಿ ಮತ್ತು ಮಾರ್ಚ್ 18 ರಂದು ಎಲ್‌ಐಸಿಯಲ್ಲಿ ಖಾಸಗೀಕರಣ ಮತ್ತು ಶೇರು ಮಾರಾಟದ ವಿರುದ್ಧ ನಡೆಯಲಿರುವ ದೇಶವ್ಯಾಪಿ ಮುಷ್ಕರಗಳನ್ನು ಕೂಡ ಸಂಯುಕ್ತ ಕಿಸಾನ್ ಮೋರ್ಚಾ ಬೆಂಬಲಿಸುತ್ತಿದೆ.

ಐಟಿ ನಿಯಮಗಳು, 2021 ಕ್ಕೆ ವ್ಯಾಪಕ ವಿರೋಧ

–ಸಮಾಲೋಚನೆಗಳು ನಡೆಯುವ ವರೆಗೆ ತಡೆಹಿಡಿಯಲು ಆಗ್ರಹ

ಇತ್ತೀಚೆಗೆ ಕೇಂದ್ರ ಸರಕಾರ ಜಾರಿಗೆ ತಂದಿರುವ 'ಮಾಹಿತಿ ತಂತ್ರಜ್ಞಾನ (ಮಧ್ಯಂತರ ಮಾರ್ಗಸೂಚಿಗಳು ಮತ್ತು ಡಿಜಿಟಲ್ ಮಾಧ್ಯಮ ನೀತಿ ಸಂಹಿತೆ) ನಿಯಮಗಳು, 2021' (ಐಟಿ ನಿಯಮಗಳು) ಗೆ ಡಿಜಿಪಬ್ ನ್ಯೂಸ್ ಇಂಡಿಯಾ ಫೌಂಡೇಶನ್ ಬಲವಾದ ಅಕ್ಷೇಪವನ್ನು ವ್ಯಕ್ತಪಡಿಸಿದೆ, ಮತ್ತು ಕೇಂದ್ರ ಮಾಹಿತಿ ಮತ್ತು ಪ್ರಸಾರ ಮಂತ್ರಿ ಪ್ರಕಾಶ್ ಜಾವಡೇಕರ್ ಅವರಿಗೆ "ಕೆಲವೆಡೆಗಳಲ್ಲಿ ಐಟಿ ನಿಯಮಗಳು ಪ್ರಜಾಪ್ರಭುತ್ವದಲ್ಲಿ ಸುದ್ದಿಯ ಮೂಲಭೂತ ತತ್ವ ಮತ್ತು ಅದರ ಪಾತ್ರಕ್ಕೆ ವಿರುದ್ಧವಾಗಿರುವಂತೆ ಕಾಣುತ್ತದೆ" ಎಂದು ಪತ್ರ ಬರೆದಿದೆ.

ಭಾರತದ ಡಿಜಿಟಲ್ ಸುದ್ದಿ ಪ್ರಕಟಣೆಗಳ ಅತಿ ದೊಡ್ಡ ಸಂಘಟನೆಯಾಗಿರುವ ಡಿಜಿಪಬ್ (DIGIPUB) ಫೌಂಡೇಷನ್ ಸಂಬಂಧಪಟ್ಟ ಎಲ್ಲ ಭಾಗೀದಾರರೊಂದಿಗೆ ಸಮಾಲೋಚನೆಗಳು ನಡೆಯುವ ವರೆಗೆ ಈ ನಿಯಮಗಳನ್ನು ರದ್ದುಗೊಳಿಸಬೇಕು ಅಥವಾ ತಡೆಹಿಡಿಯಬೇಕು ಎಂದು ವಿನಂತಿಸಿದೆ. ಡಿಸೆಂಬರ್ 2, 2020 ರಂದು ಸಂಬಂಧಪಟ್ಟ ಸಚಿವಾಲಯಕ್ಕೆ ಪತ್ರ ಬರೆದಿದ್ದರೂ, ಉತ್ತರವುನ್ನೂ ಸಿಕ್ಕಿಲ್ಲ, ಆದರೆ ಈಗಲೂ ತಡವಾಗಿಲ್ಲ ಎಂದು ಅದು ಹೇಳಿದೆ.

"ಐಟಿ ನಿಯಮಗಳು, 2021, ಅಧಿಕೃತವಾಗಿ ಕಾರ್ಯರೂಪಕ್ಕೆ ಬಂದಿವೆ, ಇದು ಭಾರತೀಯ ಅಂತರ್ಜಾಲವನ್ನು ಮೂಲಭೂತವಾಗಿ ಬದಲಾಯಿಸುತ್ತದೆ "ಎಂದು ಇಂಟರ್ನೆಟ್ ಫ್ರೀಡಮ್ ಫೌಂಡೇಶನ್ (ಅಂತರ್ಜಾಲ ಸ್ವಾತಂತ್ರ್ಯ ಪ್ರತಿಷ್ಠಾನ–ಐಎಫ್‌ಫ್) ಟ್ವೀಟ್ ಮಾಡಿದೆ.

"ಕೆಲವು ಸ್ಥಳಗಳಲ್ಲಿ ಈ ನಿಯಮಗಳು ಸುದ್ದಿಯ ಮೂಲಭೂತ ತತ್ವ ಮತ್ತು ಪ್ರಜಾಪ್ರಭುತ್ವದಲ್ಲಿ ಅದರ ಪಾತ್ರಕ್ಕೆ ವಿರುದ್ಧವಾಗಿರುವಂತೆ ಕಂಡುಬರುತ್ತವೆ. ಸುದ್ದಿ ಮಾಧ್ಯಮಗಳನ್ನು ಜವಾಬುದಾರರಾಗಿ ಮಾಡುವ ಕಾನೂನುಗಳು ಈಗಾಗಲೇ ಅಸ್ತಿತ್ವದಲ್ಲಿದ್ದರೂ, ಈ ನಿಯಮಗಳು ಕಾರ್ಯಾಂಗ ಸರ್ಕಾರಕ್ಕೆ ಪ್ರಸಕ್ತ ವ್ಯವಹಾರಗಳು ಅಥವಾ ಸುದ್ದಿಗಳು ಎಂದು ಪ್ರಕಟಿಸಿರುವುದನ್ನು ತೆಗೆಯಲು ಅನುವು ಮಾಡಿಕೊಡುತ್ತವೆ(ನಿಯಮ 14.)" ಎಂದು ಡಿಜಿಪಬ್ ಹೇಳಿದೆ. ಪ್ರಸಕ್ತ ವ್ಯವಹಾರಗಳ ಪ್ರಕಟಣೆಯು ಸಂವಿಧಾನದ ಕಲಮು 19 (1) (ಎ) ಅಡಿಯಲ್ಲಿ ಖಾತರಿಪಡಿಸಿದ ಪ್ರಕಾಶಕ ಅಥವಾ ಲೇಖಕರ ಅಭಿವ್ಯಕ್ತಿಯ ಮೂಲಭೂತ ಹಕ್ಕನ್ನು ಮಾತ್ರವಲ್ಲದೆ ನಾಗರಿಕರ ಮಾಹಿತಿ ಪಡೆಯುವ ಹಕ್ಕನ್ನು ಕೂಡ ಪ್ರತಿನಿಧಿಸುತ್ತದೆ..

"ಸುದ್ದಿ ಪೋರ್ಟಲ್‌ಗಳು ಅಥವಾ ಪ್ರಕಟಣೆಗಳ ವಿಷಯವನ್ನು ನಿಯಂತ್ರಿಸುವ ಅನಿರ್ಬಂಧಿತ ಅಧಿಕಾರವನ್ನು ಕಾರ್ಯಾಂಗವು ಹೊಂದುವುದು ಸಾಂವಿಧಾನಿಕ ಯೋಜನೆಯ ಮೇಲಷ್ಟೇ ಅಲ್ಲ, ಪ್ರಜಾಪ್ರಭುತ್ವದ ಮೇಲೆಯೇ ಮಾಡುವ ಪ್ರಹಾರವಾಗುತ್ತದೆ" ಎಂದು ಅದು ಹೇಳಿದೆ.

ಈ ನಿಯಮಗಳಲ್ಲಿ "ಅಸಂಗತತೆಗಳು" ಇವೆ. ಇದು ಸಂಪೂರ್ಣ ಕಾನೂನು ಪ್ರಕ್ರಿಯೆಯನ್ನು ಬದಿಗೊತ್ತುತ್ತದೆ, ಮಾನಹಾನಿಯೆಂಬ ದೂರು ವಿಚಾರಣೆಗೆ ಅರ್ಹವಾಗಿದೆಯೇ ಇಲ್ಲವೇ ಎಂಬುದನ್ನು ಅಧಿಕಾರಶಾಹಿಗಳನ್ನು ಒಳಗೊಂಡಿರುವ ಮತ್ತು ಕೇಂದ್ರ ಸರ್ಕಾರದಿಂದ ನಿಯಂತ್ರಿಸಲ್ಪಡುವ ಒಂದು ವ್ಯವಸ್ಥೆಯು ನಿರ್ಧರಿಸುತ್ತದೆ ಮತ್ತು ಅದು ಯಾವುದೇ ಪ್ರಸಕ್ತ ವ್ಯವಹಾರಗಳ ಪ್ರಕಟಣೆಯ ವಿಷಯವು ಲಭ್ಯವಾಗದಂತೆ ನಿರ್ಬಂಧಿಸಬಹುದು ಎಂದು ಮುಂದುವರೆದು ಡಿಜಿಪಬ್ ಹೇಳಿದೆ.

ಒಟ್ಟಾರೆಯಾಗಿ ಹೇಳುವುದಾದರೆ, ಪ್ರಸಕ್ತ ಸುದ್ದಿಗಳು ಮುಂತಾದವುಗಳ ಪೋರ್ಟಲ್ ಡಿಜಿಟಲ್ ಸ್ವರೂಪದಲ್ಲಿ ಲಿಖಿತ ಪತ್ರಿಕೆಯಾಗಿದೆ. 1950 ರ ದಶಕದ ಆರಂಭದಿಂದಲೂ, ಪ್ರೆಸ್ ಕೌನ್ಸಿಲ್(ಪತ್ರಿಕಾ ಮಂಡಳಿ) ಸ್ಥಾಪನೆಯ ಹಿಂದೆ, **ಪುಟ 10 ನೋಡಿ**

ಬೃಹತ್ ಬ್ರಿಗೇಡ್ ರ್‍ಯಾಲಿಯೊಂದಿಗೆ ಬಂಗಾಲದಲ್ಲಿ 'ಸಂಯುಕ್ತ ಮೋರ್ಚಾ'

ಫೆಬ್ರುವರಿ 28 ರಂದು ಕೊಲ್ಕತಾದ ಸುಡುಬಿಸಿಲನ್ನೂ ಲೆಕ್ಕಿಸದೆ ಹತ್ತು ಲಕ್ಷಕ್ಕೂ ಹೆಚ್ಚು ಜನ ಬ್ರಿಗೇಡ್ ಮೈದಾನಕ್ಕೆ ಪ್ರವಾಹದಂತೆ ಹರಿದು ಬಂದರು, ಅಭೂತಪೂರ್ವ ದೃಢಸಂಕಲ್ಪ ಮತ್ತು ಉತ್ಸಾಹವನ್ನು ಪ್ರದರ್ಶಿಸಿದರು. ಪಶ್ಚಿಮ ಬಂಗಾಲದಲ್ಲಿ ಮುಂಬರುವ ವಿಧಾನಸಭಾ ಚುನಾವಣೆಗಳು ಟಿಎಂಸಿ ಮತ್ತು ಬಿಜೆಪಿಯ ನಡುವಣ ಹೋರಾಟವಾಗಿರುತ್ತದೆ ಎಂದು ಬಂಟ ಮಾಧ್ಯಮಗಳಲ್ಲಿ ಬಹಳ ಜಾಗರೂಕತೆಯಿಂದ ನಿರ್ಮಿಸಿರುವ ಕಥನವನ್ನು ಬುಡಮೇಲುಗೊಳಿಸಿದರು. ಎಡ ಮತ್ತು ಜಾತ್ಯತೀತ ಪಕ್ಷಗಳು ರಾಜ್ಯದಲ್ಲಿ 'ಸಂಯುಕ್ತ ಮೋರ್ಚಾ'ದ ಜನನವನ್ನು ಘೋಷಿಸುತ್ತ ಪಶ್ಚಿಮ ಬಂಗಾಲದ ರಾಜಕೀಯ ಬಲಾಬಲದಲ್ಲಿ ಬದಲಾವಣೆ ತರಬೇಕೆಂದು ಆಹ್ವಾನ ನೀಡಿದರು. ಜನಸಾಗರವನ್ನು ಉದ್ದೇಶಿಸಿ ಮಾತಾಡುತ್ತ ಎಡಪಕ್ಷಗಳು, ಕಾಂಗ್ರೆಸ್ ಮತ್ತು ಐಎಸ್‌ಎಫ್‌ನ ಮುಖಂಡರು ಇದು ಈಗ ಅಧಿಕಾರದಲ್ಲಿರುವ ಭ್ರಷ್ಟ ಪಕ್ಷವನ್ನು ಅಧಿಕಾರದಿಂದ ಇಳಿಸುವ ಮತ್ತು ಕೋಮುವಾದಿ, ವಿಭಜನಕಾರೀ ಬಿಜೆಪಿಯನ್ನು ಅಧಿಕಾರದಿಂದ ದೂರವಿಡುವ ಹೋರಾಟ ಎಂದು ಸಾರಿದರು. ಈ ಮೈತ್ರಿಕೂಟ ಜನರ ಮುಂದೆ ಜನಪರವಾದ ಪರ್ಯಾಯ ಧೋರಣೆಗಳನ್ನು ಇಡುತ್ತದೆ ಎಂದು ಭರವಸೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಎಡರಂಗದ ಅಧ್ಯಕ್ಷ ಬಿಮಾನ್ ಬಸು ಇದು ಬ್ರಿಗೇಡ್ ಮೈದಾನದಲ್ಲಿ ದಾಖಲೆ ನಿರ್ಮಿಸಿರುವ ರ್‍ಯಾಲಿ ಎಂದು ಹೇಳಿದರು.

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಬಿಜೆಪಿ–ಆರೆಸ್ಸೆಸ್‌ನ ಕೋಮುವಾದಿ ರಥವನ್ನು ತಡೆದು ನಿಲ್ಲಿಸಬೇಕಾದರೆ ಪಶ್ಚಿಮ ಬಂಗಾಲದಲ್ಲಿ ಟಿಎಂಸಿಯನ್ನೂ ಸೋಲಿಸಬೇಕಾಗಿದೆ, ಪಶ್ಚಿಮ ಬಂಗಾಲದಲ್ಲಿ ಕೋಮುವಾದಿ ರಥವನ್ನು ತಡೆದು ನಿಲ್ಲಿಸಿದರೆ ದೇಶದಲ್ಲಿಯೂ ಅದನ್ನು ತಡೆಯಲು ಸಾಧ್ಯವಾಗುತ್ತದೆ ಎಂದು ಹೇಳಿದರು. ದಿಲ್ಲಿಯ ಗಡಿಗಳಲ್ಲಿ ರೈತರ ಸಂಯುಕ್ತ ಕಿಸಾನ್ ಮೋರ್ಚಾ ಮೋದಿ ಸರಕಾರಕ್ಕೆ ಸವಾಲು ಹಾಕಿರುವಂತೆ ಪಶ್ಚಿಮ ಬಂಗಾಲದ ಈ ಸಂಯುಕ್ತ ಮೋರ್ಚಾ ಬಿಜೆಪಿ ಮತ್ತು ಟಿಎಂಸಿ ಎರಡನ್ನೂ ಯಶಸ್ವಿಯಾಗಿ ಎದುರಿಸುತ್ತದೆ ಎಂದು ಅವರು ಹೇಳಿದರು. ಚುನಾವಣಾ ಬಾಂಡುಗಳ ಮೂಲಕ ಅಪಾರ ಹಣ ಸಂಗ್ರಹ ಮಾಡಿರುವ ಬಿಜೆಪಿ ರಾಜಕೀಯದಲ್ಲಿ ಕುದುರೆ ವ್ಯಾಪಾರ ನಡೆಸಿ ದೇಶದ ರಾಜಕೀಯದಲ್ಲಿ ಅಪಾರಅವನತಿಯನ್ನು ತಂದಿದೆ. ಟಿಎಂಸಿ ಕೂಡ ನಾರದ–ಶಾರದಂತಹ ಹಗರಣಗಳಲ್ಲಿ ಸಿಲುಕಿದೆ. ಪಶ್ಚಿಮ ಬಂಗಾಲದ ಜನತೆಗೆ ಜನಗಳನ್ನು ಜಾತಿ, ಮತ ಇತ್ಯಾದಿಗಳ ಆಧಾರದಲ್ಲಿ ಒಡೆಯುವ ಸರಕಾರ ಬೇಕಿಲ್ಲ, ಜನಗಳ ಕಲ್ಯಾಣಕ್ಕಾಗಿ ಕೆಲಸ ಮಾಡುವ ಸರಕಾರ ಬೇಕು ಎನ್ನುತ್ತ ಎನ್ನುತ್ತ "ನ ಲೂಟ್ –ಪಾಟ್ ಕಾ ಸರ್ಕಾರ್, ನ ಜಾತ್–ಪಾತ್ ಕಾ ಸರ್ಕಾರ್, ಬಂಗಾಲ್ ಕೇ ಆವಾಮ್ ಕಾ ಪುಕಾರ್, ಜನಹಿತ್ ಕಾ ಸರ್ಕಾರ್"(ಲೂಟಿಕೋರ ಸರಕಾರವೂ ಬೇಡ, ಜಾತಿ–ಮತಗಳ ಸರಕಾರವೂ ಬೇಡ; ಬಂಗಾಲದ ಜನತೆಗೆ ಬೇಕು ಜನಹಿತದ ಸರಕಾರ) ಎಂಬ ಘೋಷಣೆಯನ್ನು ಕೊಟ್ಟರು, ಸಂಯುಕ್ತ ಮೋರ್ಚಾ ಅಂತಹ ಸರಕಾರ ಕೊಡುತ್ತದೆ ಎಂದು ಅವರು ಹೇಳಿದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಸೂರ್ಯಕಾಂತ್ ಮಿಶ್ರ ಮಾತಾಡುತ್ತ ರಾಜಕೀಯ **ಪುಟ 7 ನೋಡಿ**



ಸಂಪಾದಕೀಯ

ಒಂದು ದೇಶ–ಒಂದು ಚುನಾವಣೆ ಸಂಸದೀಯ ಪ್ರಜಾಪ್ರಭುತ್ವಕ್ಕೊಂದು ಬೆದರಿಕೆ

ಪ್ರಧಾನಿ ಮೋದಿಯವರ ನಾಯಕತ್ವದಲ್ಲಿ ದೇಶವು ನಿರಂಕುಶ ಆಳ್ವಿಕೆಯತ್ತ ಹೆಜ್ಜೆ ಹಾಕುತ್ತಿರುವಾಗ ನಮ್ಮ ಸಂಸದೀಯ ಪ್ರಜಾಪ್ರಭುತ್ವವು "ಒಂದು ದೇಶ–ಒಂದು ಚುನಾವಣೆ" ಎಂಬ ಬೆದರಿಕೆಯನ್ನು ಎದುರಿಸುವಂತಾಗಿದೆ. ಈ ಕುರಿತು ದೇಶಾದ್ಯಂತ ಚರ್ಚೆಯನ್ನು ಹುಟ್ಟು ಹಾಕಲಾಗಿದ್ದು ಕರ್ನಾಟಕದಲ್ಲಿ ಈ ಚರ್ಚೆಗೆ ನಾಂದಿ ಹಾಡಲು ಮುಖ್ಯಮಂತ್ರಿ ಯಡಿಯೂರಪ್ಪನವರು ಮುಂದಾಗಿದ್ದಾರೆ. ವಿಧಾನಮಂಡಲದ ಬಜೆಟ್ ಅಧಿವೇಶನ ಮೊದಲ ಎರಡು ದಿನಗಳನ್ನು ಚರ್ಚೆಗಾಗಿ ನಿಗದಿ ಮಾಡಲಾಗಿತ್ತು. ಆದರೆ ಸಂವಿಧಾನ ವಿರೋಧಿ ಚರ್ಚೆಗೆ ಪ್ರತಿಪಕ್ಷಗಳು ಅವಕಾಶ ನೀಡಲಿಲ್ಲ. ಹಾಗಾಗಿ ಕಲಾಪವನ್ನು ಶುಕ್ರವಾರಕ್ಕೆ ಮುಂದೂಡಲಾಯಿತು.

ಬಿಜೆಪಿ ಪಕ್ಷವು 2020ರ ಡಿಸೆಂಬರ್ ತಿಂಗಳ ಕೊನೆಯ ವಾರದಲ್ಲಿ 'ಒಂದು ದೇಶ–ಒಂದು ಚುನಾವಣೆ' ಎಂಬ ವಿಷಯದ ಪ್ರಚಾರಾರ್ಥ 25 ವೆಬಿನಾರ್‌ಗಳನ್ನು ನಡೆಸಿತ್ತು. ಅಂತಹ ಒಂದು ಸಮ್ಮೇಳನವನ್ನು 'ಸಂವಿಧಾನ ದಿನ' ಎಂದು ಆಚರಿಸಲಾಗುತ್ತಿರುವ ನವಂಬರ್ 26ರಂದೇ ನಡೆಸಲಾಗಿತ್ತು. ಈ ಸಮ್ಮೇಳನಗಳ ಮೂಲಕ 'ಒಂದು ದೇಶ–ಒಂದು ಚುನಾವಣೆ'ಯನ್ನು ಪ್ರತಿಪಾದಿಸುವ ವಾದಗಳನ್ನು ವ್ಯವಸ್ಥಿತವಾಗಿ ಪ್ರಚಾರ ಮಾಡಲಾಗುತ್ತದೆ. ಏಕಕಾಲದ ಚುನಾವಣೆಯಿಂದ ಮಾನವಶ್ರಮ, ಸಮಯ, ಭಾರಿ ಮೊತ್ತದ ಹಣ ಉಳಿತಾಯವಾಗುತ್ತದೆ. ಆಗಾಗ್ಗೆ ಚುನಾವಣೆ ನಡೆಯುವುದರಿಂದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗುತ್ತವೆ. ಪ್ರಧಾನಿ ಮೋದಿಯವರು ದೂರದೃಷ್ಟಿ ಚಿಂತನೆಯೊಂದಿಗೆ ಈ ಪ್ರಸ್ತಾವವನ್ನು ಮಾಡಿದ್ದಾರೆ. ಅಖಿಲ ಭಾರತ ಸ್ಪೀಕರ್‌ಗಳ ಸಮ್ಮೇಳನದಲ್ಲಿ ಮೋದಿಯವರು ಈ ಪ್ರಸ್ತಾಪ ಮಾಡಿದ್ದಾರೆ. ಎಂದು ದೇಶಾದ್ಯಂತ ಪ್ರಚಾರ ಮಾಡಲಾಗಿದೆ. ಈ ವಾದಗಳ ಹಿಂದಿನ ಸಂದೇಶ ಸ್ಪಷ್ಟವಾಗಿದೆ. 'ಒಂದು ದೇಶ–ಒಂದು ಚುನಾವಣೆ' ಎಂಬ ಘೋಷಣೆ **'ಒಂದು ದೇಶ ಒಬ್ಬ ನಾಯಕ'** ಎಂಬ ಘೋಷಣೆಯ ಮುಂದುವರೆದ ಭಾಗವಾಗಿದೆ.

ಎಲ್ಲಾ ಹಂತದ ಚುನಾವಣೆಗಳು ಒಟ್ಟಿಗೆ ನಡೆಸುವುದು ಮತ್ತು ಅದಕ್ಕಾಗಿ ಸಂವಿಧಾನವನ್ನು ತಿದ್ದುಪಡಿ ಮಾಡುವುದು ನಮ್ಮ ಸಂಸದೀಯ ಪ್ರಜಾಪ್ರಭುತ್ವದ ಮೂಲ ಸ್ವರೂಪವನ್ನು ತಿರುಚುವುದು ಮಾತ್ರವಲ್ಲ ನಮ್ಮ ದೇಶದ ಒಕ್ಕೂಟ ವ್ಯವಸ್ಥೆಯನ್ನು ನಾಶ ಮಾಡುವುದು. ಲೋಕ ಸಭಾ ಮತ್ತು ರಾಜ್ಯ ವಿಧಾನ ಸಭಾ ಚುನಾವಣೆಗಳನ್ನು ಒಟ್ಟಿಗೆ ನಡೆಸುವುದೆಂದರೆ ಸರ್ಕಾರವು ಶಾಸಕಾಂಗಕ್ಕೆ ಹೊಂದಿರಬೇಕಾದ ಉತ್ತರದಾಯಕತ್ವಕ್ಕೆ ಧಕ್ಕೆಯಾಗುವುದು. ಸಂವಿಧಾನದ ಪ್ರಕಾರ ಒಂದು ಸರ್ಕಾರ ಅವಿಶ್ವಾಸ ನಿರ್ಣಯದ ಮೂಲಕ ಅಧಿಕಾರ ಕಳೆದುಕೊಂಡಾಗ ಅಥವ ಹಣಕಾಸು ಮಸೂದೆಗೆ ಅಗತ್ಯ ಬಹುಮತ ದೊರೆಯದಿದ್ದಾಗ ಅದು ರಾಜಿನಾಮೆ ಕೊಡಬೇಕಾಗುತ್ತದೆ ಅಥವ ಪರ್ಯಾಯ ಸರ್ಕಾರ ರಚನೆ ಸಾಧ್ಯವಾಗದಾಗ ಸರ್ಕಾರ ವಿಸರ್ಜನೆಯಾಗುತ್ತದೆ ಮತ್ತು ಮಧ್ಯಂತರ ಚುನಾವಣೆ ನಡೆಯುತ್ತದೆ. ಸಂವಿಧಾನದಲ್ಲಿ ಲೋಕಸಭೆಗಾಗಲಿ ಅಥವ ರಾಜ್ಯ ವಿಧಾನಸಭೆಗಾಗಲಿ ಅಧಿಕಾರವಧಿ ನಿಗದಿಯಾಗಿರುವುದಿಲ್ಲ.

ನೀತಿ ಆಯೋಗ 2017ರಲ್ಲಿ ಮತ್ತು ಕಾನೂನು ಆಯೋಗ 2018ರಲ್ಲಿ ಕೆಲವು ಸೂಚನೆಗಳನ್ನು ಬಿಡುಗಡೆ ಮಾಡಿವೆ. ಅವುಗಳು ರಾಜ್ಯ ವಿಧಾನಸಭೆಗಳ ಅವಧಿಯನ್ನು ಹೆಚ್ಚಿಸುವ ಅಥವ ಕಡಿತ ಮಾಡುವ ಮೂಲಕ ವಿಧಾನಸಭಾ ಚುನಾವಣೆಗಳು, ಲೋಕಸಭಾ ಚುನಾವಣೆಗಳ ಜೊತೆಯಲ್ಲಿ ನಡೆಸುವ ಉದ್ದೇಶ ಹೊಂದಿವೆ. ಆದರೆ ರಾಜ್ಯ ವಿಧಾನಸಭೆಗಳ ಅವಧಿಯನ್ನು ಕಡಿಮೆ ಮಾಡುವುದಾಗಲಿ, ಹೆಚ್ಚು ಮಾಡುವುದಾಗಲಿ ಎರಡೂ ಪ್ರಜಾಪ್ರಭುತ್ವ ವಿರೋಧಿಯಾಗಿದೆ. ಮಾತ್ರವಲ್ಲ ತಮ್ಮ ಶಾಸಕರನ್ನು ಆಯ್ಕೆ ಮಾಡುವ ಜನರ ಹಕ್ಕಿನ ಉಲ್ಲಂಘನೆಯಾಗಿದೆ.

ವಿಧಾನಸಭೆಯ ಮಧ್ಯಂತರ ವಿಸರ್ಜನೆಯನ್ನು ತಡೆಯಲು ಮತ್ತೆ ಚುನಾವಣೆ ನಡೆಸುವುದನ್ನು ತಡೆಯಲು ಅವಧಿಯನ್ನು ನಿಗದಿ ಮಾಡಲು ಉದ್ದೇಶಿಸಲಾಗಿದೆ. ಇದು ಅಪಾಯಕಾರಿಯಾಗಿದೆ. ಲೋಕಸಭೆಯ ವಿಸರ್ಜನೆ ತಡೆಯಲು ಸಾಧ್ಯವಾಗದಿದ್ದರೆ ರಾಷ್ಟ್ರಪತಿಯವರು ನೇಮಿಸುವ ಮಂತ್ರಿಮಂಡಲದ ನೆರವಿನೊಂದಿಗೆ ಅವರು ದೇಶದ ಆಡಳಿತ ನಡೆಸಬಹುದು ಎಂದು ನೀತಿ ಆಯೋಗವು ನೀಡುವ ಸಲಹೆಯಾಗಿದೆ. ಇದರಿಂದಾಗಿ ಕಾರ್ಯಾಂಗದ ಮುಖ್ಯಸ್ಥರನ್ನು ಹಿಂಬಾಗಿಲಿನಿಂದ ದೇಶದ ಆಡಳಿತ ನಡೆಸಲು ಅವಕಾಶ ನೀಡಿದಂತಾಗುವುದು.

ಅವಧಿಯನ್ನು ನಿಗದಿಪಡಿಸಲು ಅವಕಾಶ ನೀಡಿದರೆ ಬಹುಮತ ಹೊಂದಿರುವ ಆಡಳಿತ ಪಕ್ಷವು ಸರ್ಕಾರವನ್ನು ವಿಸರ್ಜಿಸಿ ತುರ್ತು ಚುನಾವಣೆಗಳನ್ನು ನಡೆಸುವಂತಿಲ್ಲ. ಲೋಕಸಭೆಯಲ್ಲಿ ಅವಿಶ್ವಾಸ ಗೊತ್ತುವಳಿಯನ್ನು ಮಂಡಿಸಿದರೆ ಪರ್ಯಾಯ ಸರ್ಕಾರ ನಡೆಸಲು ಹೊಸ ನಾಯಕನನ್ನು ಸೂಚಿಸಲೇಬೇಕೆಂದು ಕಾನೂನು ಆಯೋಗ ಹೇಳುತ್ತದೆ. ಇದರ ಅರ್ಥ, ಒಂದು ಸರ್ಕಾರ ವಿಸರ್ಜನೆಯಾದರೂ, ಒಂದು ಪರ್ಯಾಯ ಸರ್ಕಾರ ಇರಲೇಬೇಕು, ಅದು ಜನರ ಪ್ರಾತಿನಿಧ್ಯವನ್ನು ಹೊಂದಿರದಿದ್ದರೂ. ಹೀಗೆ ಚುನಾವಣೆಗಳನ್ನು ಒಟ್ಟೊಟ್ಟಿಗೆ ನಡೆಸಲು ಸಾಧ್ಯವಾಗಬೇಕಾದರೆ ಸಂವಿಧಾನದ ಹಲವು ಕಲಂಗಳನ್ನು ತಿದ್ದುಪಡಿ ಮಾಡಬೇಕಾಗುತ್ತದೆ. 'ಒಂದು ದೇಶ–ಒಂದು ಚುನಾವಣೆ' ಎಂಬ ಪ್ರಸ್ತಾವವನ್ನು ಬಿಜೆಪಿ 2014ರ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಪ್ರಸ್ತಾಪಿಸುತ್ತಾ ಬಂದಿದೆ. ಎಲ್ಲಾ ಪ್ರಜಾಪ್ರಭುತ್ವ ವಾದಿ ರಾಜಕೀಯ ಪಕ್ಷಗಳು ಬಿಜೆಪಿಯ ಕುತಂತ್ರವನ್ನು ಎಚ್ಚರದಿಂದ ಗಮನಿಸಬೇಕು. ಈ ಕರಾಳ, ಪ್ರಜಾಪ್ರಭುತ್ವ ವಿರೋಧಿ ಹುನ್ನಾರಗಳನ್ನು ಎದುರಿಸಿ ಹಿಮ್ಮೆಟ್ಟಿಸಬೇಕು. ಸಂಸದೀಯ ಪ್ರಜಾಪ್ರಭುತ್ವವನ್ನು ಕಾಪಾಡಬೇಕು. ಬಿಜೆಪಿ ಸರ್ಕಾರದ ಸರ್ವಾಧಿಕಾರಿ ಕ್ರಮಗಳನ್ನು ನಿರ್ಮೂಲನೆ ಮಾಡಬೇಕು. "ಒಂದು ದೇಶ, ಒಂದು ಚುನಾವಣೆ" ದೇಶವನ್ನು ಸರ್ವಾಧಿಕಾರದತ್ತ ದೂಡುತ್ತಿದ್ದು ಇದನ್ನು ತಡೆಯಲೇಬೇಕು.

ಬಿಬಿಎಂಪಿ ಕಸ ನಿರ್ವಹಣೆಗೆ ಪ್ರತ್ಯೇಕ ಕಂಪನಿ ಜನರ ದೋಚುವ ನಯವಂಚಕ ಕ್ರಮ: ಸಿಪಿಐ(ಎಂ)

ಬಿಜೆಪಿ ರಾಜ್ಯ ಸರ್ಕಾರವು ಬಿಬಿಎಂಪಿ ಕಸ ನಿರ್ವಹಣೆಗೆ ಪ್ರತ್ಯೇಕ ಕಂಪನಿ ಸ್ಥಾಪಿಸಲು ಕೈಗೊಂಡಿರುವ ತೀರ್ಮಾನವು ಮಹಾನಗರದ ಜನತೆಯನ್ನು ಕಸ ನಿರ್ವಹಣೆ ಬಳಕೆದಾರರ ಶುಲ್ಕದ ಹೆಸರಿನಲ್ಲಿ ದೋಚಲು ಮಾಡಿರುವ ನಯವಂಚಕ ಕ್ರಮವಾಗಿದೆ ಎಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿಗಳು ಖಂಡಿಸಿವೆ.

ಮಹಾನಗರ ಪಾಲಿಕೆಯ ಪ್ರಧಾನ ಹಾಗು ಮೂಲ ಕೆಲಸವೇ ಕಸ ನಿರ್ವಹಣೆ ಮುಂತಾದ ನಾಗರೀಕ ಸೌಲಭ್ಯಗಳನ್ನು ಒದಗಿಸುವುದಾಗಿದೆ. ಅಂತೆಯೇ ಈ ಎಲ್ಲಾ ಸ್ಥಳೀಯ ಆಡಳಿತದಲ್ಲಿ ನಾಗರೀಕರನ್ನು ಒಳಗೊಂಡು ಮಹಾನಗರದ ನಿರ್ವಹಣೆಯನ್ನು ಪ್ರಜಾಪ್ರಭುತ್ವೀಯ ರೀತಿಯಲ್ಲಿ ನಿರ್ವಹಿಸುವುದಾಗಿದೆ. ಆದರೆ ರಾಜ್ಯ ಬಿಜೆಪಿ ಸರ್ಕಾರವು ಬಿಬಿಎಂಪಿಗೆ ಪ್ರತ್ಯೇಕ ಕಾಯ್ದೆ ರೂಪಿಸಿ ಅದರಲ್ಲಿ ಮತ್ತು ಇತ್ತೀಚೆಗೆ ಬಿಡುಗಡೆ ಮಾಡಿರುವ ಬೆಂಗಳೂರು ಮಿಷನ್ 2022 ರಲ್ಲಿ ಸ್ವಚ್ಛ ಬೆಂಗಳೂರು ಉಪಕ್ರಮದಲ್ಲಿ ಕಸ ನಿರ್ವಹಣೆಗೆ ಪ್ರತ್ಯೇಕ ಸಾಂಸ್ಥಿಕ ರೂಪ ನೀಡುವ ಪ್ರಸ್ತಾಪದಂತೆ ಸದರಿ ಕಂಪನಿಯ ಸ್ಥಾಪನೆಗೆ ಸರ್ಕಾರ ಮುಂದಾಗಿದೆ. ಕಸ ನಿರ್ವಹಣೆ ಬಳಕೆದಾರರ ಶುಲ್ಕದ ಪ್ರಸ್ತಾಪ ಕೂಡ ಈ ಹಿನ್ನೆಲೆಯಲ್ಲೆ ತರಲಾಗಿತ್ತುಆ ಪ್ರಸ್ತಾಪಗಳು ಬಂದಾಗಲೆ ಸಿಪಿಐ(ಎಂ) ಮತ್ತಿತರರು ಅದನ್ನು ವಿರೋಧಿಸಿ ಪ್ರತಿಭಟಿಸಿದ್ದೆವು. ಆದ ಕಾರಣ ಕಸ ನಿರ್ವಹಣೆ ಬಳಕೆದಾರರ ಶುಲ್ಕದ ಪ್ರಸ್ತಾವನೆ ಮುಂದೂಡಲಾಗಿತ್ತು. ಇದೀಗ ಪ್ರತ್ಯೇಕ ಕಂಪನಿ ಸ್ಥಾಪನೆ ಹೆಸರಲ್ಲಿ ಆ ಅಂಶಗಳನ್ನು ಪರೋಕ್ಷವಾಗಿ ಜಾರಿಗೆ ತರಲಾಗುತ್ತಿದೆ ಎಂದು ಸಿಪಿಐ(ಎಂ) ಪ್ರತ್ಯೇಕ ಕಂಪನಿ ಸ್ಥಾಪನೆಯನ್ನು ವಿರೋಧಿಸಿದೆ.

ವಾರ್ಷಿಕ ರೂ.940 ಕೋಟಿ ರೂಪಾಯಿ ವ್ಯವಹಾರದ ಬಿಬಿಎಂಪಿ ಕಸ ನಿರ್ವಹಣೆಗೆ ಪ್ರತ್ಯೇಕ ಕಂಪನಿ ಸ್ಥಾಪಿಸುವ ಮೂಲಕ ಆರಂಭದಲ್ಲಿ ಸರ್ಕಾರದ ಕಂಪನಿ ಎಂದು ಬಿಂಬಿಸಿ ನಿಧಾನಕ್ಕೆ ಅದನ್ನು ಖಾಸಗಿ ಕಾರ್ಪೋರೇಟ್ ಗಳಿಗೆ ವಹಿಸಿ ಜನರ ಸುಲಿಗೆಗೆ ಅನುವುಗೊಳಿಸುವ ಹುನ್ನಾರ ರಾಜ್ಯ ಸರ್ಕಾರದಾಗಿದೆ. ಗುತ್ತಿಗೆ ಕಾರ್ಮಿಕರು ಇರುವುದಿಲ್ಲ ಎಂಬ ಅಂಶವು ಹಾಲಿ 25 ಸಾವಿರ ಬಿಬಿಎಂಪಿ ಗುತ್ತಿಗೆ ಮುನ್ಸಿಪಲ್ ಕಾರ್ಮಿಕರ ಬದುಕನ್ನು ಕಸಿಯಲಿದೆ ಎಂದು ಸಿಪಿಐ(ಎಂ) ಪ್ರತ್ಯೇಕ ಕಂಪನಿ ಸ್ಥಾಪನೆಯನ್ನು ವಿರೋಧಿಸಿದೆ.

'ಎಂಎಸ್‌ಪಿ ಕೊಡಿಸಿ ರಾಷ್ಟ್ರೀಯ ಆಂದೋಲನ' ಆರಂಭ

ದಿಲ್ಲಿ ರೈತರ ಹೋರಾಟದ ಹಿನ್ನೆಲೆಯಲ್ಲಿ ಇಡೀ ರಾಷ್ಟ್ರ ಮತ್ತು ಸಂಸತ್ತ್‌ನಲ್ಲಿ ನಡೆದ ಚರ್ಚೆಗಳಿಗೆ ಉತ್ತರ ನೀಡಿದ ಪ್ರಧಾನ ಮಂತ್ರಿಗಳು, 'ಕನಿಷ್ಠ ಬೆಂಬಲ ಬೆಲೆ' "ಈ ಹಿಂದೆಯೂ ಇತ್ತು, ಈಗಲೂ ಇದೆ ಮತ್ತು ಮುಂದಿನ ದಿನಗಳಲ್ಲಿ ಇರುತ್ತೆ" ಎಂದು ಉತ್ತರಿಸಿದ ಹಿನ್ನೆಲೆಯಲ್ಲಿ ದೇಶಾದ್ಯಂತ 'ಕನಿಷ್ಠ ಬೆಂಬಲ ಬೆಲೆ ಕೊಡಿಸಿ' ಆಂದೋಲನವನ್ನು ಸಂಘಟಿಸುವುದರ ಮೂಲಕ 'ಕನಿಷ್ಠ ಬೆಂಬಲ ಬೆಲೆ'ಯ ವಾಸ್ತವ ಚಿತ್ರಣವನ್ನು ದೇಶದ ಜನತೆಯ ಮುಂದೆ ಇಡಲು ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ರಾಷ್ಟ್ರೀಯ ಸಮಿತಿ ನಿರ್ಧರಿಸಿದೆ.

ಈ ರಾಷ್ಟ್ರೀಯ ಆಂದೋಲನದ ಉದ್ಘಾಟನೆಯನ್ನು ಮಾರ್ಚ್ 5, 2021 ರಂದು ರಾಜ್ಯದ ಗುಲ್ಬರ್ಗಾದಲ್ಲಿ ನಡೆಯಲಿದ್ದು, ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ)ದ ರಾಷ್ಟ್ರೀಯ ನಾಯಕರಾದ ಶ್ರೀ ಯೋಗೇಂದ್ರ ಯಾದವ್ ರವರು ಉದ್ಘಾಟನೆ ಮಾಡಲಿದ್ದಾರೆ. ಮಾರ್ಚ್ 5, 2021 ರಂದು ರಾಜ್ಯದ ಗುಲ್ಬರ್ಗಾದಲ್ಲಿ ಉದ್ಘಾಟನೆಗೊಳ್ಳುವ ಈ ಆಂದೋಲನ ಮಾರ್ಚ್ 6, 2021 ರಂದು ಬಳ್ಳಾರಿ ಮತ್ತು ಮಾರ್ಚ್ 7, 2021 ರಂದು ಬೆಂಗಳೂರಿನಲ್ಲಿ ನಡೆಸಿ, ಆಂದ್ರ ಪ್ರದೇಶ, ತೆಲಂಗಾಣ ಇತ್ಯಾದಿ ರಾಜ್ಯಗಳಲ್ಲಿ ಮುಂದುವರಿಸಲಾಗುವುದು.

ರಾಜ್ಯದಲ್ಲಿ 'ಕನಿಷ್ಠ ಬೆಂಬಲ ಬೆಲೆ ಕೊಡಿಸಿ' ರಾಷ್ಟ್ರೀಯ ಆಂದೋಲನವನ್ನು 'ಸಂಯುಕ್ತ ಹೋರಾಟ–ಕರ್ನಾಟಕ' ಸಂಘಟಿಸಿದ್ದು, ರಾಜ್ಯದ ರೈತರು ಈ ಆಂದೋಲನವನ್ನು ಯಶಸ್ವಿಗೊಳಿಸಬೇಕೆಂದು 'ಸಂಯುಕ್ತ ಹೋರಾಟ–ಕರ್ನಾಟಕ' ವಿನಂತಿಸುತ್ತದೆ.

ಕೇಂದ್ರ ಸರ್ಕಾರದ ಮೂರು ಕೃಷಿ ಕಾಯ್ದೆಗಳ ಹಿನ್ನೆಲೆಯಲ್ಲಿ ಡಾ|| ಎಂ.ಎಸ್. ಸ್ವಾಮಿನಾಥನ್ ವರದಿಯನ್ವಯ ಎಲ್ಲಾ ಕೃಷಿ ಉತ್ಪನ್ನಗಳಿಗೆ 'ಕನಿಷ್ಠ ಬೆಂಬಲ ಬೆಲೆ'ಯನ್ನು ಖಾತರಿ ಮಾಡುವ ಕಾನೂನನ್ನು ರೂಪಿಸಬೇಕೆಂದು ಇಡೀ ದೇಶ ಹಾಗು ಮೂರು ತಿಂಗಳುಗಳಿಂದ ದಿಲ್ಲಿಯ ಗಡಿಗಳಲ್ಲಿ ಹೋರಾಟ ನಡೆಸುತ್ತಿರುವ ಲಕ್ಷಾಂತರ ರೈತರ ಪ್ರಮುಖ ಬೇಡಿಕೆಯಾಗಿದೆ.

ಈ ಚರ್ಚೆಗಳ ಹಿನ್ನೆಲೆಯಲ್ಲಿ ಈ ಬಗ್ಗೆ ಗಂಭೀರವಾಗಿ ಪ್ರತಿಕ್ರಿಯಿಸುವ ಜವಾಬ್ದಾರಿ ಇದ್ದ ಪ್ರಧಾನ ಮಂತ್ರಿಗಳು ತೀರಾ ಉಡಾಫೆಯಾಗಿ ಉತ್ತರವನ್ನು ನೀಡಿದ್ದಾರೆ. ತಾವು ಪ್ರಧಾನ ಮಂತ್ರಿಗಳು ಆಗುವ ಮುಂಚಿನ ಲೋಕಸಭಾ ಚುನಾವಣೆಗಳ ಸಂದರ್ಭದ ನೂರಾರು ಬಹಿರಂಗ ಸಭೆಗಳಲ್ಲಿ ಡಾ|| ಎಂ.ಎಸ್. ಸ್ವಾಮಿನಾಥನ್ ವರದಿಯನ್ನು ಜಾರಿ ಮಾಡುವುದಾಗಿ ಭರವಸೆ ನೀಡಿ, ಆ ನಂತರ ಅಧಿಕಾರಕ್ಕೆ ಬಂದ ಕೆಲವೇ ತಿಂಗಳುಗಳಲ್ಲಿ ಇದನ್ನು ಜಾರಿ ಮಾಡಲು ಸಾಧ್ಯವಿಲ್ಲವೆಂದು ನ್ಯಾಯಾಲಯಕ್ಕೆ ಪ್ರಮಾಣ ಪತ್ರವನ್ನು ಸಲ್ಲಿಸಿದನ್ನು ಮರೆಮಾಚಿ ಈಗ ಕಳೆದ ಆರು ವರ್ಷಗಳಲ್ಲಿ 'ಕನಿಷ್ಠ ಬೆಂಬಲ ಬೆಲೆ'

ಪುಟ 4 ಕ್ಕೆ

ಶಿವಮೊಗ್ಗ–ಕರಾವಳಿ ಪ್ರಾದೇಶಿಕ ಜಾಥಾ

ವರದಿ: ವಾ.ಉ.

ರೈತ, ಕಾರ್ಮಿಕ, ಕೃಷಿಕೂಲಿಕಾರ ವರ್ಗ ಸಂಘಟನೆಗಳೊಂದಿಗೆ ಮಹಿಳಾ, ಯುವಜನ, ವಿದ್ಯಾರ್ಥಿ ಸಾಮೂಹಿಕ ಸಂಘಟನೆಗಳು ಕರ್ನಾಟಕ ರಾಜ್ಯದಲ್ಲಿ ಕಳೆದ ಜನವರಿ ತಿಂಗಳ ಅಂತ್ಯದಲ್ಲಿ ಹಮ್ಮಿಕೊಂಡಿದ್ದ 7 ಪ್ರಚಾರ ಜಾಥಾಗಳಲ್ಲಿ ಒಂದು ಶಿವಮೊಗ್ಗ–ಕರಾವಳಿ ಪ್ರಾದೇಶಿಕ ಜಾಥಾ. ಜನವರಿ 24 ರಂದು ಶಿವಮೊಗ್ಗದಲ್ಲಿ ಉದ್ಘಾಟನೆಗೊಂಡು, ಶಿವಮೊಗ್ಗ ಜಿಲ್ಲೆಯಲ್ಲಿ ಒಂದು ದಿನ, ಉ.ಕನ್ನಡದಲ್ಲಿ 2 ದಿನ, ಉಡುಪಿ ಜಿಲ್ಲೆಯಲ್ಲಿ 2 ದಿನ ಸಾಗಿ ಜನವರಿ 29 ರಂದು ದ.ಕ.ಜಿಲ್ಲೆಯ ತೊಕ್ಕೊಟ್ಟಿನಲ್ಲಿ ಸಮಾರೋಪಗೊಂಡಿತು. ರೈತರು, ಕಾರ್ಮಿಕರ ಹಕ್ಕುಗಳ ಉಳಿವಿಗಾಗಿ ಕರೆಕೊಟ್ಟ ಈ ಜಾಥಾಕ್ಕೆ ಎಲ್ಲಾ 4 ಜಿಲ್ಲೆಗಳಲ್ಲಿಯೂ ಉತ್ತಮ ಸ್ಪಂದನ ದೊರಕಿತು.

ಶಿವಮೊಗ್ಗ, ಭದ್ರಾವತಿ, ಸಿದ್ದಾಪುರ, ದಾಂಡೇಲಿ, ಅಂಕೋಲ, ಹೊನ್ನಾವರ, ಭಟ್ಕಳಗ 3 ದಿನ ಸಾಗಿ, ಜನವರಿ 27 ರಂದು ಉಡುಪಿ ಜಿಲ್ಲೆಗೆ ತಲುಪಿತು. ಉಡುಪಿ ಜಿಲ್ಲೆಯ ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿಗಳಲ್ಲಿ ಮುಂದುವರಿದು ಕೊನೆಯ ದಿನ ಜನವರಿ 29 ರಂದು ದ.ಕ.ಜಿಲ್ಲೆಯ ಮೂಡಬಿದ್ರಿ ಬಳಿಕ ತೊಕ್ಕೊಟ್ಟು ತಲುಪಿತು. ಪ್ರಾಂತ ಕೃಷಿಕೂಲಿಕಾರರ ಸಂಘದ ಉಡುಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ್ ಕೋಣಿ ಜಾಥಾದ ಪ್ರಧಾನ ಸಂಚಾಲಕರಾಗಿದ್ದರು. ಆಯಾ ಜಿಲ್ಲೆಗಳ ರೈತ, ಕಾರ್ಮಿಕ ಮುಖಂಡರು ತಮ್ಮ ಜಿಲ್ಲೆಯಲ್ಲಿ ಜಾಥಾ ಸಾಗಲು ನೇತೃತ್ವ ವಹಿಸಿದ್ದರು. ಸಿಐಟಿಯು ರಾಜ್ಯ ಸಮಿತಿ ಮುಖಂಡರಾಗಿರುವ ಉಡುಪಿ ಬಾಲಕೃಷ್ಣ ಶೆಟ್ಟಿ, ವಸಂತ ಆಚಾರಿ ಹಾಗೂ ಆದಿವಾಸಿ ಹಕ್ಕುಗಳ ಉಡುಪಿ ಜಿಲ್ಲಾ ಮುಖಂಡರಾದ ಶ್ರೀಧರ ನಾಡ ಜಾಥಾ ನಿರ್ವಹಣೆಯಲ್ಲಿ ಪ್ರಧಾನ ಪಾತ್ರ ವಹಿಸಿದ್ದರು.

ತೊಕ್ಕೊಟ್ಟು ಬಸ್ ನಿಲ್ದಾಣದಲ್ಲಿ ನಡೆದ ಸಮಾರೋಪ ಸಮಾರಂಭ ವಿಶಿಷ್ಟವಾಗಿತ್ತು. ಮೂಡಬಿದ್ರಿಯಿಂದ ಮಂಗಳೂರಿಗೆ ಜಾಥಾ ಬರುವ ದಾರಿಯಲ್ಲಿಯೇ ಮಂಗಳೂರಿನ ಹೊರವಲಯದಲ್ಲಿ ವಾಮಂಜೂರು, ಪಂಪ್‌ವೆಲ್, ಜಪ್ಪಿನಮೊಗರುಗಳಲ್ಲಿ ಡಿವೈಎಫ್‌ಐ ಕಾರ್ಯಕರ್ತರು ಜಾಥಾಕ್ಕೆ ಭರ್ಜರಿ ಸ್ವಾಗತ ನೀಡಿ 50 ಕ್ಕೂ ಮೀರಿದ ಬೈಕುಗಳ ರ್‍ಯಾಲಿ ನಡೆಸಿ ಜಾಥಾವನ್ನು ಕರೆದೊಯ್ದರು. ಜಪ್ಪಿನಮೊಗರಿನಲ್ಲಿ ಬೀಡಿ ಕಾರ್ಮಿಕ ಮಹಿಳೆಯರ ದೊಡ್ಡ ದಂಡೇ ಜಾಥಾವನ್ನು ಸ್ವಾಗತಿಸಿತು. ತೊಕ್ಕೋಟಿನ ಸಮಾರೋಪ ಸಮಾರಂಭದಲ್ಲಿ 300ಕ್ಕೂ ಮೀರಿ ಜನ ಭಾಗವಹಿಸಿದ್ದರು. ಸಮಾರೋಪ ಸಮಾರಂಭವನ್ನು ಉದ್ದೇಶಿಸಿ ಜಾಥಾ ನಾಯಕರಾದ ವೆಂಕಟೇಶ್ ಕೋಣಿ, ಉಡುಪಿ ಬಾಲಕೃಷ್ಣ ಶೆಟ್ಟಿ ಹಾಗೂ ಡಿವೈಎಫ್‌ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಮಾತನಾಡಿದರು. ಸಿಐಟಿಯು ದ.ಕ.ಜಿಲ್ಲಾ ಉಪಾಧ್ಯಕ್ಷೆ ಪದ್ಮಾವತಿ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಈ ಸಮಾರಂಭದಲ್ಲಿ ಸಿಐಟಿಯು ದ.ಕ.ಜಿಲ್ಲಾ ಮುಖಂಡರಾದ ವಸಂತ ಆಚಾರಿ, ಜೆ.ಬಾಲಕೃಷ್ಣ ಶೆಟ್ಟಿ, ಜಯಂತ ನಾಯಕ್, ಪ್ರಾಂತ ರೈತ ಸಂಘದ ಮುಖಂಡರಾದ ಯಾದವ ಶೆಟ್ಟಿ, ಕೃಷ್ಣಪ್ಪ ಸಾಲ್ಯಾನ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಈ ಜಾಥಾದಲ್ಲಿ ದೇಶದ ಹಲವು ಸಮಸ್ಯೆಗಳನ್ನು ಪ್ರಸ್ತಾಪಿಸಿದ್ದರೂ, ಕೇಂದ್ರ ಸರಕಾರ ಜಾರಿ ಮಾಡಿದ 3 ಕೃಷಿ ಕಾಯ್ದೆಗಳು ಇಡೀ ರೈತ ವಿಭಾಗಕ್ಕೆ ದೇಶದ ಆಹಾರ ಭದ್ರತೆಗೆ ಅಪಾಯಕಾರಿಯಾಗಿವೆ ಎಂಬ ಅಂಶದ ಬಗ್ಗೆ ಹೆಚ್ಚು ಒತ್ತು ಕೊಟ್ಟು ಜಾಥಾದ ಭಾಷಣಕಾರರು ಮಾತನಾಡಿದರು.



ಸಾಮಾಜಿಕ ನ್ಯಾಯ ಕಲ್ಪಿಸಲು ಖಾಸಗಿ ಕ್ಷೇತ್ರದಲ್ಲೂ ಮೀಸಲಾತಿ ಅನಿವಾರ್ಯ: ದಿನೇಶ್ ಅಮೀನ್ ಮಟ್ಟು

ಸರಕಾರವೇ ಖಾಸಗೀಕರಣಗೊಳ್ಳುತ್ತಿರುವ ಪ್ರಸಕ್ತ ಸಂದರ್ಭದಲ್ಲಿ ಸಾಮಾಜಿಕ ನ್ಯಾಯ ಕಲ್ಪಿಸಲು ಖಾಸಗಿ ಕ್ಷೇತ್ರದಲ್ಲೂ ಮೀಸಲಾತಿ ನೀಡುವುದು ಅನಿವಾರ್ಯ ಎಂದು ಹಿರಿಯ ಪತ್ರಕರ್ತ ದಿನೇಶ್ ಅಮೀನ್ ಮಟ್ಟು ಹೇಳಿದ್ದಾರೆ.

ಸೋಮವಾರ ನಗರದ ವಿಕಾಸ ಕಚೇರಿಯಲ್ಲಿ "ಮೀಸಲಾತಿ ಹೋರಾಟ: ಆತಂಕಗಳು, ಸಾಧ್ಯತೆಗಳು" ಎಂಬ ವಿಷಯ ಕುರಿತು ಏರ್ಪಡಿಸಲಾಗಿದ್ದ ಸಂವಾದ ಗೋಷ್ಠಿಯಲ್ಲಿ ಮಾತನಾಡಿದ ಅವರು ಸರ್ಕಾರ ಉದ್ಯೋಗ ನೀಡುವ ಬದಲು ಹೊರಗುತ್ತಿಗೆಯ ಆಧಾರದ ಮೇಲೆ ಉದ್ಯೋಗಿಗಳನ್ನು ನೇಮಿಸಿಕೊಳ್ಳುತ್ತಿದೆ. ಮತ್ತು ಪ್ರತಿಯೊಂದು ಕ್ಷೇತ್ರವನ್ನು ಖಾಸಗೀಕರಣಗೊಳ್ಳುತ್ತಿದೆ. ಈಗಿರುವಾಗ ಅರ್ಹತೆ ಪಡೆದ ಎಲ್ಲರಿಗೂ ಪ್ರಯೋಜನ ಲಭಿಸಬೇಕಾದರೆ ಖಾಸಗೀ ಕ್ಷೇತ್ರದಲ್ಲಿ ಮೀಸಲಾತಿ ಕಲ್ಪಿಸಬೇಕಾಗಿದೆ. ಪಂಚಮಸಾಲಿಗಳು ನಡೆಸುತ್ತಿರುವ ಮೀಸಲಾತಿ ಹೋರಾಟದಲ್ಲಿ ಗಟ್ಟಿತನವಿಲ್ಲ, ಪ್ರಾಯೋಗಿಕವೂ ಅಲ್ಲ, ಅವರ ಹೋರಾಟ ಕೇವಲ ಮುಖ್ಯಮಂತ್ರಿಯವರ ವಿರುದ್ಧ ಎಂಬಂಥತಹ ದಿಕ್ಕಿನಲ್ಲಿ ಚಲಿಸುತ್ತಿದೆ. ಹಿಂದುಳಿದ ವರ್ಗಗಳ ಸುಮಾರು 101 ಜಾತಿಗಳು ಜನರು ಅನಾಥ ಮಗುವಿನಂತಾಗಿದ್ದಾರೆ. ಈಗ ಪ್ರಬಲ ಜಾತಿಗಳ ನಡುವೆ ಒಡಕು ಸೃಷ್ಟಿಸುವ ಕೆಲಸ ಸಕ್ರಿಯವಾಗಿದೆ. ಇದನ್ನು ಬಿಜೆಪಿಯವರು ದಾಳವಾಗಿ ಬಳಸಿಕೊಳ್ಳುತ್ತಿದೆ. ಮುಸ್ಲಿಮರ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾಗಿ ನೀಡಿಲ್ಲ, ಹಾಗಾಗಿ ಮೀಸಲಾತಿ ವಂಚಿತರಾದವರಿಗೆ ಮೀಸಲಾತಿ ಸಲ್ಲಬೇಕು, ಅವರಿಗೆ ಸ್ಥಾನ ಮಾನ ಹೆಚ್ಚಿಸುವ ದೃಷ್ಟಿಯಿಂದ, ಉದ್ಯೋಗ ಭದ್ರತೆ, ಪ್ರಾತಿನಿಧ್ಯ ನೀಡುವ ರೀತಿಯಲ್ಲಿ ಅವರ ಮೀಸಲಾತಿಯ ಪ್ರಮಾಣವನ್ನು ಹೆಚ್ಚಿಸಬೇಕಿದೆ.

ಸಾಮಾಜಿಕ ನ್ಯಾಯದ ಹೋರಾಟಕ್ಕೆ ನಮ್ಮ ಕರ್ನಾಟಕ ದೇಶಕ್ಕೆ ಮಾದರಿಯಾಗಬೇಕಿತ್ತು. ಆದರೆ ಈಗಿರುವ ಪರಿಸ್ಥಿತಿಗಳು ಹಾಗಿಲ್ಲ. ಸಿದ್ದರಾಮಯ್ಯ ಅವರ ಅವಧಿಯಲ್ಲಿ ತಯಾರಿಸಲಾದ ಜನಸಂಖ್ಯೆಗೆ ಅನುಗುಣವಾಗಿ ರಾಜಕೀಯ ಪ್ರಾತಿನಿಧ್ಯ ನೀಡುವ ನಿಟ್ಟಿನಲ್ಲಿ ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಕಾಂತರಾಜ್ ನೇತೃತ್ವದ ಹಿಂದುಳಿದ ವರ್ಗಗಳ ಶೈಕ್ಷಣಿಕ, ಸಾಮಾಜಿಕ ಸ್ಥಿತಿಗತಿ ಕುರಿತ ಸಮೀಕ್ಷಾ ವರದಿ ಬಿಡುಗಡೆ ಆಗದಿರುವುದು ವಿಪರ್ಯಾಸ ಎಂದು ಹೇಳಿದರು.

ಈ ಸಂವಾದದಲ್ಲಿ ಡಿವೈಎಫ್‌ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ, ದ.ಕ. ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಲುಕ್ಮಾನ್ ಬಂಟ್ವಾಳ ಮಾಜಿ ಉಪಮೇಯರ್ ಮುಹಮ್ಮದ್ ಕುಂಜತ್ತಬೈಲ್, ರೈತ ಸಂಘದ ಯಾದವ ಶೆಟ್ಟಿ, ವಿಚಾರವಾದಿ ನರೇಂದ್ರನಾಯಕ್, ನ್ಯಾಯವಾದಿ ಯಶವಂತಮರೋಳಿ, ಸಮುದಾಯ ಸಂಘಟನೆಯ ಮುಖಂಡ ವಾಸುದೇವ ಉಚ್ಚಿಲ್, ನಿವೃತ್ತ ಪ್ರಾಂಶುಪಾಲ ಡಾ. ಅಸ್ಲಾಯಿಲ್ ಎನ್. ಮತ್ತಿತರರು ಭಾಗವಹಿಸಿದ್ದರು.

ಪೆಟ್ರೋಲ್ ಡೀಸೆಲ್ ಹಾಗೂ ಜೀವನಾವಶ್ಯಕ ವಸ್ತುಗಳ ಬೆಲೆಯೇರಿಕೆ ವಿರುದ್ಧ ಪ್ರತಿಭಟನಾ ಪ್ರದರ್ಶನ

ಪೆಟ್ರೋಲ್ ಡೀಸೆಲ್ ಅಡುಗೆ ಅನಿಲ ಸೇರಿದಂತೆ ಜೀವನಾವಶ್ಯಕ ವಸ್ತುಗಳ ವಿಪರೀತ ಬೆಲೆಯೇರಿಕೆಯನ್ನು ಖಂಡಿಸಿ ಹಾಗೂ ನರೇಂದ್ರ ಮೋದಿ ಸರಕಾರದ ಜನವಿರೋಧಿ ನೀತಿಗಳ ವಿರುದ್ಧ ಸಿಪಿಐ(ಎಂ) ನೇತೃತ್ವದಲ್ಲಿ ಮಂಗಳೂರು ನಗರದ ಮಿನಿ ವಿಧಾನಸೌಧದ ಎದುರು 03 ಮಾರ್ಚ್ 2021 ರಂದು ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು.

ಪ್ರತಿಭಟನೆಯನ್ನುದ್ದೇಶಿಸಿ ಸಿಪಿಐ(ಎಂ) ದ.ಕ. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜೆ. ಬಾಲಕೃಷ್ಣ ಶೆಟ್ಟಿಯವರು ಮಾತನಾಡುತ್ತಾ, 'ದೇಶವನ್ನು ಧೀರ್ಘಕಾಲ ಆಳಿದ ಕಾಂಗ್ರೆಸ್ ಸರಕಾರದ ತಪ್ಪು ಆರ್ಥಿಕ ನೀತಿಗಳ ವಿರುದ್ಧ ಭುಗಿಲೆದ್ದ ಜನತೆಯ ಆಕ್ರೋಶವನ್ನು ಬಂಡವಾಳವನ್ನಾಗಿಸಿದ ಬಿಜೆಪಿ ಅಧಿಕಾರಕ್ಕೇರಿದ ಬಳಿಕ ಅದೇ ನೀತಿಗಳನ್ನು ಜಾರಿಗೊಳಿಸಿ ದೇಶದ ಆರ್ಥಿಕತೆಯನ್ನೇ ನಾಶಪಡಿಸುತ್ತಿದೆ.ಜನತೆಯ ಬದುಕನ್ನು ಸರ್ವ ನಾಶ ಮಾಡುತ್ತಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಸ್ತಾವಿಕವಾಗಿ ಮಾತನಾಡಿದ ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ರವರು, 'ಅಂದು ಬೆಲೆಯೇರಿಕೆಯ ವಿರುದ್ಧ ಪ್ರತಿಭಟನೆಯ ನಾಟಕವಾಡಿದ ಸಂಸದ ನಳೀನ್ ಕುಮಾರ್ ಕಟೀಲು ಸೇರಿದಂತೆ ಬಿಜೆಪಿಯ ಎಲ್ಲಾ ನಾಯಕರು ಇಂದು ಬಾಯಿ ಬಿಡುತ್ತಿಲ್ಲ. ಇಡೀ ದೇಶದ ಸಂಪತ್ತನ್ನು ಅಂಬಾನಿ ಅಧಾನಿಗಳಿಗೆ ಧಾರೆ ಎರೆದು ಕೊಡುವ ಮೂಲಕ ನರೇಂದ್ರ ಮೋದಿ ಸರಕಾರ ಅವರ ಸಾಮ್ರಾಜ್ಯವನ್ನು ವಿಸ್ತರಿಸಲು ಸಹಕರಿಸುತ್ತಿದೆ. ಅಚ್ಚೇದಿನ್ ಬಂದಿರುವುದು ಅಧಾನಿ ಅಂಬಾನಿಗಳಿಗೆ ಹೊರತು ದೇಶದ ಸಾಮಾನ್ಯ ಜನತೆಗಲ್ಲ ಎಂದು ಸಾಬೀತಾಗಿದೆ' ಎಂದು ಹೇಳಿದರು.

ಸಿಪಿಐ(ಎಂ) ಮಂಗಳೂರು ನಗರ ಉತ್ತರ ಕಾರ್ಯದರ್ಶಿ ದಯಾನಂದ ಶೆಟ್ಟಿಯವರು ಮಾತನಾಡುತ್ತಾ, 'ಧರ್ಮ ದೇವರುಗಳ ಹೆಸರಿನಲ್ಲಿ ರಾಜಕೀಯ ಮಾಡುತ್ತಾ, ಮಾಧ್ಯಮಗಳನ್ನು ತನ್ನ ಕಪಿಮುಷ್ಠಿಯಲ್ಲಿಟ್ಟು ಹಸಿ ಹಸಿ ಸುಳ್ಳುಗಳನ್ನು ಹೇಳುತ್ತಾ ದೇಶದ ಜನರನ್ನು ದಾರಿ ತಪ್ಪಿಸುತ್ತಿರುವ ಫ್ಯಾಸಿಸ್ಟ್ ಸರಕಾರದ ಅಪಾಯಕಾರಿ ನೀತಿಗಳನ್ನು ಜನತೆ ಅರಿಯಬೇಕಾಗಿದೆ' ಎಂದು ಹೇಳಿದರು.

ಪ್ರತಿಭಟನೆಯಲ್ಲಿ ಸಿಪಿಐ(ಎಂ) ಮಂಗಳೂರು ನಗರ ಮುಖಂಡರಾದ ಸಂತೋಷ್ ಬಜಾಲ್, ಜಯಂತಿ ಶೆಟ್ಟಿ, ಬಾಬು ದೇವಾಡಿಗ, ದಿನೇಶ್ ಶೆಟ್ಟಿ, ಬಶೀರ್ ಪಂಜಿಮೊಗರು, ರಾಜೇಶ್ ಉರ್ವಾಸ್ಟೋರ್, ಸಿಪಿಐ(ಎ) ನಾಯಕರಾದ ಭಾರತಿ ಬೋಳಾರ, ಮಹಮ್ಮದ್ ಮುಸ್ತಾಫ, ಸಂತೋಷ್ ಆರ್. ಎಸ್., ಉಮೇಶ್ ಶಕ್ತಿನಗರ ಮುಂತಾದವರು ಭಾಗವಹಿಸಿದ್ದರು.



'ಎಂಎಸ್‌ಪಿ ಕೊಡಿಸಿ ರಾಷ್ಟ್ರೀಯ ಆಂದೋಲನ' ಆರಂಭ

ಪುಟ 3 ರಿಂದ

ಯನ್ನು ಡಾ|| ಎಂ.ಎಸ್ ಸ್ವಾಮಿನಾಥನ್ ವರದಿಯಂತೆ ಹೆಚ್ಚಳ ಮಾಡಿರುವುದಾಗಿ ಸುಳ್ಳು ಹೇಳುತ್ತಾ ಕಾಲಹರಣ ಮಾಡುತ್ತಿದ್ದಾರೆ. ಮಾತ್ರವಲ್ಲ ಒಂದು ಕಡೆ ಕೆಲವು ಕೃಷಿ ಉತ್ಪನ್ನಗಳಿಗೆ 'ಉತ್ಪಾದನಾ ವೆಚ್ಚಕ್ಕಿಂತ' ಕಡಿಮೆ 'ಕನಿಷ್ಠ ಬೆಂಬಲ ಬೆಲೆ' ನಿಗದಿ ಮಾಡಿರುವುದು, ಹೀಗೆ ನಿಗದಿ ಮಾಡಿರುವ 'ಕನಿಷ್ಠ ಬೆಂಬಲ ಬೆಲೆ'ಯನ್ನೂ ರೈತರಿಗೆ ನೀಡಲು ವಿಫಲವಾಗಿರುವುದು ಸರ್ವೇ ಸಾಮಾನ್ಯ ವಿಷಯವಾಗಿದೆ.

ಈ ಹಿನ್ನೆಲೆಯಲ್ಲಿ ಇಡೀ 'ಕನಿಷ್ಠ ಬೆಂಬಲ ಬೆಲೆ'ಯ ವಾಸ್ತವ ಜಾರಿ ಹಾಗು ಕೇಂದ್ರದ ಮೂರು ಕೃಷಿ ಕಾಯ್ದೆಗಳಿಗೂ 'ಕನಿಷ್ಠ ಬೆಂಬಲ ಬೆಲೆ' ಇರುವ ಸಂಬಂಧಗಳ ಬಗ್ಗೆ ರೈತರು, ಜನತೆಯಲ್ಲಿ ಜಾಗೃತಿಯನ್ನು ಉಂಟು ಮಾಡಲು ಈ ಆಂದೋಲನವನ್ನು ಸಂಘಟಿಸಲಾಗುತ್ತಿದೆ. ಈ ಹೋರಾಟದಲ್ಲಿ ರಾಜ್ಯದ ರೈತರು, ದೇಶ ಪ್ರೇಮಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಕೋರಿದೆ.

ವಸತಿ ಸೇರಿದಂತೆ ವಿವಿಧ ಬೇಡಿಕೆಗಳಿಗಾಗಿ ಹಮಾಲಿ ಕಾರ್ಮಿಕರ ಪ್ರತಿಭಟನೆ



ಸಾಮಾಜಿಕ ಭದ್ರತೆಗಾಗಿ ಬಜೆಟ್‌ನಲ್ಲಿ ಅನುದಾನಕ್ಕಾಗಿ, ಎಲ್ಲಾ ವಸತಿ ರಹಿತ ಹಮಾಲಿ ಕಾರ್ಮಿಕರಿಗೆ ವಸತಿ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ ಇಂದಿನಿಂದ ಎರಡು ದಿನಗಳ ಹಮಾಲಿ ಕಾರ್ಮಿಕರ ಅಹೋರಾತ್ರಿ ಧರಣಿಯು ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ಆರಂಭವಾಗಿದೆ.

ಸಿಐಟಿಯು ಸಂಯೋಜಿತ ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಷನ್ (ರಿ.) ವತಿಯಿಂದ ಇಂದು ಹಮ್ಮಿಕೊಂಡಿದ್ದ ವಿಧಾನಸೌಧ ಚಲೋ ಪ್ರತಿಭಟನಾ ಧರಣಿಗೆ ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಮಿಲ್‌ಗಳು, ಗೌಡನ್‌ಗಳು, ಮಾರುಕಟ್ಟೆ, ಬಜಾರುಗಳಲ್ಲಿ ಕೆಲಸ ನಿರ್ವಹಿಸುವ ಸಾವಿರಕ್ಕೂ ಹೆಚ್ಚಿನ ಎಪಿಎಂಸಿ ಕಾರ್ಮಿಕರು ಭಾಗವಹಿಸಿದ್ದರು.

ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವ ಬಿಜೆಪಿ ಸರ್ಕಾರವು ಹಮಾಲಿ ಕಾರ್ಮಿಕರನ್ನು ಕಡೆಗಣಿಸಿದೆ. ಅಲ್ಲದೆ ಕಾರ್ಮಿಕ ಕಾನೂನುಗಳ ತಿದ್ದುಪಡಿಯಿಂದಾಗಿ ಉದ್ಯೋಗ ಭದ್ರತೆ, ಮೂಲಭೂತ ಸಮಸ್ಯೆಗಳು ಧಕ್ಕೆಯಾಗಲಿದ್ದು ಇದರಿಂದ ಸಾವಿರಾರು ಹಮಾಲಿ ಕಾರ್ಮಿಕರ ಬದುಕು ಅತಂತ್ರವಾಗಲಿದೆ.

ಈ ಹಿನ್ನೆಲೆಯಲ್ಲಿ ಮುಂಬರುವ ರಾಜ್ಯ ಬಜೆಟ್ ನಲ್ಲಿ ರಾಜ್ಯ ಸರ್ಕಾರವು ಹಮಾಲಿ ಕಾರ್ಮಿಕರಿಗೆ ವಿಶೇಷ ಯೋಜನೆಗಳು ರೂಪಿಸಬೇಕು ಹಾಗೂ ಸಾಮಾಜಿಕ ಭದ್ರತೆಗಾಗಿ ಬಜೆಟ್ ನಲ್ಲಿ ಅನುದಾನ ಬಿಡುಗಡೆ ಮಾಡಬೇಕು, ಎಪಿಎಂಸಿ 'ಕಾಯಕ ನಿಧಿ' ಅಡಿ ನಿವೃತ್ತಿ ವೇತನ ನೀಡಬೇಕೆಂದು, ಎಲ್ಲಾ ವಸತಿ ರಹಿತ ಹಮಾಲಿ ಕಾರ್ಮಿಕರಿಗೆ ವಸತಿ ಸೇರಿದಂತೆ ಭವಿಷ್ಯನಿಧಿ ಯೋಜನೆ, ಪಿಂಚಣಿ, ಬೋನಸ್ ಜಾರಿ ಮಾಡಬೇಕೆಂದು ಆಗ್ರಹಿಸಿದರು.

ಸರ್ಕಾರದ ಪರವಾಗಿ ಪ್ರತಿಭಟನಾ ಸ್ಥಳಕ್ಕೆ ಎಪಿಎಂಸಿ ನಿರ್ದೇಶಕರಾದ ಕರೀಗೌಡರವರು ಭಾಗವಹಿಸಿ ಮನವಿಪತ್ರವನ್ನು ಸ್ವೀಕರಿಸಿ ಪ್ರಗತಿಯ ಹಂತದಲ್ಲಿರುವ ಕೆಲಸಗಳ ಬಗ್ಗೆ ಹಾಗೂ ಇನ್ನು ಕೆಲವು ಬೇಡಿಕೆಗಳ ಬಗ್ಗೆ ಸರ್ಕಾರದ ಮುಂದೆ ಪ್ರಸ್ತಾಪಿಸುವುದಾಗಿ ಹೇಳಿದರು.

ಹಮಾಲಿ ಕಾರ್ಮಿಕರ ಬೇಡಿಕೆಗಳ ಪರಿಹಾರಕ್ಕಾಗಿ ನಡೆಯುತ್ತಿರುವ ಪ್ರತಿಭಟನಾ ಧರಣಿಯೂ ನಾಳೆಯು ಮುಂದುವರೆಸಲು ಕಾರ್ಮಿಕರು ನಿರ್ಧರಿಸಿದರು.

ಪ್ರತಿಭಟನಾ ಧರಣಿಯನ್ನು ಉದ್ದೇಶಿಸಿ ಹಮಾಲಿ ಕಾರ್ಮಿಕರ ಫೆಡರೇಷನ್ ನ ರಾಜ್ಯ ಅಧ್ಯಕ್ಷರಾದ ಕೆ.ಮಹಾಂತೇಶ್, ರಾಜ್ಯ ಕಾರ್ಯದರ್ಶಿ ಮಹೇಶ್ ಪತ್ತಾರ್, ಮುಖಂಡರಾದ ಸುಬ್ರಮಣ್ಯ, ನಿರುಪಾದಿ, ಹಾಗೂ ಸಿಐಟಿಯು ರಾಜ್ಯ ಅಧ್ಯಕ್ಷರಾದ ಎಸ್. ವರಲಕ್ಷ್ಮಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ರಾಜ್ಯ ಮುಖಂಡರಾದ ಕೆ.ಪ್ರಕಾಶ್, ಕೆ.ಎನ್.ಉಮೇಶ್, ಮತ್ತಿತರ ಮುಖಂಡರು ಮಾತನಾಡಿದರು.





ಬಜೆಟ್‌ನಲ್ಲಿ ಅನುದಾನ ಮೀಸಲಿಡಲು ಒತ್ತಾಯಿಸಿ ದಲಿತ ಹಕ್ಕುಗಳ ಸಮಿತಿಯಿಂದ ವಿಧಾನಸೌಧ ಚಲೋ

ದಲಿತರ ಜನಸಂಖ್ಯೆಗೆ ಅನುಗುಣವಾಗಿ ಬಜೆಟ್‌ನಲ್ಲಿ ಹಣ ಮೀಸಲಿಡಬೇಕೆಂದು, ಎಸ್‌ಸಿಎಸ್‌ಪಿ/ಟಿಎಸ್‌ಪಿ ಉಪಯೋಜನೆಗಳ ಜಾರಿಗಾಗಿ ಏಕಗವಾಕ್ಷಿ ಪದ್ಧತಿ ಮೂಲಕ ಜಾರಿ ಮಾಡಬೇಕೆಂದು ಸೇರಿದಂತೆ ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ದಲಿತ ಹಕ್ಕುಗಳ ಸಮಿತಿ ಕರ್ನಾಟಕ ರಾಜ್ಯ ಸಮಿತಿ ವತಿಯಿಂದ ಬೃಹತ್ ಪ್ರತಿಭಟನಾ ಧರಣಿಯನ್ನು ನಡೆಸಿದರು.

ಧರಣಿ ಆರಂಭಕ್ಕೂ ಮೊದಲು ಬೆಂಗಳೂರು ನಗರ ರೈಲ್ವೇ ನಿಲ್ದಾಣದಿಂದ ಆರಂಭವಾದ ಮೆರವಣಿಗೆ ಆನಂದರಾವ್ ವೃತ್ತದ ಮೂಲಕ ಸ್ವಾತಂತ್ರ್ಯ ಉದ್ಯಾನವನಕ್ಕೆ ತಲುಪಿತು.

ಪ್ರಮುಖ ಬೇಡಿಕೆಗಳಾದ ನಿವೇಶನ ರಹಿತರಿಗೆ ಹಿತ್ತಲು ಸಹಿತ ನಿವೇಶನ, ಭೂರಹಿತರಿಗೆ ಭೂಒಡೆತನ ಯೋಜನೆಯಡಿ ಭೂಮಿ, ವಸತಿ ರಹಿತರಿಗೆ ಮನೆ ಮತ್ತು ಸ್ಮಶಾನಕ್ಕಾಗಿ, ಅರ್ಜಿ ಸಲ್ಲಿಸಿದ ಎಲ್ಲರಿಗೂ ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿಗಾಗಿ ಹಾಗೂ ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಬೇಕು, ಖಾಸಗಿ ವಲಯದಲ್ಲಿ ಮೀಸಲಾತಿ ನಿಗದಿಪಡಿಸಲು ಹಾಗೂ ದಲಿತರ ಅಭಿವೃದ್ಧಿಗೆ ಮೀಸಲಿಟ್ಟ ಹಣವನ್ನು ಬೇರೆ ಇಲಾಖೆಯ ಕೆಲಸಗಳಿಗೆ ವರ್ಗಾವಣೆ ಮಾಡಿ ದುರ್ಬಳಕೆ ಮಾಡಬಾರದೆಂದು, ದೇವದಾಸಿ ಪದ್ಧತಿ ನಿರ್ಮೂಲನೆ ಮಾಡಿ, ಅವರ ಕುಟುಂಬದ ಮಕ್ಕಳಿಗೆ ಶಿಕ್ಷಣ, ಉದ್ಯೋಗ ಭದ್ರತೆ ಒದಗಿಸಬೇಕೆಂದು ಮತ್ತ ಮಸಣ ಕಾರ್ಮಿಕರಿಗೆ ಮಾಸಿಕ ರೂ.3000 ಪಿಂಚಣಿಗಾಗಿ, ಎಸ್.ಸಿ/ಎಸ್.ಟಿ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಮಾಸಿಕ ಆಹಾರ ಭತ್ಯೆ ರೂ.3500 ನೀಡಿ, ವಿದ್ಯಾರ್ಥಿವೇತನದ ಪ್ರಮಾಣವನ್ನು ಹೆಚ್ಚಿಸಬೇಕೆಂದು ವಿವಿಧ ಬೇಡಿಕೆಗಳ ಮೂಲಕ ಸರ್ಕಾರವನ್ನು ಆಗ್ರಹಿಸಿದರು.

ಸರ್ಕಾರದ ಪರವಾಗಿ ಹಿರಿಯ ಅಧಿಕಾರಿಗಳು ಪ್ರತಿಭಟನಾ ಸ್ಥಳಕ್ಕೆ ಭಾಗವಹಿಸಿ ಮನವಿ ಪತ್ರವನ್ನು ಸ್ವೀಕರಿಸಿ ಸರ್ಕಾರದೊಂದಿಗೆ ಚರ್ಚಿಸುವುದಾಗಿ ತಿಳಿಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಆರ್ಥಿಕ ತಜ್ಞರಾದ ಟಿ.ಆರ್.ಚಂದ್ರಶೇಖರ್, ಡಿಹೆಚ್‌ಎಸ್ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಅರಳಹಳ್ಳಿ, ಅಖಿಲ ಭಾರತ ಕೃಷಿಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ, ಮಸಣ ಕಾರ್ಮಿಕರ ರಾಜ್ಯ ಮುಖಂಡರಾದ ಯು.ಬಸವರಾಜು, ರಾಜ್ಯ ಮುಖಂಡರಾದ ಬಿ.ರಾಜಶೇಖರಮೂರ್ತಿ, ಕೃಷ್ಣ, ಬಿ.ಮಾಳಮ್ಮ, ರಾಜಣ್ಣ ಮತ್ತಿತರ ಮುಖಂಡರು ಮಾತನಾಡಿದರು.



ಉದ್ಯೋಗ ಖಾತ್ರಿಗೆ ಹೆಚ್ಚಿನ ಅನುದಾನಕ್ಕಾಗಿ ಜೆಎಂಎಸ್ ನಿಂದ ಮಹಿಳಾ ಮಹಾಸಭಾ

ರೈತ ವಿರೋಧಿ ಕೃಷಿ ವಾಪಸಾತಿಗಾಗಿ, ಎ.ಪಿ.ಎಂ.ಸಿ. ಕಾಯ್ದೆ ತಿದ್ದುಪಡಿ ರದ್ಧತಿಗಾಗಿ, ಉದ್ಯೋಗ ಖಾತ್ರಿ ಅನುದಾನ ಕಡಿತ ವಿರೋಧಿಸಿ ಹಾಗೂ ಪೆಟ್ರೋಲ್, ಡೀಸೆಲ್ ಮತ್ತು ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆಯನ್ನು ಖಂಡಿಸಿ ಕಲಬುರಗಿಯಲ್ಲಿ ಜೆಎಂಎಸ್‌ನಿಂದ ಮೆರವಣಿಗೆ ನಡೆಸಲಾಯಿತು.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಆಳಂದ ತಾಲೂಕು ಸಮಿತಿಯಿಂದ ಇಂದು ಕಲಬುರಗಿದ ಆಳಂದ ತಾಲೂಕಿನ ಎ.ಪಿ.ಎಂ.ಸಿ ಮಂಡಿಯಲ್ಲಿ ಇಂದು ಬೃಹತ್ ಮಹಿಳಾ ಮಹಾಸಭಾ ಮತ್ತು ಮೆರವಣಿಗೆ ನಡೆಸಿದರು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಮಹಿಳಾ ಸಂಘಟನೆಯ ರಾಜ್ಯ ಕಾರ್ಯದರ್ಶಿ ಗೌರಮ್ಮ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಜನವಿರೋಧಿ ನೀತಿಯನ್ನು ಖಂಡಿಸಿದರು ಹಾಗೂ ನಾವೆಲ್ಲರೂ ಎಚ್ಚರಿಕೆಯಿಂದ ಮುನ್ನಡೆಯುವುದು ತುಂಬ ಮುಖ್ಯ ಪ್ರಭುತ್ವ ನಡೆಯನ್ನು ಪ್ರಶ್ನಿಸುವುದು ನಮ್ಮ ಹಕ್ಕು ನಾವೆಲ್ಲರೂ ಪ್ರಶ್ನಿಸೋಣ. ನಮ್ಮೆಲ್ಲರನ್ನು ಜೈಲಿಗೆ ಹಾಕಲಿ ಎಂದು ತಿಳಿಸಿದರು.

ನಂತರ ಮಾತನಾಡಿದ ಪೂಜಾರವರು "ಉದ್ಯೋಗ ಖಾತ್ರಿ ನಮ್ಮ ಹಕ್ಕು ನಮ್ಮ ಹಕ್ಕನ್ನು ನಾವು ಹೋರಾಟದಿಂದಲೇ ಪಡೆಯಲು ಸಾಧ್ಯವೆಂದು ಹಾಗೂ ದೆಹಲಿಯಲ್ಲಿ ನಡೆಯುತ್ತಿರುವ ರೈತರ ಜೊತೆಗೆ ನಿಲ್ಲೋಣ" ಎಂದು ಹೇಳಿದರು.

ಕೃಷಿಯನ್ನು ಕಂಡು ಹಿಡಿದು ಅದನ್ನು ಬೆಳೆಸಿದ್ದು ಮೊದಲು ಮಹಿಳೆಯರೇ. ಹಾಗಾಗಿ ಇಂದು ಅದನ್ನು ಉಳಿಸಲೂ ನಾವೇ ಮುಂದಾಗಬೇಕಿದೆ. ಅಂದು ಹೇಗೆ ವಾಮನ ತನ್ನ ಮೂರನೇ ಕಾಲನ್ನು ಬಲಿಚಕ್ರವರ್ತಿಯ ತಲೆಯ ಮೇಲೆ ಇಟ್ಟಿದ್ದನೋ ಅದೇ ರೀತಿ ಇಂದು ಕೃಷಿವಿರೋಧಿ ಮೂರು ಕಾನೂನುಗಳು ನಮ್ಮ ರೈತ ಕಾರ್ಮಿಕರ ಜೀವಕ್ಕೆ ಕುತ್ತು ಎಂದು ಕೋರಣೇಶ್ವರ ಸ್ವಾಮಿಯವರು ಹೇಳಿದರು.



ಈ ಮಹಾಸಭೆಯಲ್ಲಿ ಆಳಂದ ತಾಲೂಕಿನ ಮುನ್ನೊಳ್ಳಿ, ಜಂಬಗಾ, ತಡಕಲ್, ಜಿಡಗಾ ಸೇರಿದಂತೆ ನೂರಾರು ಮಹಿಳೆಯರು ಪಾಲ್ಗೊಂಡಿದ್ದರು ಹಾಗೂ ಜನವಾದಿಯ ಕೆ ನೀಲಾ, ಜಗದೇವಿ ನೂಲಕರ್, ಶಹಾನಾಜ್, ನಂದಾದೇವಿ ಮುಂತಾದವರು ಇದ್ದರು.



ಸಿ.ಜಿ. ಮಂಜುಳಾ

ಮಹಿಳೆಯ ಬದುಕಿನ ಮೇಲೆ ಕೋವಿಡ್–19 ಬೀರಿದ ಘೋರ ಪರಿಣಾಮಗಳ ಮಧ್ಯೆ, ಕೇಂದ್ರ ಬಜೆಟ್ ಮಹಿಳೆಗೆ ನೀಡಿದ್ದಾದರೂ ಏನು? ಎಂದು ಅವಲೋಕಿಸಿದಲ್ಲಿ, ಇರುವುದನ್ನೂ ಕಿತ್ತುಕೊಂಡಿರುವಂತಹ ವೈಪರೀತ್ಯ ಗೋಚರವಾಗುತ್ತದೆ. ಮಹಿಳೆ ಹಾಗೂ ಪುರುಷನ ಮೇಲೆ ರಾಷ್ಟ್ರೀಯ ಬಜೆಟ್ ಗಳು ಭಿನ್ನವಾಗಿ ಪರಿಣಾಮ ಬೀರುತ್ತವೆ ಹಾಗೂ ಇವು ಪಿತೃಪ್ರಧಾನ ಸಾಮಾಜಿಕ ಮೌಲ್ಯಗಳು ಹಾಗೂ ಪೂರ್ವಗ್ರಹಗಳನ್ನು ಪುಷ್ಟೀಕರಿಸಬಹುದು ಎಂಬ ಗ್ರಹಿಕೆಯನ್ನು ಆಧರಿಸಿ ಜಿ.ಆರ್.ಬಿ ಪರಿಕಲ್ಪನೆ ಸೃಷ್ಟಿಯಾಯಿತು ಎಂಬುದು ನಮಗೆ ನೆನಪಿರಬೇಕು. 2005–06 ರಿಂದ ಜೆಂಡರ್ ಬಜೆಟಿಂಗ್ ಆರಂಭವಾಯಿತು. 2019 ರ ಬಜೆಟ್ ಭಾಷಣದಲ್ಲಿ ಸಚಿವೆ ನಿರ್ಮಲಾ ಸೀತಾರಾಮನ್ ಅವರು ನಾರಿಯನ್ನು ನಾರಾಯಣಿ ಎಂದು ಬಣ್ಣಿಸಿ, 15 ವರ್ಷಗಳ ಜೆಂಡರ್ ಬಜೆಟಿಂಗ್ ನ ಮೌಲ್ಯ ಮಾಪನಕ್ಕೆ ಸಮಿತಿಯೊಂದನ್ನು ರಚಿಸುವುದಾಗಿ ಪ್ರಕಟಿಸಿದ್ದರು. ಈ ಸಮಿತಿ ಈಗ ಜೆಂಡರ್ ಬಜೆಟಿಂಗ್ ಸುಧಾರಿಸಲು ಶಿಫಾರಸುಗಳ ವರದಿಯನ್ನು ಸಲ್ಲಿಸಿದೆ ಎನ್ನಲಾಗಿದ್ದು ಈ ಬಗ್ಗೆ ಹೆಚ್ಚಿನ ವಿವರಗಳು ಪ್ರಕಟವಾಗಿಲ್ಲ. ಈ ಶಿಫಾರಸುಗಳು ಜೆಂಡರ್ ಬಜೆಟಿಂಗ್ ಪ್ರಕ್ರಿಯೆಯಲ್ಲಿ ಹೆಚ್ಚಿನ ಸೂಕ್ಷ್ಮತೆ ತರಬಹುದೇ?

ಕೇಂದ್ರ ಬಜೆಟ್ 2021–22: ಕಾಣೆಯಾದ ಲಿಂಗತ್ವ ಸ್ಪಂದನ

2005–06ರಲ್ಲಿ ಭಾರತದಲ್ಲಿ ಜೆಂಡರ್ ಸ್ಪಂದನಶೀಲ ಬಜೆಟಿಂಗ್ (ಜಿ.ಆರ್.ಬಿ) ಅಳವಡಿಸಿಕೊಳ್ಳಲಾಯಿತು. ಈ ಉಪಕ್ರಮಕ್ಕೆ ನಾಂದಿ ಹಾಡಿದ ಆಯೋಗದ ಭಾಗವಾಗಿದ್ದವರು ನಿರ್ಮಲಾ ಸೀತಾರಾಮನ್. ಇಂತಹ ನಿರ್ಮಲಾ ಸೀತಾರಾಮನ್ ಅವರು ಕೇಂದ್ರ ಹಣಕಾಸು ಸಚಿವೆ ಹುದ್ದೆಗೇರಿ ಕೇಂದ್ರ ಬಜೆಟ್ ಮಂಡಿಸುತ್ತಿರುವುದು ಈ ಸಲ ಮೂರನೇ ಬಾರಿ. ಕೋವಿಡ್ 19 ಪಿಡುಗಿನ ದುರ್ಭರ ದಿನಗಳಲ್ಲಿನ ಈ ಬಜೆಟ್, 'ನ ಭೂತೋ' – ಹಿಂದೆಂದೂ ಕಾಣದಂತಹ ಬಜೆಟ್ ಎಂದೆಲ್ಲಾ ಬಿಂಬಿಸಲಾಯಿತು. ಆದರೆ, ಮಹಿಳೆಯ ಬದುಕಿನ ಮೇಲೆ ಕೋವಿಡ್–19 ಬೀರಿದ ಘೋರ ಪರಿಣಾಮಗಳ ಮಧ್ಯೆ, ಕೇಂದ್ರ ಬಜೆಟ್ ಮಹಿಳೆಗೆ ನೀಡಿದ್ದಾದರೂ ಏನು? ಎಂದು ಅವಲೋಕಿಸಿದಲ್ಲಿ, ಇರುವುದನ್ನೂ ಕಿತ್ತುಕೊಂಡಿರುವಂತಹ ವೈಪರೀತ್ಯ ಗೋಚರವಾಗುತ್ತದೆ.

ಮಹಿಳೆಯರ ಹಕ್ಕುಗಳಿಗೆ ಮೂಲವಾಗಿರುವ ಅನೇಕ ಯೋಜನೆಗಳಿಗೆ ಕಡಿತವಾಗಿರುವುದು ಈ ಬಾರಿಯ ಬಜೆಟ್ ನಲ್ಲಿ ಎದ್ದು ಕಾಣಿಸುವ ಅಂಶ. ಮಹಿಳಾ ಕ್ಷೇಮಾಭಿವೃದ್ಧಿಗಾಗಿ ಸದ್ಯದ ಹಂಚಿಕೆ ರೂ 1,53,326 ಕೋಟಿ. ಇದು ಈ ಕ್ಷೇತ್ರಕ್ಕೆ ಕಳೆದ ಸಾಲಿನ ಬಜೆಟ್ ನ ಪರಿಷ್ಕೃತ ಅಂದಾಜಿನಲ್ಲಿದ್ದ ಪ್ರಮಾಣಕ್ಕಿಂತ 26% ಕಡಿಮೆ. ಎಂದರೆ, 2020–21ರ ಸಾಲಿನಲ್ಲಿ ಈ ಬಾಬ್ತಿಗೆ ಬಜೆಟ್ ಹಂಚಿಕೆ ರೂ 1,43,461.72 ಕೋಟಿ ಇದ್ದದ್ದು ನಂತರ ಪರಿಷ್ಕೃತ ಅಂದಾಜಿನಲ್ಲಿ ರೂ2,07,261 ಕೋಟಿಯಷ್ಟಿತ್ತು ಎಂಬುದನ್ನು ಗಮನಿಸಬೇಕು. ಹೀಗಾಗಿ, 2021–22ರ ಕೇಂದ್ರ ಬಜೆಟ್ ನಲ್ಲಿ ಯೋಜನೆಗಳು ಹಾಗೂ ಉಪ ಯೋಜನೆಗಳಿಗೆ ಹಣ ಹಂಚಿಕೆಯಲ್ಲಿ ಈ ಪ್ರಮಾಣದ ಕುಸಿತ ಮಹಿಳೆಯರ ಬದುಕಿನ ಮೇಲೆ ತೀವ್ರ ಪರಿಣಾಮಗಳನ್ನುಂಟು ಮಾಡುವಂತಹದ್ದು.

ಸದ್ಯದ ಜೆಂಡರ್ ಬಜೆಟ್ (ಮಹಿಳಾ ನಿರ್ದಿಷ್ಟ ಯೋಜನೆಗಳಿಗೆ ಹಂಚಿಕೆಯಾದ ಹಣ) ಒಟ್ಟು ಕೇಂದ್ರ ಬಜೆಟ್ ನಲ್ಲಿ ಕೇವಲ 4.3%. ಇದು, ಕಳೆದ ವರ್ಷದಲ್ಲಿದ್ದ 4.7% ಹಾಗೂ ಜುಲೈ 2019ರಲ್ಲಿ ಮಂಡಿತವಾದ 2019–20ರ ಕೇಂದ್ರ ಬಜೆಟ್ ನಲ್ಲಿದ್ದ 4.9%ಗಿಂತ ಕಡಿಮೆ. ಜೊತೆಗೆ, ಇದು ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) 1% ಗಿಂತಲೂ ಕಡಿಮೆ.

ಜೆಂಡರ್ ಬಜೆಟ್ ನಲ್ಲಿ ಎರಡು ಭಾಗಗಳಿವೆ. ಮೊದಲ ಭಾಗ, ಪಾರ್ಟ್ ಎ – ಮಹಿಳೆಯರಿಗೆ 100% ಹಂಚಿಕೆ ಇರುವ ಯೋಜನೆಗಳಿಗೆ ಸಂಬಂಧಿಸಿದೆ. ಎರಡನೆಯ ಭಾಗ ಪಾರ್ಟ್ ಬಿ – ಕನಿಷ್ಠ ಮೂರನೇ ಒಂದರಷ್ಟು ಹಣ ಮಹಿಳೆಯರಿಗೆ ಹಂಚಿಕೆಯಾಗಿರುವ ಯೋಜನೆಗಳನ್ನು ಒಳಗೊಂಡಿರುತ್ತದೆ.

ಮೊದಲ 'ಎ' ಭಾಗದಲ್ಲಿ ಈ ಬಾರಿ ಕಳವಳಕಾರಿ ವ್ಯತ್ಯಾಸಗಳು ಕಂಡು ಬಂದಿವೆ. ಕೇಂದ್ರ ಪ್ರಾಯೋಜಿತ ಬಾಲಕಿಯರ ಸೆಕೆಂಡರಿ ಎಜುಕೇಷನ್ ಪ್ರೋತ್ಸಾಹಕಗಳ ರಾಷ್ಟ್ರೀಯ ಯೋಜನೆಗೆ (ನ್ಯಾಷನಲ್ ಸ್ಕೀಮ್ ಆಫ್ ಇನ್ ಸೆಂಟಿವ್ಸ್ ಟು ಗರ್ಲ್ಸ್ ಫಾರ್ ಸೆಕೆಂಡರಿ ಎಜುಕೇಷನ್) ಬಜೆಟ್ ಹಂಚಿಕೆಯನ್ನು ಪ್ರಸಕ್ತ ಸಾಲಿನಲ್ಲಿ ಒಂದು ಕೋಟಿ ರೂಪಾಯಿಗೆ ಇಳಿಸಲಾಗಿದೆ. ಕಳೆದ ಸಾಲಿನಲ್ಲಿ ಇದು 110 ಕೋಟಿ ಇತ್ತು. ಸೆಕೆಂಡರಿ ಹಂತದಲ್ಲಿ 14ರಿಂದ 18ರ ವಯೋಮಾನದ ಹೆಣ್ಣುಮಕ್ಕಳ ಶಾಲಾ ದಾಖಲಾತಿಗೆ ಉತ್ತೇಜನ ನೀಡುವ ಯೋಜನೆ ಇದು. ಕೋವಿಡ್ 19ರ ಸಂಕಷ್ಟದ ದಿನಗಳಲ್ಲಿ ಬಾಲ್ಯವಿವಾಹಗಳು ಹೆಚ್ಚುತ್ತಿರುವ ಬಗ್ಗೆ ವರದಿಗಳು ಬರುತ್ತಲೇ ಇರುವ ಈ ಕಾಲದಲ್ಲಿ ಈ ಇಳಿಕೆ ನಿಜಕ್ಕೂ ನಿರುತ್ಸಾಹಕರ.

ಹಾಗೆಯೇ ಮಹಿಳೆಯ ಘನತೆ ಹಾಗೂ ಸುರಕ್ಷತೆಗೆ ಸಂಬಂಧಿಸಿದ ಉಪಕ್ರಮಗಳಿಗೆ ನೆರವು ನೀಡುವ 'ನಿರ್ಭಯಾ ನಿಧಿ'ಗೆ ಹಣಹಂಚಿಕೆಯನ್ನು ರೂ10 ಕೋಟಿಗೆ ಇಳಿಸಲಾಗಿದೆ. 2020–21ರ ಸಾಲಿನಲ್ಲಿ ಇದು ರೂ855 ಕೋಟಿ ಇತ್ತು.



ಮಹಿಳೆಯರ ರಕ್ಷಣೆ ಹಾಗೂ ಸಬಲೀಕರಣ ರಾಷ್ಟ್ರೀಯ ಮಿಷನ್ ನ ಹಂಚಿಕೆಯನ್ನು ಪ್ರಸಕ್ತ ಸಾಲಿನಲ್ಲಿ ರೂ.48 ಕೋಟಿಗೆ ಇಳಿಸಲಾಗಿದೆ. ಕಳೆದ ಸಾಲಿನಲ್ಲಿ ಇದು ರೂ 1,163 ಕೋಟಿ ಇತ್ತು.

ಇತ್ತೀಚಿನ ಆಕ್ಸ್ ಫಾಮ್ ಇಂಡಿಯಾ ವರದಿಯ ಪ್ರಕಾರ, ಕೋವಿಡ್ 19 ಲಾಕ್ ಡೌನ್ ನಿಂದಾಗಿ ಲಿಂಗತ್ವ ಅಸಮಾನತೆ ವಿವಿಧ ಆಯಾಮಗಳಲ್ಲಿ ಹೆಚ್ಚಾಗಿದೆ. ಮನೆಗಳಲ್ಲೇ ದೌರ್ಜನ್ಯದ ವಾತಾವರಣಗಳಲ್ಲಿ ಸಿಲುಕಿಕೊಂಡ ಮಹಿಳೆಯರು ಎದುರಿಸಿದ ಹಿಂಸೆ ಪ್ರಕರಣಗಳು ಕಳೆದ 10 ವರ್ಷಗಳಲ್ಲೇ ಹೆಚ್ಚಿನ ಮಟ್ಟದ್ದು. ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಗೆ ಕಾನೂನಿನ ರಕ್ಷಣೆ ಇದೆ ಎಂಬುದೇನೋ ನಿಜ. ಆದರೆ ಕಾಯಿದೆಯ ಅನ್ವಯ ಇರುವ ಅವಕಾಶಗಳೂ ಲಾಕ್ ಡೌನ್ ಸಂದರ್ಭದಲ್ಲಿ ಮಹಿಳೆಯರಿಗೆ ಅಲಭ್ಯವಾಗಿದ್ದವು. ಇಂತಹ ಬೆಳವಣಿಗೆಗಳ ನಡುವೆ ಈ ಕುರಿತಾದ ಲಿಂಗತ್ವ ಸಂವೇದನಾಶೀಲತೆ ಬಜೆಟ್ ಪ್ರಸ್ತಾವಗಳಲ್ಲಿ ಪ್ರದರ್ಶಿತವಾಗದಿರುವುದು ವಿಷಾದನೀಯ.

2021–22ರ ಬಜೆಟ್ ಪ್ರಸ್ತಾವಗಳು ಆರು ಸ್ತಂಭಗಳ ಮೇಲೆ ನಿಂತಿವೆ ಎಂದು ಬಣ್ಣಿಸಲಾಗಿದೆ. 'ಆಶೋತ್ತರಗಳನ್ನು ಹೊಂದಿದ ಭಾರತಕ್ಕಾಗಿ ಎಲ್ಲರನ್ನೂ ಒಳಗೊಳ್ಳುವ ಅಭಿವೃದ್ಧಿ' ಹಾಗೂ 'ಮಾನವ ಬಂಡವಾಳದ ಪುನಶ್ಚೇತನ' ಎಂಬ ಎರಡು ಸ್ತಂಭಗಳೂ ಇದರಲ್ಲಿ ಸೇರಿದ್ದು ಮಹಿಳಾ ವಿಚಾರಗಳು ಇವುಗಳಲ್ಲಿ ಪ್ರಸ್ತಾಪವೇ ಆಗದಿರುವುದು ಅಚ್ಚರಿಯ ಸಂಗತಿ.

ಕೋವಿಡ್ –19 ಪಿಡುಗಿನಿಂದಾಗಿ 2019ರ ಡಿಸೆಂಬರ್ ನಿಂದ 2020ರ ಡಿಸೆಂಬರ್ ವರೆಗೆ ಔದ್ಯೋಗಿಕ ರಂಗದ ಕುಸಿತದ ಪ್ರಮಾಣ ಮಹಿಳೆಗೆ 14% ಇದ್ದರೆ ಪುರುಷನಿಗೆ 1% ಇದೆ ಎಂಬುದನ್ನು ಸಮೀಕ್ಷೆಗಳು ಹೇಳುತ್ತಿವೆ. ಈ ಅಂತರಗಳು ಹಾಗೂ ಇವನ್ನು ಮುಚ್ಚುವ ಬಗೆಗಳ ಕುರಿತಾದ ಸೂಕ್ಷ್ಮತೆ ಬಜೆಟ್ ಪ್ರಸ್ತಾವಗಳಲ್ಲಿ ಇಲ್ಲ.

ಕೋವಿಡ್ 19 ವೈರಸ್ ವಿರುದ್ಧದ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದವರು ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರು. ಈ ಸಮುದಾಯದ ಅಸಮಾನ ವೇತನಗಳ ಬಗ್ಗೆ ಬಜೆಟ್ ಮೌನ ತಾಳಿದೆ.

ಬಜೆಟ್ ಎನ್ನುವುದು ಹಣಕಾಸು ಹಂಚಿಕೆಗೆ ಸಂಬಂಧಿಸಿದ ಪ್ರಸ್ತಾವಗಳು ಎಂಬುದು ಸರಿ. ಆದರೆ, ವಿಸ್ತೃತ ಸರ್ಕಾರಿ ನೀತಿ ಹಾಗೂ ಸರ್ಕಾರದ ಆದ್ಯತೆಗಳನ್ನೂ ಬಿಂಬಿಸುತ್ತದೆ ಇದು ಎಂಬುದು ನಮ್ಮ ನೆನಪಿನಲ್ಲಿರಬೇಕು.

ನಾವು 2025ರೊಳಗೆ ಐದು ಟ್ರಿಲಿಯನ್ ಡಾಲರ್ ಆರ್ಥಿಕತೆಯತ್ತ ಹೆಜ್ಜೆ ಹಾಕುತ್ತಿದ್ದು ಹೊಸ ವಿಶ್ವ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರ ವಹಿಸಲಿದ್ದೇವೆ ಎಂಬಂಥ ಮಾತುಗಳನ್ನಾಡುತ್ತಿರುವ ಸಂದರ್ಭದಲ್ಲಿಯೇ ಔದ್ಯೋಗಿಕ ರಂಗದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ (ಫೀಮೇಲ್ ಲೇಬರ್ ಫೋರ್ಸ್ ಪಾರ್ಟಿಸಿಪೇಷನ್ – ಎಫ್.ಎಲ್. ಎಫ್.ಪಿ.) ಆತಂಕಕಾರಿ ಪ್ರಮಾಣದಲ್ಲಿ ಕಡಿಮೆಯಾಗುತ್ತಿರುವುದನ್ನು ನೋಡುತ್ತಿದ್ದೇವೆ. ವಿಶ್ವಬ್ಯಾಂಕ್ ವರದಿ ಪ್ರಕಾರ, ಔದ್ಯೋಗಿಕ ರಂಗದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಪ್ರಮಾಣ 1990ರಲ್ಲಿ ಶೇಕಡಾ 30.3ರಷ್ಟಿದ್ದು 2020ರಲ್ಲಿ ಶೇಕಡಾ 20.3ಕ್ಕೆ ಕುಸಿದಿದೆ. ಇಂತಹ ನಿರಾಶಾದಾಯಕ ವಾತಾವರಣದಲ್ಲಿ, ಲಿಂಗತ್ವ ಸಂವೇದಿ ಸ್ಪಂದನಗಳಿಂದ ಬಜೆಟ್ ಮೂಲಕ ತುಂಬಬಹುದಾಗಿದ್ದ ಚೈತನ್ಯ ಕಾಣೆಯಾಗಿದೆ.

ಪ್ರಧಾನಮಂತ್ರಿ ಆವಾಸ್ ಯೋಜನಾ (ಪಿಎಂಎವೈ – ನಗರ ಮತ್ತು ಗ್ರಾಮೀಣ), ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ (ಎಂ.ಜಿ.ಎನ್.ಆರ್.ಇ.ಜಿ.ಎಸ್), ಸಮಗ್ರ ಶಿಕ್ಷಾ, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್–ಈ ಯೋಜನೆಗಳೇ ಜೆಂಡರ್ ಬಜೆಟ್ ನ ಬಹುಪಾಲನ್ನು ಸಾಮಾನ್ಯವಾಗಿ ಒಳಗೊಂಡಿರುತ್ತವೆ. ಜೊತೆಗೆ, ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ಅಂಗನವಾಡಿ ಸೇವೆ, ಪೋಷಣ್ ಅಭಿಯಾನ, ಹದಿಹರೆಯದ ಬಾಲಕಿಯರ ಯೋಜನೆ ಹಾಗೂ ರಾಷ್ಟ್ರೀಯ ಕ್ರೆಷ್ ಸ್ಕೀಮ್ ನಂತಹ ಯೋಜನೆಗಳನ್ನೆಲ್ಲಾ ಒಳಗೊಂಡ ಹೊಸದೊಂದು ಉಪಕ್ರಮ ಈ ಬಾರಿ 'ಸಕ್ಷಮ ಅಂಗನವಾಡಿ ಮತ್ತು ಪೋಷಣ್ 2.0' ಹೆಸರಲ್ಲಿ ಸೇರ್ಪಡೆಯಾಗಿದೆ. 2018–19ರಿಂದ 2020–21ರವರೆಗಿನ ಜೆಂಡರ್ ಬಜೆಟ್ ಗಳಲ್ಲಿ ಅರ್ಧದಷ್ಟನ್ನು ಈ ಯೋಜನೆಗಳೇ ಆಕ್ರಮಿಸಿಕೊಂಡಿದ್ದವು. ಈಗ ಮತ್ತೆ 2021–22ರ ಸಾಲಿನ ಜೆಂಡರ್ ಬಜೆಟ್ ನಲ್ಲೂ ಈ ಯೋಜನೆಗಳಿಗೆ ಹಣ ಹಂಚಿಕೆ, ಮೇಲುಗೈ ಪಡೆದಿದೆ.

ಪ್ರಧಾನ ಮಂತ್ರಿ ಆವಾಸ್ ಯೋಜನೆಯಲ್ಲಿ (ಪಿಎಂಎವೈ – ನಗರ) 2020–21ರಲ್ಲಿದ್ದ 32.4% ನಷ್ಟು ಮಹಿಳಾ ನಿರ್ದಿಷ್ಟ ಭಾಗವನ್ನು ಪ್ರಸಕ್ತ ಸಾಲಿನಲ್ಲಿ 90.7%ಗೆ ಏರಿಸಲಾಗಿದೆ. ಆಸ್ತಿ ಮಾಲೀಕತ್ವದ ಮೂಲಕ ಮಹಿಳಾ ಆರ್ಥಿಕ ಸಶಕ್ತೀಕರಣಕ್ಕೆ ನೆರವಾಗುವ ಕ್ರಮ ಇದು ಎನ್ನಬಹುದು. ಹಾಗೆಯೇ ಪಶ್ಚಿಮ ಬಂಗಾಳ ಹಾಗೂ ಅಸ್ಸಾಂ ರಾಜ್ಯಗಳ ಚಹಾ ಕಾರ್ಮಿಕರ ಕ್ಷೇಮಾಭಿವೃದ್ಧಿಗೆ ವಿಶೇಷವಾಗಿ ಮಹಿಳೆಯರು ಹಾಗೂ ಮಕ್ಕಳಿಗೆ ರೂ1000 ಕೋಟಿ ಹಣ ಹಂಚಿಕೆಯಾಗಿದೆ. ಈ ರಾಜ್ಯಗಳಲ್ಲಿ ಚುನಾವಣೆ ಸನಿಹದಲ್ಲಿರುವುದರಿಂದ ರಾಜಕೀಯ ಉದ್ದೇಶಗಳನ್ನು ತಳ್ಳಿಹಾಕುವಂತಿಲ್ಲ. ಚಹಾ ತೋಟಗಳಲ್ಲಿ ಕೆಲಸ ಮಾಡುವವರಲ್ಲಿ 50%ಗಿಂತ ಹೆಚ್ಚಿನವರು ಮಹಿಳೆಯರು ಎಂಬುದಿಲ್ಲಿ ಮುಖ್ಯ.

ಮಹಿಳೆಯರ ಜೀವನೋಪಾಯಕ್ಕೆ ಭದ್ರತೆ ನೀಡಬಹುದಾದ ಎಂ.ಜಿ.ಎನ್.ಆರ್.ಇ.ಜಿ.ಎಸ್ ಗೆ ಹಣ ಹಂಚಿಕೆಯು 2020–21ರ ಪರಿಷ್ಕೃತ ಅಂದಾಜಿಗೆ ಹೋಲಿಸಿದಲ್ಲಿ 34.5% ಇಳಿಕೆಯಾಗಿದೆ.

ಈ ಬಾರಿಯ ಬಜೆಟ್ ಇದೇ ಮೊದಲ ಬಾರಿಗೆ ಪೂರ್ಣ ಕಾಗದ ರಹಿತವಾಗಿತ್ತು. ಮೇಡ್ ಇನ್ ಇಂಡಿಯಾ ಟ್ಯಾಬ್ಲೆಟ್ ನಲ್ಲಿ ಅಳವಡಿಸಿದ ಪ್ರತಿಯನ್ನು ಓದುವ ಮೂಲಕ ಸಂಸತ್ ನಲ್ಲಿ ಹಣಕಾಸು ಸಚಿವೆ ಬಜೆಟ್ ಮಂಡಿಸಿದರು.

ಡಿಜಿಟಲ್ ಸಂಪರ್ಕ ಹಾಗೂ ಬಳಕೆಯ ಕೌಶಲಗಳಲ್ಲಿ ಹೆಣ್ಣುಮಕ್ಕಳು ಹಿಂದಿದ್ದಾರೆ ಎಂಬುದು ಕಹಿ ವಾಸ್ತವ. 2017 –18ರಲ್ಲಿ ನಡೆಸಲಾದ 75ನೇ ರಾಷ್ಟ್ರೀಯ ಸ್ಯಾಂಪಲ್ ಸರ್ವೆ ಪ್ರಕಾರ, 20% ಪುರುಷರಿಗೆ ಕಂಪ್ಯೂಟರ್ ಬಳಕೆ ಗೊತ್ತಿತ್ತು. ಮಹಿಳೆಯರಲ್ಲಿ ಈ ಪ್ರಮಾಣ 12.8%. 14.9% ಮಹಿಳೆಯರಿಗೆ ಅಂತರ್ಜಾಲ ಬಳಕೆ ಗೊತ್ತಿತ್ತು. ಇವರಿಗೆ ಹೋಲಿಸಿದಲ್ಲಿ ಅಂತರ್ಜಾಲ ಬಳಕೆ ಗೊತ್ತಿದ್ದ ಪುರುಷರ ಪ್ರಮಾಣ 25%. ಭಾರತದಲ್ಲಿ 71% ಪುರುಷರು ಮೊಬೈಲ್ ಫೋನ್ ಹೊಂದಿದ್ದರೆ ಮೊಬೈಲ್ ಫೋನ್ ಹೊಂದಿರುವ ಮಹಿಳೆಯರ ಪ್ರಮಾಣ 38%. ಹೀಗಾಗಿ, ಡಿಜಿಟಲ್ ಮೂಲ ಸೌಕರ್ಯ, ಸೈಬರ್ ಭದ್ರತಾ ವ್ಯವಸ್ಥೆ , ಅಂತರ್ಜಾಲ ಹಾಗೂ ಸಾಧನಗಳ ಲಭ್ಯತೆಗೆ ಸಂಬಂಧಿಸಿದಂತೆ ವಾಸ್ತವತೆಗಳನ್ನು ಅರ್ಥ ಮಾಡಿಕೊಳ್ಳಬೇಕು. ಇವುಗಳ ನಿರ್ವಹಣೆಯಾಗದಿದ್ದಲ್ಲಿ ಮಹಿಳೆಯರು ಮತ್ತಷ್ಟು ಹಿನ್ನಡೆ ಅನುಭವಿಸಲಿದ್ದಾರೆ.

ಕೊರೊನಾದಿಂದಾಗಿ ಮಹಿಳೆ ಬದುಕಿನ ಮೇಲಾದ ತೀವ್ರತರ ಪರಿಣಾಮಗಳನ್ನು ಪರಿಗಣಿಸಿ ಸರ್ಕಾರಗಳು ಕ್ರಮಗಳನ್ನು ಕೈಗೊಳ್ಳಲು ಜಾಗತಿಕ ನೆಲೆಯಲ್ಲಿ ಕೆಲವೊಂದು ಅಲ್ಪಾವಧಿ ಆದ್ಯತಾ ಕ್ಷೇತ್ರಗಳನ್ನು ವಿಶ್ವಸಂಸ್ಥೆ ಗುರುತಿಸಿದೆ. ಸಾಮಾಜಿಕ ರಕ್ಷಣೆ, ಕೌಟುಂಬಿಕ ಹಿಂಸೆ ತಡೆ, ಕೌಶಲ ತರಬೇತಿ, ಸಾರ್ವಜನಿಕ ಸಾರಿಗೆ, ಡಿಜಿಟಲ್ ಸಾಕ್ಷರತೆ ಹಾಗೂ ವೇತನರಹಿತ ಕೆಲಸಕ್ಕೆ ಬೆಂಬಲದಂತಹ ಕ್ಷೇತ್ರಗಳು ಇವುಗಳಲ್ಲಿ ಸೇರಿವೆ ಎಂಬುದನ್ನು ನಾವು ಗಮನಿಸಬೇಕು.

ಆದರೆ, ಸಂಬಲ್ ಯೋಜನೆ ಅಡಿ – ಈ ಬಾರಿ ಅನೇಕ ಯೋಜನೆಗಳನ್ನೇ ಒಟ್ಟುಗೂಡಿಸಿಬಿಡಲಾಗಿದೆ. ಒನ್ ಸ್ಟಾಪ್ ಸೆಂಟರ್, ಮಹಿಳಾ ಪೊಲೀಸ್ ವಾಲಂಟಿಯರ್, ಮಹಿಳಾ ಸಹಾಯವಾಣಿ, ಸ್ವಾಧಾರ್ ಗೃಹ್, ಉಜ್ವಲಾ, ವಿಧವಾ ಗೃಹಗಳು, ದುಡಿಯುವ ಮಹಿಳೆಯರ ಹಾಸ್ಟೆಲ್ ಯೋಜನೆಗಳು 'ಸಂಬಲ್'ಗೆ ಸೇರ್ಪಡೆಯಾಗುತ್ತವೆ. ಹಾಗೆಯೇ ಕೌಟುಂಬಿಕ ದೌರ್ಜನ್ಯ, ಮಕ್ಕಳಿಗೆ ಕ್ರೆಷ್ ಸೌಲಭ್ಯಗಳನ್ನೂ 'ಸಂಬಲ್' ಹಾಗೂ 'ಸಾಮರ್ಥ್ಯ 'ದಂತಹ ಹೊಸ ವರ್ಗದಡಿ ಒಟ್ಟಾಗಿ ತರಲಾಗಿದೆ. ಈ ವಿಸ್ತೃತ ಶೀರ್ಷಿಕೆ – ವರ್ಗಗಳಡಿ ನಿರ್ದಿಷ್ಟ ಯೋಜನೆಗಳಿಗೆ ಎಷ್ಟು ಹಣ ಹಂಚಿಕೆ ಆಗುತ್ತದೆ ಎಂದು ಊಹಿಸುವುದು ಕಷ್ಟ.

ಉದಾಹರಣೆಗೆ, ಹೆಣ್ಣು ಮಗುವಿಗೆ ಸಂಬಂಧಿಸಿದಂತೆ ರೂ. 100 ಕೋಟಿಗಳ ಆರಂಭದ ನಿಧಿಯೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರು 2015ರಲ್ಲಿ ಆರಂಭಿಸಿದ 'ಬೇಟಿ ಬಚಾವೊ ಬೇಟಿ ಪಢಾವೊ' ಯೋಜನೆ ತೆಗೆದುಕೊಳ್ಳಬಹುದು. ಪ್ರತಿವರ್ಷ ಭಾರಿ ಹಂಚಿಕೆ ಪಡೆದುಕೊಂಡ ಈ ಯೋಜನೆಗೆ 2018 ಹಾಗೂ 2019ರಲ್ಲಿ ಹಂಚಿಕೆಯಾದದ್ದು ತಲಾ ರೂ280 ಕೋಟಿ. 2020ರಲ್ಲಿ ರೂ.220 ಕೋಟಿ ಹಂಚಿಕೆಯಾಗಿತ್ತು. ಈಗ, ಈ ಸಾಲಿನ ಬಜೆಟ್‌ನಲ್ಲಿ ಈ ಯೋಜನೆಗೆ ನಿರ್ದಿಷ್ಟವಾಗಿ ಹಣ ಹಂಚಿಕೆಯಾಗಿಲ್ಲ. ಜೊತೆಗೆ, ಇದನ್ನು ಪ್ರಧಾನ ಮಂತ್ರಿ ಮಾತೃ ವಂದನಾ ಯೋಜನೆ, ಜೆಂಡರ್ ರಿಸರ್ಚ್, ಸ್ಕಿಲಿಂಗ್ ಹಾಗೂ ಟ್ರೇನಿಂಗ್ ನಂತಹ ಯೋಜನೆಗಳ ಜೊತೆಗೆ ಸೇರಿಸಲಾಗಿದೆ. ಇಂತಹ ಸಂದರ್ಭದಲ್ಲಿ ಯೋಜನೆಗಳಿಗೆ ನಿರ್ದಿಷ್ಟ ಹಣಹಂಚಿಕೆಗೆ ಹಗ್ಗಜಗ್ಗಾಟ ಶುರುವಾಗಬಹುದು.

ಜವಳಿ ಉದ್ಯಮ ರಂಗದಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಹೀಗಾಗಿ, ಮುಂದಿನ ಮೂರು ವರ್ಷಗಳಲ್ಲಿ ಏಳು ಬೃಹತ್ ಹೂಡಿಕೆಯ ಜವಳಿ ಪಾರ್ಕ್‌ಗಳ ಪ್ರಸ್ತಾವ – ಮಹಿಳಾ ಉದ್ಯೋಗಕ್ಕೆ ಇಂಬು ನೀಡಬಹುದೆಂಬುದು ನಿರೀಕ್ಷೆ ಹಾಗೂ ಆಶಯ. ಎಲ್ಲಾ ವಲಯಗಳಲ್ಲಿ 'ಸೂಕ್ತ ರಕ್ಷಣಾ ಕ್ರಮ'ಗಳೊಂದಿಗೆ ರಾತ್ರಿ ಪಾಳಿಗಳ ಕೆಲಸಗಳಿಗೂ ಮಹಿಳೆಗೆ ಅವಕಾಶ ನೀಡಿರುವುದು ಸಕಾರಾತ್ಮಕ.

ಆರೋಗ್ಯ ವಲಯದ ಮಹಿಳಾ ಕೆಲಸಗಾರರಿಗೆ ಸಂಬಂಧಿಸಿದಂತೆ ಮಾಡಿರುವ ಏಕೈಕ ಪ್ರಕಟಣೆ ಎಂದರೆ ರಾಷ್ಟ್ರೀಯ ನರ್ಸಿಂಗ್ ಮತ್ತು ಮಿಡ್ ವೈಫರಿ ಆಯೋಗ ಮಸೂದೆ.

ಪುಟ 14 ಕ್ಕೆ

ಐದು ವಿಧಾನಸಭಾ ಚುನಾವಣೆಗಳ ಮಹತ್ವ ಹಾಗೂ ಸವಾಲುಗಳು

ಪ್ರಕಾಶ್ ಕಾರಟ್



ಆಯಾ ರಾಜ್ಯದ ರಾಜಕೀಯ ಹಿನ್ನೆಲೆಯಲ್ಲಿ ಪ್ರತಿಯೊಂದು ರಾಜ್ಯಕ್ಕೆ ಈ ಚುನಾವಣೆಗಳು ಅದರದ್ದೇ ಆದ ಮಹತ್ವ ಹೊಂದಿದೆ. ಆದರೆ, ಒಟ್ಟಾರೆಯಾಗಿ ನೋಡಿದರೆ ಅದು ಒಂದು ವ್ಯಾಪಕ ರಾಷ್ಟ್ರೀಯ ಮಹತ್ವವನ್ನೂ ಪಡೆದಿದೆ. ಈ ಚುನಾವಣೆಯ ಫಲಿತಾಂಶವು ಇಡೀ ದೇಶದಲ್ಲಿ ಬಿಜೆಪಿಯ ಏಕಾಧಿಪತ್ಯ ಸ್ಥಾಪಿಸುವ ಪ್ರಸ್ತುತ ಪ್ರಯತ್ನಕ್ಕೆ ಇಂಬು ನೀಡಲಿದೆಯೇ ಅಥವಾ ಈ ಸರ್ವಾಧಿಕಾರಶಾಹೀ ಧಾವಂತಕ್ಕೆ ವಿರೋಧವನ್ನು ಅದು ಬಲಪಡಿಸಲಿದೆಯೇ ಎನ್ನುವ ಪ್ರಶ್ನೆ ಎಲ್ಲರ ಮುಂದಿದೆ.

ಬಿಜೆಪಿ ಏಕಾಧಿಪತ್ಯಕ್ಕೆ ಬ್ರೇಕ್ ಹಾಕುವುದೇ ಈ ಚುನಾವಣೆಗಳು?

ಅಸ್ಸಾಂ, ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ ಮತ್ತು ಕೇಂದ್ರಾಡಳಿತ ಪ್ರದೇಶ ಪುದುಚೇರಿ ವಿಧಾನಸಭೆಗಳ ಚುನಾವಣೆ ವೇಳಾಪಟ್ಟಿ ಪ್ರಕಟವಾಗಿದೆ. ಮಾರ್ಚ್ 27ರಿಂದ ಏಪ್ರಿಲ್ 29ರ ವರೆಗೆ ಮತದಾನ ನಡೆಯಲಿದೆ.

ಆಯಾ ರಾಜ್ಯದ ರಾಜಕೀಯ ಹಿನ್ನೆಲೆಯಲ್ಲಿ ಪ್ರತಿಯೊಂದು ರಾಜ್ಯಕ್ಕೆ ಈ ಚುನಾವಣೆಗಳು ಅದರದ್ದೇ ಆದ ಮಹತ್ವ ಹೊಂದಿದೆ. ಆದರೆ, ಒಟ್ಟಾರೆಯಾಗಿ ನೋಡಿದರೆ ಅದು ಒಂದು ವ್ಯಾಪಕ ರಾಷ್ಟ್ರೀಯ ಮಹತ್ವವನ್ನೂ ಪಡೆದಿದೆ. ಈ ಚುನಾವಣೆಯ ಫಲಿತಾಂಶವು ಇಡೀ ದೇಶದಲ್ಲಿ ಒಂದೇ ಪಕ್ಷದ ಏಕಾಧಿಪತ್ಯ ಸ್ಥಾಪಿಸುವ ಬಿಜೆಪಿಯ ಪ್ರಸ್ತುತ ಪ್ರಯತ್ನಕ್ಕೆ ಇಂಬು ನೀಡಲಿದೆಯೇ ಅಥವಾ ಈ ಸರ್ವಾಧಿಕಾರಶಾಹೀ ಧಾವಂತಕ್ಕೆ ವಿರೋಧವನ್ನು ಅದು ಬಲಪಡಿಸಲಿದೆಯೇ ಎನ್ನುವ ಪ್ರಶ್ನೆ ಎಲ್ಲರ ಮುಂದಿದೆ.

ಈ ಐದು ರಾಜ್ಯಗಳ ಪೈಕಿ ಅಸ್ಸಾಮ್‌ನಲ್ಲಿ ಮಾತ್ರ ಬಿಜೆಪಿ ಆಡಳಿತವಿದೆ. ಬಿಜೆಪಿ ಮೈತ್ರಿಕೂಟ 2016ರಲ್ಲಿ ಅದೇ ಮೊದಲ ಬಾರಿಗೆ ಈ ರಾಜ್ಯದಲ್ಲಿ ಅಸೆಂಬ್ಲಿ ಚುನಾವಣೆಯಲ್ಲಿ ಗೆಲುವು ದಾಖಲಿಸಿತ್ತು. ಈ ಗೆಲುವು, ಈಶಾನ್ಯ ಭಾರತದಲ್ಲಿ ಬಿಜೆಪಿಯ ಮುನ್ನಡೆಗೆ ನೆರವಾಯಿತು. ಏನಾದರೂ ಮಾಡಿ–ಹೇಗಾದರೂ ಮಾಡಿ ಅನ್ನುವಂತೆ ವಾಮಮಾರ್ಗದಿಂದ ತ್ರಿಪುರಾ, ಮಣಿಪುರ ಮತ್ತು ಅರುಣಾಚಲ ಪ್ರದೇಶದಲ್ಲಿ ಅದು ಅಧಿಕಾರ ಹಿಡಿಯಿತು.

ಅಸ್ಸಾಮ್‌ನಲ್ಲಿ ತನ್ನ ಕೋಮುವಾದಿ ಕಾರ್ಯಸೂಚಿಯನ್ನು ಮುಂದಕ್ಕೊಯ್ಯಲು ಬಿಜೆಪಿಯು ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ) ಮತ್ತು ಪೌರತ್ವ ತಿದ್ದುಪಡಿ ಕಾನೂನು (ಸಿಎಎ) ಇವುಗಳನ್ನು ದಾಳಗಳಾಗಿ ಬಳಸಲು ಮುಂದಾಗಿದೆ. ಚುನಾವಣೆಗೆ ಮುಂಚೆಯೂ ಕೋಮುವಾದಿ ಧ್ರುವೀಕರಣಕ್ಕಾಗಿ ಬಿಜೆಪಿ ನಾಯಕತ್ವ ಇನ್ನಿಲ್ಲದ ಪ್ರಯತ್ನ ನಡೆಸುತ್ತಿದೆ. ಹೀಗಾಗಿ ಅಸ್ಸಾಮ್ ಚುನಾವಣೆಯಲ್ಲಿ ಬಿಜೆಪಿ ಮೈತ್ರಿಕೂಟವನ್ನು ಸೋಲಿಸುವುದು ಅತ್ಯಂತ ಮಹತ್ವದ್ದಾಗಿದೆ. ಈ ನಿಟ್ಟಿನಲ್ಲಿ ಕಾಂಗ್ರೆಸ್, ಎಐಯುಡಿಎಫ್, ಸಿಪಿಐ (ಎಂ), ಸಿಪಿಐ, ಸಿಪಿಐ (ಎಂಎಲ್), ಆಂಚಲಿಕ್ ಗಣ ಮೋರ್ಚಾ ಮತ್ತು ಬೋಡೋಲ್ಯಾಂಡ್ ಪೀಪಲ್ಸ್ ಫ್ರಂಟ್– ಹೀಗೆ ಏಳು ಪಕ್ಷಗಳನ್ನು ಒಳಗೊಂಡ ಸಂಯೋಜನೆಯೊಂದು ರೂಪುಗೊಂಡಿದೆ. ಬಿಜೆಪಿ ಕೂಟದ ವಿರುದ್ಧ ಪರಿಣಾಮಕಾರಿಯಾದ ಹೋರಾಟ ನಡೆಸಲು ಈ ಪ್ರತಿಪಕ್ಷಗಳ ಸಂಯೋಜನೆಗೆ ಸಾಧ್ಯವಾಗಬೇಕು.

ತಮಿಳುನಾಡಿನಲ್ಲಿ 2016ರಲ್ಲಿ ಜಯಲಲಿತಾ ನೇತೃತ್ವದಲ್ಲಿ ಎಐಎಡಿಎಂಕೆ ಮೈತ್ರಿಕೂಟ ಬಹುಮತ ಸಾಧಿಸಿ ಇನ್ನೊಂದು ಅವಧಿಗೆ ಸರ್ಕಾರ ರಚಿಸಲು ಶಕ್ತವಾಗಿತ್ತು. ಬಿಜೆಪಿ ಆ ಮೈತ್ರಿಕೂಟದ ಭಾಗವಾಗಿರಲಿಲ್ಲ. ಆದರೆ ಜಯಲಲಿತಾರ ನಿಧನಾನಂತರ ಎಐಎಡಿಎಂಕೆ ನಾಯಕತ್ವದಲ್ಲಿ ಒಡಕುಂಟಾಯಿತು. ಅದು ರಾಜ್ಯದಲ್ಲಿ ಮಧ್ಯಪ್ರವೇಶಿಸಲು ಬಿಜೆಪಿ ಕೇಂದ್ರ ಸರ್ಕಾರಕ್ಕೆ ಅವಕಾಶ ಮಾಡಿಕೊಟ್ಟಿತು. ಅಗಿನಿಂದಲೂ ಎಐಎಡಿಎಂಕೆ ಪಕ್ಷ ಬಿಜೆಪಿಯ ಮಿತ್ರನಾಗಿ ಮುಂದುವರಿದಿದೆ.

2019ರ ಲೋಕಸಭೆ ಚುನಾವಣೆಗಳಲ್ಲಿ ಎಐಎಡಿಎಂಕೆ–ಬಿಜೆಪಿ ಕೂಟ ಧೂಳೀಪಟವಾಯಿತು. ಎಡ ಪಕ್ಷಗಳೂ ಇದ್ದ ಡಿಎಂಕೆ ನೇತೃತ್ವದ ಕೂಟ ಭರ್ಜರಿ ಜಯಭೇರಿ ಬಾರಿಸಿತು. 39 ಲೋಕಸಭಾ ಸ್ಥಾನಗಳ ಪೈಕಿ 38ರಲ್ಲಿ ಈ ಕೂಟ ಗೆಲುವು ದಾಖಲಿಸಿತು. ಇದೀಗ ಬಿಜೆಪಿ ತಮಿಳುನಾಡಿನಲ್ಲಿ ತನ್ನ ಪ್ರಭಾವ ಸ್ಥಾಪಿಸಿ ಬಲವರ್ಧಿಸಿಕೊಳ್ಳಲು ಎಐಎಡಿಎಂಕೆಯನ್ನು ಬದಲಾಳು ಆಗಿ ಬಳಸಿಕೊಳ್ಳುತ್ತಿದೆ. ಆದ್ದರಿಂದ ಪ್ರಸಕ್ತ ಚುನಾವಣೆ ಎಂದಿನಂತೆ ಎರಡು ದ್ರಾವಿಡ ಪಕ್ಷಗಳು ಹಾಗೂ ಅವುಗಳ ಮಿತ್ರ ಪಕ್ಷಗಳ ನಡುವಿನ ಮಾಮೂಲಿ ಹೋರಾಟವಲ್ಲ. ಎಐಎಡಿಎಂಕೆ ವಿರುದ್ಧದ ಹೋರಾಟ ಬಿಜೆಪಿಯನ್ನು ಹಾಗೂ ಅದರ ಮುನ್ನಡೆಯನ್ನು ತಡೆಯಲು ಮಾಡುವ ಸಂಘರ್ಷವೂ ಆಗುತ್ತದೆ.

ಸಿಪಿಐ (ಎಂ), ಸಿಪಿಐ, ವಿಸಿಕೆ ಮತ್ತು ಎಂಡಿಎಂಕೆ ಈ ನಾಲ್ಕು ಪಕ್ಷಗಳು ಜನ ಕಲ್ಯಾಣ ರಂಗವಾಗಿ ಪ್ರತ್ಯೇಕವಾಗಿ ಅಸೆಂಬ್ಲಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದೇ 2016ರಲ್ಲಿ ಡಿಎಂಕೆ ಕೂಟ ಗೆಲುವು ಸಾಧಿಸದಿರಲು ಕಾರಣವಾಗಿತ್ತು. ಈ ನಾಲ್ಕು ಪಕ್ಷಗಳಿಗೆ ನ್ಯಾಯಸಮ್ಮತವಾಗಿ ಸ್ಥಾನಗಳನ್ನು ಹಂಚುವ ಮೂಲಕ ಡಿಎಂಕೆಯು ಮೈತ್ರಿಕೂಟವನ್ನು ಬಲಪಡಿಸಬೇಕು.

ಪುದುಚೇರಿಯಲ್ಲಿ ಚುನಾವಣೆಯ ಹೊಸ್ತಿಲಲ್ಲಿ ಬಿಜೆಪಿ ತೀರಾ ಹೇಯ ಮಾರ್ಗ ಬಳಸಿ ಕಾಂಗ್ರೆಸ್ ಸರ್ಕಾರವನ್ನು ಉರುಳಿಸಿದೆ. ಮೊದಲು ಉಪ–ರಾಜ್ಯಪಾಲರ ಮೂಲಕ ಸರ್ಕಾರ ಸುಸೂತ್ರವಾಗಿ ನಡೆಯಲು ಬಿಟ್ಟಿರಲಿಲ್ಲ; ನಂತರ ಪಕ್ಷಾಂತರಕ್ಕೆ ಕುಮ್ಮಕ್ಕು ನೀಡಲಾಯಿತು. ಕಾಂಗ್ರೆಸ್ ಪಕ್ಷ ಮೊದಲೇ ಗುಂಪುಗಾರಿಕೆ ಮತ್ತು ಎನ್‌ಆರ್ ಕಾಂಗ್ರೆಸ್ ರಚನೆಯಿಂದಾಗಿ ದುರ್ಬಲಗೊಂಡಿತ್ತು. ಅಲ್ಲೀಗ ರಾಷ್ಟ್ರಪತಿ ಆಡಳಿತ ಹೇರಲಾಗಿದೆ. ಎನ್‌ಆರ್ ಕಾಂಗ್ರೆಸ್–ಎಐಎಡಿಎಂಕೆ–ಬಿಜೆಪಿ ಕೂಟ ಈ ಕೇಂದ್ರಾಡಳಿತ ಪ್ರದೇಶದಲ್ಲಿ ಅಧಿಕಾರಕ್ಕೆ ಬರಲು ಹಣ ಬಲವನ್ನು ಯಥೇಚ್ಛವಾಗಿ ಬಳಸುವುದು ನಿಶ್ಚಿತವಾಗಿದೆ. ಬಿಜೆಪಿಯ ಆಟವನ್ನು ವಿಫಲಗೊಳಿಸಲು ಕಾಂಗ್ರೆಸ್–ಡಿಎಂಕೆ– ಎಡಪಕ್ಷಗಳ ಕೂಟ ಎಷ್ಟು ಪರಿಣಾಮಕಾರಿಯಾಗಿ ಸವಾಲೊಡ್ಡಲಿದೆ ಎನ್ನುವುದನ್ನು ಕಾದು ನೋಡಬೇಕಿದೆ.

ಪಶ್ಚಿಮ ಬಂಗಾಳ ಮತ್ತು ಕೇರಳದಲ್ಲಿ ಎಡಪಕ್ಷಗಳ ಮುಂದೆ ಅತ್ಯಂತ ದೊಡ್ಡ ಸವಾಲಿದೆ.

ಪಶ್ಚಿಮ ಬಂಗಾಳದಲ್ಲಿ ಪರಿಸ್ಥಿತಿ ತೀರಾ ಸಂಕೀರ್ಣವಾಗಿದೆ. ಈ ರಾಜ್ಯದಲ್ಲಿ ಅಧಿಕಾರ ಹಿಡಿಯಲು ಬಿಜೆಪಿ ಗಂಭೀರ ಪ್ರಯತ್ನ ಮಾಡುತ್ತಿದೆ. ತನ್ನೆಲ್ಲ ಕಾರ್ಯಕರ್ತರನ್ನು ಹಾಗೂ ಸಂಪನ್ಮೂಲವನ್ನು ಆರ್‌ಎಸ್‌ಎಸ್ ಬೆಂಬಲದೊಂದಿಗೆ ಅದು ಸಂಪೂರ್ಣವಾಗಿ ಬಳಸಿಕೊಳ್ಳುತ್ತಿದೆ.

2019ರ ಲೋಕಸಭೆ ಚುನಾವಣೆಗಳಲ್ಲಿ ಟಿಎಂಸಿ ಮತ್ತು ಬಿಜೆಪಿ ನಡುವೆ ಧ್ರುವೀಕರಣವಾಗಿತ್ತು. 42ರಲ್ಲಿ ಬಿಜೆಪಿ 18 ಸ್ಥಾನಗಳಲ್ಲಿ ಗೆದ್ದಿತ್ತು. ಶೇಕಡ 40.6 ಮತಗಳನ್ನು ಗಳಿಸಿತ್ತು. ಈ ಎರಡರ ನಡುವೆ ಎಡರಂಗ ಅಪ್ಪಚ್ಚಿಯಾಗಿ ಕೇವಲ ಶೇಕಡ 7.4 ಮತ ಗಳಿಸಲು ಶಕ್ತವಾಗಿತ್ತು.

ಕಳೆದು ಹೋದ ನೆಲೆಯನ್ನು ಮರಳಿ ಗಳಿಸಲು ಸಿಪಿಐ (ಎಂ) ಮತ್ತು ಎಡರಂಗ ಸತತ ಪ್ರಯತ್ನ ನಡೆಸುತ್ತಿವೆ. ಕಳೆದ ಎರಡು ವರ್ಷಗಳಲ್ಲಿ ಎಡ ಪಕ್ಷಗಳು ಮತ್ತು ಸಾಮೂಹಿಕ ಸಂಘಟನೆಗಳು ನಡೆಸಿದ ಹೋರಾಟ ಮತ್ತು ಚಳವಳಿಗಳು ಅವುಗಳಿಗೆ ಜನಸಮೂಹದ ಬೆಂಬಲ ಗಳಿಸಿಕೊಡುವಲ್ಲಿ ಯಶಸ್ವಿಯಾಗಿವೆ. ಬಿಜೆಪಿ ಮತ್ತು ಟಿಎಂಸಿಯನ್ನು ಸೋಲಿಸಲು ಹಾಗೂ ಎಡ, ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ಪರ್ಯಾಯ ಸೃಷ್ಟಿಸಲು ಸಿಪಿಐ (ಎಂ) ಕರೆ ನೀಡಿದೆ.

ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಮುನ್ನಡೆಯ ಅಪಾಯ ವಾಸ್ತವವಾಗಿದೆ. ಇದರಿಂದಾಗಿ ಸಿಪಿಐ (ಎಂ) ಮತ್ತು ಎಡ ರಂಗವು ಟಿಎಂಸಿಯೊಂದಿಗೆ ಸಹಕರಿಸಬೇಕೆಂದು ಕೆಲವು ಉದಾರವಾದಿ ಹಾಗೂ ಎಡ ವಲಯಗಳು ಸಲಹೆ ಮಾಡುವಂತಾಗಿದೆ. ಆದರೆ ಹೀಗೆ ಮಾಡುವುದು ಎಡರಂಗಕ್ಕೆ ಆತ್ಮಹತ್ಯಾಕಾರಿಯಾಗಲಿದೆ ಹಾಗೂ ವಾಸ್ತವವಾಗಿ ಬಿಜೆಪಿಯ ಗೆಲುವಿಗೆ ಅನುಕೂಲವಾಗಲಿದೆ. ಟಿಎಂಸಿ ಹಾಗೂ ಅದರ ದಬ್ಬಾಳಿಕೆಯ ಆಡಳಿತದ ವಿರುದ್ಧ ವ್ಯಾಪಕ ಅತೃಪ್ತಿ ಮಡುಗಟ್ಟಿದೆ. ಎಡಪಕ್ಷಗಳು ಮಮತಾ ಬ್ಯಾನರ್ಜಿ ಬಗ್ಗೆ ಸೌಮ್ಯ ಧೋರಣೆ ತಳೆದರೆ ಎಲ್ಲ ಟಿಎಂಸಿ–ವಿರೋಧಿ ಮತದಾರರು ಬಿಜೆಪಿ ತೆಕ್ಕೆಗೆ ಬೀಳುವುದು ಖಚಿತ. ಎಡರಂಗ, ಕಾಂಗ್ರೆಸ್ ಮತ್ತು ಇತರ ಬಿಜೆಪಿಯೇತರ, ಟಿಎಂಸಿಯೇತರ ಶಕ್ತಿಗಳ ಒಂದು ಪರ್ಯಾಯ ಕೂಟವು ಈ ಜನರನ್ನು ತನ್ನೆಡೆಗೆ ಸೆಳೆದು ಬಿಜೆಪಿ ಹೆಚ್ಚುವರಿ ಮತ ಪಡೆಯುವುದನ್ನು ತಡೆಯಲು ಸಾಧ್ಯ ಎನ್ನುವುದು ವಾಸ್ತವವಾಗಿದೆ.

ಕೇರಳದಲ್ಲಿ ಸ್ಪರ್ಧೆಯಿರುವುದು ಎಲ್‌ಡಿಎಫ್ (ಎಡ ಪ್ರಜಾಸತ್ತಾತ್ಮಕ ರಂಗ) ಮತ್ತು ಯುಡಿಎಫ್ ನಡುವೆ. ಈ ಚುನಾವಣೆಗಳಲ್ಲಿ ಮುಖ್ಯ ಸ್ಪರ್ಧಿ ಆಗಲಾರೆ ಎನ್ನುವುದು ಬಿಜೆಪಿಗೆ ಚೆನ್ನಾಗಿ ಅರಿವಿರುವುದರಿಂದ ಮೂರನೇ ಶಕ್ತಿಯಾಗಲು ಅದು ಹೊರಟಿದೆ. ಪಿಣರಾಯಿ ವಿಜಯನ್ ನೇತೃತ್ವದ ಎಲ್‌ಡಿಎಫ್ ಸರ್ಕಾರ ಅಭಿವೃದ್ಧಿ ಕಾರ್ಯ ಮತ್ತು ಸಮಾಜ ಕಲ್ಯಾಣ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದೆ. ಅದಕ್ಕೆ ಅಪಾರ ಜನಮನ್ನಣೆ ಸಿಕ್ಕಿದ್ದು ಕಾಂಗ್ರೆಸ್ ಮತ್ತು ಯುಡಿಎಫ್ ಹತಾಶಗೊಂಡಿವೆ. ಕಾಂಗ್ರೆಸ್ ಪಕ್ಷ ಕಳೆದ ವರ್ಷವಿಡೀ ಬಿಜೆಪಿ ತಾಳಕ್ಕೆ ತಕ್ಕಂತೆ ಕುಣಿದು ಎಲ್‌ಡಿಎಫ್ ಸರ್ಕಾರ ಮತ್ತು ಮುಖ್ಯಮಂತ್ರಿ ವಿರುದ್ಧ ಆರೋಪ ಮಾಡುವಲ್ಲಿ ಕಾಲ ಕಳೆದಿತ್ತು. ಚಿನ್ನ ಕಳ್ಳಸಾಗಣೆ ಮತ್ತು ಅಸ್ತಿತ್ವದಲ್ಲೇ ಇಲ್ಲದ ಇತರ ಭ್ರಷ್ಟಾಚಾರ ಹಗರಣಗಳ ಆರೋಪ ಮಾಡಿತ್ತು. ಕಾಂಗ್ರೆಸ್ ಮತ್ತು ಬಿಜೆಪಿಗಳು ಸಾಥ್ ನೀಡಿ ಮಾಡಿದ 'ಹೋರಾಟಗಳಿಗೆ' ಮುಖ್ಯ ವಾಹಿನಿಯ ಮಾಧ್ಯಮಗಳು ನೆರವು ನೀಡಿದ್ದವು. ಆದರೆ 2020ರ ನವೆಂಬರ್‌ನಲ್ಲಿ ನಡೆದ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಎಲ್‌ಡಿಎಫ್‌ಗೆ ಅಭೂತಪೂರ್ವ ಗೆಲುವು ತಂದುಕೊಡುವ ಮೂಲಕ ರಾಜ್ಯದ ಜನರು ಈ ಎಲ್ಲ ಅಪಪ್ರಚಾರಗಳಿಗೆ ತಕ್ಕ ಉತ್ತರ ನೀಡಿದ್ದಾರೆ.

ಎಲ್‌ಡಿಎಫ್, ಇನ್ನೆರಡು ಪಕ್ಷಗಳು, ಕೇರಳ ಕಾಂಗ್ರೆಸ್ (ಎಂ) ಮತ್ತು ಎಲ್‌ಜೆಡಿ ಸೇರ್ಪಡೆಯಿಂದ ವಿಸ್ತಾರಗೊಂಡಿರುವ ಹೊಸ ಹುರುಪಿನೊಂದಿಗೆ ಹೊಸ ವಿಶ್ವಾಸದಿಂದ ಚುನಾವಣೆ ಕಣಕ್ಕೆ ಇಳಿದಿದೆ.

ಸಿಪಿಐ (ಎಂ) ಮತ್ತು ಎಲ್‌ಡಿಎಫ್, ಬಿಜೆಪಿ ಮತ್ತು ಕೋಮುವಾದಿ ಶಕ್ತಿಗಳ ವಿರುದ್ಧದ ಗಟ್ಟಿ ದನಿ ಎಂಬುದನ್ನು ಕೇರಳದ ಪ್ರಜಾಸತ್ತಾತ್ಮಕ, ಜಾತ್ಯತೀತ ಮನೋಭಾವದ ಜನರು ತಮ್ಮ ಅನುಭವದಿಂದ ತಿಳಿದುಕೊಂಡಿದ್ದಾರೆ. ಪ್ರತಿ ಐದು ವರ್ಷಕ್ಕೊಮ್ಮೆ ಎಲ್‌ಡಿಎಫ್ ಮತ್ತು ಯುಡಿಎಫ್‌ಗಳನ್ನು ಪರ್ಯಾಯವಾಗಿ ಆಯ್ಕೆ ಮಾಡುವ ಕೇರಳದ ದಾಖಲೆಯನ್ನು ಮುರಿದು ಎಲ್‌ಡಿಎಫ್ ಮರಳಿ ಅಧಿಕಾರಕ್ಕೆ ಬರುವ ಅವಕಾಶ ಉಜ್ವಲವಾಗಿದೆ. ಆದರೆ, ಕಾಂಗ್ರೆಸ್ ಮತ್ತು ಬಿಜೆಪಿಗಳೆರಡೂ ತಮ್ಮ ಸಾಮಾನ್ಯ ವೈರಿಯ ವಿರುದ್ಧ ಒಂದಾಗಲು ಹೇಸದ ಪಕ್ಷಗಳಾಗಿರುವುದರಿಂದ ಆತ್ಮತೃಪ್ತಿಯಿಂದ ಸುಮ್ಮನಿರುವುದು ತರವಲ್ಲ.

ಅನು: ವಿಶ್ವ

..ಬಂಗಾಲದಲ್ಲಿ 'ಸಂಯುಕ್ತ ಮೋರ್ಚಾ'

ಪುಟ 2 ರಿಂದ ಪಕ್ಷಗಳ ಐಕ್ಯತೆಯಷ್ಟೇ ಸಾಲದು, ಜನಗಳ ಐಕ್ಯತೆಯದ್ದೇ ಕೊನೆಯ ಮಾತು, ಸಂಯುಕ್ತ ಮೋರ್ಚಾದ ಮಾರ್ಗದರ್ಶಕ ಶಕ್ತಿ ಇದೇ ಆಗಿದೆ ಎಂದರು. ದುಡಿಯುವ ಜನಗಳ ಹಿತದೃಷ್ಟಿಯಿಂದ ರಾಜ್ಯದಲ್ಲಿ ಸರಕಾರ ಬದಲಾವಣೆಯಾಗಬೇಕಾಗಿದೆ. ಪ್ರತಿಗಾಮಿ ಶಕ್ತಿಗಳು ಜನಗಳ ಐಕ್ಯತೆಯನ್ನು ಮುರಿಯಲು ಛಿದ್ರಕಾರಿ ತಂತ್ರಗಳನ್ನು ಬಳಸುತ್ತಾರೆ. ಅವನ್ನು ವಿಫಲಗೊಳಿಸಬೇಕು. ಸಂಯುಕ್ತ ಮೋರ್ಚಾ ಅಧಿಕಾರಕ್ಕೆ ಬಂದರೆ ಕೃಷಿ, ಆಹಾರ ಭದ್ರತೆ ಮತ್ತು ಉಚಿತ ಶಿಕ್ಷಣ ಮತ್ತು ಆರೋಗ್ಯಸೇವೆಗಳನ್ನು ಒದಗಿಸಲು ಹಣ ಹೂಡಿಕೆ ಮಾಡುತ್ತದೆ ಎಂದರು. ನಮ್ಮದು ಒಂದು ಜನಪರ ಪರ್ಯಾಯ, ಅಧಿಕಾರಕ್ಕೆ ಬಂದ ಒಂದು ವರ್ಷದೊಳಗೆ ಸರಕಾರೀ ಸೇವೆಯಲ್ಲಿರುವ ನಾಲ್ಕು ಲಕ್ಷ ಖಾಲಿ ಹುದ್ದೆಗಳನ್ನು ಭರ್ತಿಮಾಡಲಾಗುವುದು ಎಂದರು.

ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ.ರಾ,ಜ, ರಾಜ್ಯ ಕಾರ್ಯದರ್ಶಿ ಸ್ವಪನ್ ಬ್ಯಾನರ್ಜಿ, ಆರ್.ಎಸ್.ಪಿ. ಪ್ರಧಾನ ಕಾರ್ಯದರ್ಶಿ ಮನೋಜ್ ಭಟ್ಟಾಚಾರ್ಯ, ಫಾರ್ವರ್ಡ್‌ಬ್ಲಾಕ್ ರಾಜ್ಯ ಕಾರ್ಯದರ್ಶಿ ನರೇನ್ ಚಟ್ಟೋಪಾಧ್ಯಾಯ ಮತ್ತು ಸಿಪಿಐ(ಎಂ) ಮಹಿಳಾ ಮುಖಂಡರಾದ ದೇಬ್ಲೀನಾ ಹೆಂಬ್ರಾಮ್ ಮಾತಾಡಿದರು.




ಕಾಂಗ್ರೆಸ್ ರಾಜ್ಯ ಅಧ್ಯಕ್ಷ ಅಧೀರ್ ರಂಜನ್ ಚೌಧುರಿ ಟಿಎಂಸಿ ಮತ್ತು ಬಿಜೆಪಿ ಪರಸ್ಪರ ಕೈಮಿಲಾಯಿಸಿದ್ದಾರೆ. ಮುಂಬರುವ ಚುನಾವಣೆಗಳು ಮಾಧ್ಯಮಗಳು ಚಿತ್ರಿಸುವಂತೆ ಎರಡೇ ಪಕ್ಷಗಳ ನಡುವಿನ ಹೋರಾಟವಾಗಿರುವುದಿಲ್ಲ ಎಂಬುದನ್ನು ಈ ರ್‍ಯಾಲಿ ಸ್ಪಷ್ಟವಾಗಿ ತೋರಿಸಿದೆ ಎಂದರು.

ಛತ್ತೀಸ್‌ಗಡದ ಮುಖ್ಯ ಮಂತ್ರಿ ಭೂಪೇನ್ ಬಘೇಲಾ ರ್‍ಯಾಲಿಯನ್ನುದ್ದೇಶಿಸಿ ಮಾತಾಡುತ್ತ, ಪ್ರಧಾನ ಮಂತ್ರಿಗಳು ನೇತಾಜಿ ಬೋಸ್‌ರವರ ಬಗ್ಗೆ ಈಗ ಬಹಳ ಮಾತಾಡುತ್ತಾರೆ, ಆದರೆ ಅವರು ಬ್ರಿಟಿಶರ ವಿರುದ್ಧ ಆಝಾದ್ ಹಿಂದ್ ಫೌಜ್ ರೂಪಿಸುತ್ತಿದ್ದಾಗ ಇವರ ಆರೆಸ್ಸೆಸ್‌ನವರು ಅದೇ ಬ್ರಿಟಿಶರ ಬೆಂಬಲಕ್ಕೆ ನಿಂತಿದ್ದರು ಎಂದು ಲೇವಡಿ ಮಾಡಿದರು.

ಐಎಸ್‌ಎಫ್ ಮುಖಂಡ ಅಬ್ಬಾಸ್ ಸಿದ್ದಿಕಿ ರಾಜ್ಯದಲ್ಲಿ ಟಿಎಂಎಸಿ ಶೂನ್ಯವಾಗುತ್ತದೆ ಎಂದರು, ಎಡರಂಗ ಮತ್ತು ಅದರ ಮಿತ್ರಪಕ್ಷಗಳಿಗೆ ತಮ್ಮ ದೃಢವಾದ ಬೆಂಬಲವನ್ನು ಘೋಷಿಸಿದರು.

ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಮಹಮ್ಮದ್ ಸಲೀಂ ಮಾತಾಡುತ್ತ ಮಾಧ್ಯಮಗಳು ಬಣ್ಣ ಬದಲಾಯಿಸುತ್ತಿರುವ ಗೋಸುಂಬೆ ರಾಜಕೀಯದ ಬಗ್ಗೆ ಮಾತಾಡುತ್ತಿರುವಾಗ ನಾವು ಉದ್ಯೋಗ, ಪ್ರಜಾಪ್ರಭುತ್ವ, ಪಾರದರ್ಶಕತೆ, ಎಲ್ಲರಿಗೂ ಸಿಕ್ಷಣ ಮತ್ತು ಆರೋಗ್ಯದ ಬಗ್ಗೆ ಮಾತಾಡುತ್ತಿದ್ದೇವೆ ಎಂದು ಸಂಯುಕ್ತ ಮೋರ್ಚಾದ ಪರ್ಯಾಯ ಧೋರಣೆಯ ಚಿತ್ರವನ್ನು ಮುಂದಿಟ್ಟರು.

ವಿಶ್ವ ಸಂಸ್ಥೆಯು 2020ರಲ್ಲಿ 'ಲಿಂಗ ಸಮಾನತೆ–ಮಹಿಳಾ ಹಕ್ಕುಗಳ ಸಾಧನೆ'ಯ ಕರೆ ಕೊಟ್ಟಿತ್ತು. ಆದರೆ 2020 ವೇದನೆಯ ಸಾಗರವೇ ಆಯಿತು. 2021ರಲ್ಲಿ ವಿಶ್ವ ಸಂಸ್ಥೆಯು 'ಮಹಿಳಾ ನಾಯಕತ್ವ: ಕೊವಿಡ್ 19 ನಂತರದ ವಿಶ್ವದಲ್ಲಿ ಸಮಾನತೆಯ ನಾಳೆಗಳನ್ನು ಸಾಧಿಸುವತ್ತ' ಎಂಬ ಕರೆ ನೀಡಿದೆ. ಸಮತೆಯ ತಲೆಮಾರು ಎಂಬ ಉಪಥೀಮ್ ನ್ನು ಕೊಟ್ಟು ಎಲ್ಲ ಸ್ತರಗಳ ಮಹಿಳೆಯರಿಗೆ ಬದುಕಿನ ಎಲ್ಲ ತೀರ್ಮಾನಗಳನ್ನು ಮಾಡುವ ಅಧಿಕಾರ, ಸಮಾನ ವೇತನ, ಗೃಹಕೃತ್ಯ ಮತ್ತು ವೇತನವಿಲ್ಲದ ಕೌಟುಂಬಿಕ ಜವಾಬ್ದಾರಿಯ ಸಮಾನ ಹಂಚಿಕೆ, ಎಲ್ಲ ರೀತಿಯ ಹಿಂಸೆಯ ನಿರ್ಮೂಲನೆ ಮತ್ತು ಅವರವರ ಅಗತ್ಯಕ್ಕೆ ಅನುಗುಣವಾಗಿ ಆರೋಗ್ಯ ಸೌಲಭ್ಯಗಳ ಲಭ್ಯತೆಗಳನ್ನು ಖಾತ್ರಿ ಮಾಡಬೇಕೆನ್ನುವ ಆಶಯವನ್ನು ಮುಂದಿಟ್ಟಿದೆ. ವಿಶ್ವಸಂಸ್ಥೆಯ ಆಶಯ ಸಾಕಾರಗೊಳ್ಳಬೇಕೆಂದರೆ ಕೃಷಿಕ್ಷೇತ್ರಕ್ಕೆ ಸಂಬಂಧಿಸಿದಂತೆ 2009ರಲ್ಲಿಯೇ ರಾಷ್ಟ್ರೀಯ ಮಹಿಳಾ ಆಯೋಗ ರೂಪಿಸಿದ ಕೃಷಿ ಕ್ಷೇತ್ರದ ಮಹಿಳೆಯರ ಕುರಿತು ಕರಡು ರಾಷ್ಟ್ರೀಯ ಧೋರಣೆಯಲ್ಲಿ ಪ್ರಸ್ತಾಪಿಸಿದ ಪರಿಹಾರಗಳನ್ನು ಕೈಗೆತ್ತಿಕೊಳ್ಳಬೇಕು.



ಕೊವಿದ್ ವಿರುದ್ಧ ಸೆಣಸಾಟ–ಸಮತೆಯ ತಲೆಮಾರಿನ ಸೃಷ್ಟಿಗೆ ಕಾದಾಟ

ಕೆ.ಎಸ್. ವಿಮಲ

ಅಂತರರಾಷ್ಟ್ರೀಯ ಮಹಿಳಾ ದಿನವೆನ್ನುವಾಗ ಒಂದು ಧೀರೋದಾತ್ತ ಹೋರಾಟದ ಯಶೋಗಾಥೆಯ ನೆನಪು ನೀಡುವ ದಿನ. 1917ರ ರಷ್ಯನ್ ಕ್ರಾಂತಿಗೂ ಮುನ್ನುಡಿ ಬರೆದ ಸೈಂಟ್ ಪೀಟರ್ಸ್ ಬರ್ಗ ನ ಹತ್ತಿ ಗಿರಣಿಯ ಮಹಿಳಾ ಕಾರ್ಮಿಕರ ಹೋರಾಟ ಹಾಗೂ ವಿಶ್ವ ಮಹಾಯುದ್ಧ ತಂದಿತ್ತ ಭೀಕರ ಆಹಾರ ಅಭಾವದ ವಿರುದ್ಧ 'ಬ್ರೆಡ್ ಅಂಡ್ ರೋಸಸ್' ಎಂದೇ ಖ್ಯಾತಿ ಪಡೆದ ಹೋರಾಟವನ್ನು ನೆನಪಿಸಿಕೊಳ್ಳುವ ದಿನ. ಹಾಗೆಯೇ ಈ ಹೋರಾಟಗಳು ಕೇವಲ ಲಿಂಗಾಧಾರಿತ ಬೇಡಿಕೆಗಳ ಭಾಗವಾಗಿ ನಡೆದದ್ದಲ್ಲ. ಬದಲಿಗೆ ಎಲ್ಲ ಜನರ ಅದರಲ್ಲಿಯೂ ದುಡಿಯುವ ಜನರ ವರ್ಗಹೋರಾಟದ ಭಾಗವಾಗಿ ಮಹಿಳಾ ವಿಷಯಗಳನ್ನೂ ಪರಿಭಾವಿಸಬೇಕೆಂಬ ಸ್ಪಷ್ಟ ಸಮಾಜವಾದೀ ಕಣ್ಣೋಟ ಹೊಂದಿದ ಕ್ಲಾರಾ ಜೆಟ್ಕಿನ್ ರವರು ಇದನ್ನು ಅಂತರ ರಾಷ್ಟ್ರೀಯ ಸಮಾಜವಾದಿ ಸಮ್ಮೇಳನದಲ್ಲಿ ಪ್ರಥಮ ಬಾರಿಗೆ ಮಂಡಿಸಿ ಅದಕ್ಕೆ ಮನ್ನಣೆ ಪಡೆದ ಇತಿಹಾಸವನ್ನೂ ಸ್ಮರಿಸುವ ದಿನ.

ಮಹಿಳಾ ದಿನದ ಇತಿಹಾಸ

1908ರಿಂದ ಎಂದು ಶುರುವಾಗುವ ಈ ಚರಿತ್ರೆಗೆ ಹಿನ್ನುಡಿ 1857ರಲ್ಲಿಯೇ ಪ್ರಾರಂಭವಾದ ಹೋರಾಟವೆಂದೂ ಇತಿಹಾಸದ ಪುಟಗಳು ಹೇಳುತ್ತವೆ. 1909 ರ ಫೆಬ್ರುವರಿ 28 ರಂದು ಅಮೇರಿಕಾದ ನ್ಯೂಯಾರ್ಕನಲ್ಲಿ ಅಮೆರಿಕಾ ಸಮಾಜವಾದಿ ಪಕ್ಷ ಮೊದಲ ಮಹಿಳಾ ದಿನವನ್ನು ಆಚರಿಸಿತು ಎಂದೂ ಓದುತ್ತೇವೆ. ಮತ್ತು 1910 ರಲ್ಲಿ ಅಂತರ ರಾಷ್ಟ್ರೀಯ ಸಮಾಜವಾದಿ ಮಹಿಳಾ ಸಮ್ಮೇಳನದಲ್ಲಿ ಜರ್ಮನ್ ಪ್ರತಿನಿಧಿಯಾಗಿ ಪಾಲ್ಗೊಂಡಿದ್ದ ಕ್ಲಾರಾ ಜೆಟ್ಕಿನ್ ರವರು ಇದಕ್ಕೆ ಅಂತರ ರಾಷ್ಟ್ರೀಯ ದಿನದ ಮಾನ್ಯತೆಗೆ ಬೇಡಿಕೆ ಇಟ್ಟರು. ಬೇಡಿಕೆ ಮಾನ್ಯವಾಗಿ ಅದು ಅಧಿಕೃತವಾಗಿ ಘೋಷಣೆಯಾಗಿ ನಂತರ 1911ರಲ್ಲಿ ಆಸ್ಟ್ರಿಯಾ, ಡೆನ್ಮಾರ್ಕ, ಜರ್ಮನಿ, ಸ್ವಿಟ್ಜರ್ಲೆಂಡ್ ಮುಂತಾದ ದೇಶಗಳಲ್ಲಿ ಆಚರಣೆಯೂ ಆಯಿತು. ಸಾವಿರಾರು ಮಹಿಳೆಯರು ಬೀದಿಗಳಲ್ಲಿ ನಿಂತು ಸಂಭ್ರಮಿಸಿದ, ತಮ್ಮ ಸಮಾನತೆಯ ಹಕ್ಕನ್ನು ಪ್ರತಿಪಾದಿಸಿದ ದಿನವಾಗಿ ಹೆಸರಾಯಿತು.

ಕ್ಲಾರಾ ಈ ದಿನವನ್ನು ಕೇವಲ ಮಹಿಳೆಯರ ದಿನವೆಂದು ಮಾತ್ರ ಮಂಡಿಸದೇ ದುಡಿಯುವ ಮಹಿಳೆಯರ ದಿನ ಎಂದು ಮಂಡಿಸಿದ್ದರು. ಎಂದರೆ ಒಟ್ಟು ಶ್ರಮಿಕ ವರ್ಗದ ವರ್ಗ ಹೋರಾಟದ ಅವಿಭಾಜ್ಯ ಭಾಗವಾಗಿಯೇ ಲಿಂಗಾಧಾರಿತ ಸಮಸ್ಯೆಗಳನ್ನೂ ನೋಡಬೇಕೆಂಬ ಅಂತರ್ಗತ ಅಭಿಪ್ರಾಯ ಅದರಲ್ಲಿ ಇತ್ತು. ಆದ್ದರಿಂದಲೇ ಅದು ಆ ಕಾಲದಲ್ಲಿಯೇ ಇದ್ದ ಸುಧಾರಣಾವಾದಿಗಳ ಮಹಿಳಾ ಮತದಾನದ ಹಕ್ಕು, ಮಹಿಳೆಯರ ಪ್ರಜನನ ಕ್ರಿಯೆಯ ಹಕ್ಕು–ಎಂದರೆ ಹೆಣ್ಣಿಗೆ ತನ್ನ ದೇಹದ ಮೇಲಿನ ಅಧಿಕಾರದ ಹಕ್ಕುಗಳನ್ನು ಮಾತ್ರ ಪ್ರತಿಪಾದಿಸುವ ಸೀಮಿತ ದೃಷ್ಟಿಕೋನದಿಂದಾಚೆ, ಅದನ್ನೂ ಒಳಗೊಂಡಂತೆ ವರ್ಗ ದೃಷ್ಟಿಕೋನವನ್ನು ಬೆಳೆಸುವ ಆಶಯವನ್ನು ಹೊಂದಿತ್ತು. ಹೀಗೆ ಅಂತರ ರಾಷ್ಟ್ರೀಯ ಸಮಾಜವಾದೀ ಸಮ್ಮೇಳನದಲ್ಲಿ ಅಂಗೀಕಾರಗೊಂಡ ಈ ಠರಾವು ವಿಶ್ವದ ಎಲ್ಲೆಡೆ ಮಾನ್ಯತೆ ಪಡೆಯಲಿಲ್ಲ.

1917ರಲ್ಲಿ ಸೋವಿಯಟ್ ರಷ್ಯಾ ಕ್ರಾಂತಿಯ ನಂತರ ಮಹಿಳೆಯರಿಗೆ ಮತದಾನದ ಹಕ್ಕು ನೀಡಲಾಯಿತು. ಹಾಗೂ ಆ ದಿನವನ್ನು ಅಧಿಕೃತವಾಗಿ ರಜಾದಿನವನ್ನಾಗಿ ಘೊಷಿಸಲಾಯಿತು. ಆ ದಿನಗಳಲ್ಲಿ ಅದನ್ನು ಸಮಾಜವಾದಿ ಮತ್ತು ಕಮ್ಯುನಿಸ್ಟ್ ದೇಶಗಳಲ್ಲಿ ಮಾತ್ರ ಆಚರಿಸಲಾಗುತ್ತಿತ್ತು. 1967 ರಲ್ಲಿ ಸ್ತ್ರೀವಾದಿ ಚಳುವಳಿಗಳೂ ಇದನ್ನು ಒಪ್ಪಿಕೊಂಡು ಆಚರಣೆಗೆ ಮುಂದಾದರು. 1975ರಲ್ಲಿ ವಿಶ್ವ ಸಂಸ್ಥೆಯೂ ಇದಕ್ಕೆ ಅಧಿಕೃತತೆಯನ್ನು ಘೋಷಿಸಿತು. ಮತ್ತು ತನ್ನ ಸದಸ್ಯ ರಾಷ್ಟ್ರಗಳಲ್ಲಿ ಆಚರಣೆಗೆ ಬೇಕಾದ ಪೂರಕ ಘೊಷಣೆಗಳನ್ನೂ ಕೊಡಲುಪಕ್ರಮಿಸಿತು.

'ಮಹಿಳಾ ನಾಯಕತ್ವ ಸಮಾನತೆಯ ನಾಳೆಗಳನ್ನು ಸಾಧಿಸುವತ್ತ'

ವಿಶ್ವ ಸಂಸ್ಥೆ 2020ರಲ್ಲಿ 'ಲಿಂಗ ಸಮಾನತೆ–ಮಹಿಳಾ ಹಕ್ಕುಗಳ ಸಾಧನೆ'ಯ ಕರೆ ಕೊಟ್ಟಿತ್ತು. ಆದರೆ 2020 ವೇದನೆಯ ಸಾಗರವೇ ಆಯಿತು. ಇಡೀ ವಿಶ್ವ ಆ ಹೊತ್ತಿಗಾಗಲೇ ಸೂಕ್ಷ್ಮ ವೈರಾಣುವೊಂದರ ಕಪಿ ಮುಷ್ಟಿಗೆ ಸಿಲುಕಿ ಮುಲುಗುಟ್ಟುತ್ತಿತ್ತು. ಭಾರತದಂಥಹ ದೇಶದಲ್ಲಿ ಜನರ ಕಷ್ಟಕ್ಕೆ ಕುರುಡಾಗಿ ದೊಡ್ಡಣ್ಣನಿಗೆ ಡೊಗ್ಗು ಸಲಾಮು ಹಾಕಲು ರೋಗವನ್ನು ಮುಚ್ಚಿಡುವ ಪ್ರಯತ್ನದಲ್ಲಿ ಸರಕಾರ ನಿರತವಾಗಿತ್ತು. ಆದರೆ ವೈರಾಣುವಿನ ಪ್ರಕೋಪ ಅಮೆರಿಕಾ ದಂಥಹ ಸೋ ಕಾಲ್ಡ್ 'ಬಲಿಷ್ಠ' ದೇಶವನ್ನೂ ಹೆಡೆಮುರಿ ಕಟ್ಟಿಬಿಟ್ಟಿತ್ತು. ಆದರೆ ಪುಟ್ಟ ದೇಶ ಕ್ಯೂಬಾ, ವಿಯಟ್ನಾಂ ಗಳು ದೊಡ್ಡ ಆಪತ್ತನ್ನೆದುರಿಸಲಿಲ್ಲ. ಯಾಕೆಂದರೆ ಸಮಾಜವಾದಿ ವ್ಯವಸ್ಥೆಯನ್ನು ಉಳಿಸಿಕೊಂಡ ಕಾರಣದಿಂದ. ಮತ್ತು ತನ್ನುದರದಲ್ಲಿಯೇ ಹುಟ್ಟಿದ ವೈರಾಣುವಿನ ಪ್ರಕೋಪವನ್ನು ಮಣಿಸಿ ಮೆಟ್ಟಿನಿಲ್ಲಲು ಚೈನಾ ಕೂಡಾ ಸಫಲತೆ ಪಡೆದಿದ್ದು ಮತ್ತು ಭಾರತದಲ್ಲಿ ಮೊದಲಿಗೆ ಕಾಣಿಸಿಕೊಂಡರೂ ತನ್ನೆಲ್ಲ ಶಕ್ತಿಯನ್ನೂ ಹಾಕಿ ವೈರಾಣುವಿನೆದುರು ಈಗಲೂ ಸೆಣಸುತ್ತಿರುವ ನಮ್ಮದೇ ಪುಟ್ಟ ರಾಜ್ಯ ಕೇರಳ ಇವು ಮಾದರಿಗಳು. ಯಾಕೆಂದರೆ ಸಮಾಜವಾದೀ ಸಿದ್ಧಾಂತದ ನೆಲೆಯಲ್ಲಿ ಸರಕಾರಗಳು ಇರುವ ಕಾರಣದಿಂದ.

ಈ ಅವಧಿಯಲ್ಲಿ ವಿಶ್ವ ಸಂಸ್ಥೆ 'ಮಹಿಳಾ ನಾಯಕತ್ವ: ಕೊವಿಡ್ 19 ನಂತರದ ವಿಶ್ವದಲ್ಲಿ ಸಮಾನತೆಯ ನಾಳೆಗಳನ್ನು ಸಾಧಿಸುವತ್ತ' ಎಂಬ ಕರೆ ನೀಡಿದೆ.

ಈ ಘೋಷಣೆಯ ಮೂಲಕ ವಿಶ್ವ ಸಂಸ್ಥೆ ಇಡೀ ವಿಶ್ವದಲ್ಲಿ ಮಹಿಳೆಯರು ಮತ್ತು ಹೆಣ್ಣು ಮಕ್ಕಳು ಕೊವಿದ್ ವಿರುದ್ಧ ಎದುರಾಗಿ ನಿಂತು ಸೆಣಸಿದ ಸಾಮರ್ಥ್ಯವನ್ನು ಗುರುತಿಸುವ ಮತ್ತು ಅದಕ್ಕಾಗಿ ಶ್ಲಾಘಿಸುವ ಧೋರಣೆಯನ್ನು ಮುಂದಿಟ್ಟಿದೆ. ಹಾಗೂ ಈ ವೈರಾಣುವಿನಿಂದ ಚೇತರಿಸಿಕೊಳ್ಳಲು ಅವರು ಮಾಡಿದ ಪ್ರಯತ್ನ ಮತ್ತು ಅದು ಕೊಡಬಹುದಾದ ನಾಳಿನ ಸಮ ಸಮಾಜದ ಕಲ್ಪನೆಯನ್ನು ಗುರುತಿಸಬೇಕೆಂದೂ ಸೂಚಿಸಿದೆ ಎಂದುಕೊಳ್ಳಬಹುದು.

ಸಮತೆಯ ತಲೆಮಾರು ಸೃಷ್ಟಿ

ಇಲ್ಲಿ ನಾವು ನೆನಪಿಸಿಕೊಳ್ಳಬೇಕು. ಕೊವಿಡ್ ತನ್ನ ಪ್ರಕೋಪವನ್ನು ತೋರಿಸಿ, ಸರಕಾರಗಳು ಥರಗುಟ್ಟುತ್ತಿರುವಾಗ, ಅನ್ಯ ಮಾರ್ಗವೇ ಇಲ್ಲವೆಂಬಂತೆ ಘೋಷಿಸಿದ ಲಾಕ್ ಡೌನ್ ಗಳು ಮಹಿಳೆಯರು ಮತ್ತು ಹೆಣ್ಣುಮಕ್ಕಳ ಮೇಲೆ ಹೆಚ್ಚಿದ ಎಲ್ಲ ರೀತಿಯ ದೌರ್ಜನ್ಯಗಳನ್ನು ವಿಶ್ವಸಂಸ್ಥೆ ಅತ್ಯಂತ ಕಳವಳದಿಂದ ಗುರುತಿಸಿ ಅದನ್ನು ಮಹಾಸೋಂಕಿನ ನೆರಳು ಎಂದು ಕರೆದಿತ್ತು. ಮತ್ತು ಮಹಿಳೆಯರು ಅತಿ ಹೆಚ್ಚಿನ ರೀತಿಯಲ್ಲಿ ಕೌಟುಂಬಿಕ, ಔದ್ಯೋಗಿಕ ಮತ್ತು ಆರೋಗ್ಯ ಸಂಬಂಧೀ ಸಮಸ್ಯೆಗಳನ್ನು ಎದುರಿಸುತ್ತಿರುವಾಗಲೂ ವಿಶ್ವದ ಹಲವು ಸರಕಾರಗಳು ಘೋಷಿಸಿದ ಪರಿಹಾರಗಳ ಪ್ಯಾಕೇಜ್‌ಗಳಲ್ಲಿ ಲಿಂಗತ್ವ ಸಮನ್ಯಾಯದ ನೆರಳೂ ಕಾಣಿಸಿರಲಿಲ್ಲ. ಅಲ್ಲದೇ ಮಹಾಸೋಂಕು ದೇಶ ದೇಶಗಳಲ್ಲಿ ತಂದೊಡ್ಡಿದ ಔದ್ಯೋಗಿಕ ಬಿಕ್ಕಟ್ಟಿನಿಂದ ಕೆಲಸ ಕಳೆದುಕೊಂಡವರಲ್ಲಿ ಮಹಿಳೆಯರೇ ಅಧಿಕ. ನಮ್ಮ ದೇಶದಲ್ಲಿಯೂ ನಾವು ಇದನ್ನೇ ನೋಡುತ್ತಿದ್ದೇವೆ ಇದನ್ನೂ ಗಮನದಲ್ಲಿಟ್ಟುಕೊಂಡೇ ಸಮತೆಯ ತಲೆಮಾರು ಎಂಬ ಉಪಥೀಮ್ ನ್ನು ಕೊಟ್ಟು ಎಲ್ಲ ಸ್ತರಗಳ ಮಹಿಳೆಯರಿಗೆ ಬದುಕಿನ ಎಲ್ಲ ತೀರ್ಮಾನಗಳನ್ನು ಮಾಡುವ ಅಧಿಕಾರ, ಸಮಾನ ವೇತನ, ಗೃಹಕೃತ್ಯ ಮತ್ತು ವೇತನವಿಲ್ಲದ ಕೌಟುಂಬಿಕ ಜವಾಬ್ದಾರಿಯ ಸಮಾನ ಹಂಚಿಕೆ, ಎಲ್ಲ ರೀತಿಯ ಹಿಂಸೆಯ ನಿರ್ಮೂಲನೆ ಮತ್ತು ಅವರವರ ಅಗತ್ಯಕ್ಕೆ ಅನುಗುಣವಾಗಿ ಆರೋಗ್ಯ ಸೌಲಭ್ಯಗಳ ಲಭ್ಯತೆಗಳನ್ನು ಖಾತ್ರಿ ಮಾಡಬೇಕೆನ್ನುವ ಆಶಯವನ್ನು ಮುಂದಿಟ್ಟಿದೆ. ವಿಶ್ವದ ಕೇವಲ 20 ರಾಷ್ಟ್ರಗಳಲ್ಲಿ ಮಾತ್ರ ದೇಶದ ಮುಖ್ಯ ಜವಾಬ್ದಾರಿಯನ್ನು ಮಹಿಳೆಯರು ನಿಭಾಯಿಸುತ್ತಿದ್ದಾರೆ. ಆದರೆ ಸಂಕಷ್ಟದ ಸಾಂಕ್ರಾಮಿಕದೆದುರು ಸೆಣಸಿದ ಮುಂಚೂಣಿ ಸೇನಾನಿಗಳಲ್ಲಿ ಮಹಿಳೆಯರ ಪಾತ್ರ ಅತ್ಯಂತ ಹಿರಿದಾಗಿತ್ತು. ಆದರೆ ತೀರ್ಮಾನ ತೆಗೆದುಕೊಳ್ಳುವ ಸ್ಥಾನದಲ್ಲಿ ನಿರ್ಣಾಯಕ ಘಟ್ಟಗಳ ಸಂದರ್ಭದಲ್ಲಿ ಸಲಹೆಗಳನ್ನು ಕೊಡುವ ಜಾಗದಲ್ಲಿ ಮಾತ್ರ ಹೆಚ್ಚು ಪುರುಷರದೇ ಕಾರುಬಾರು. ಇದನ್ನು ಗುರುತಿಸಲಾಗಬೇಕು.

ಭಾರತದಲ್ಲಿ

ಇದೇ ಅವಧಿಯಲ್ಲಿ ಈ ಮಹಿಳಾ ದಿನದ ಸಂದರ್ಭದಲ್ಲಿ ನಮ್ಮ ನೆಲದಲ್ಲಿ ನಡೆಯುತ್ತಿರುವ ವಿದ್ಯಮಾನಗಳು ಸಮ ಸಮಾಜದ ಕನಿಷ್ಟ ಕಲ್ಪನೆಗೂ ನಿಲುಕದ ರೀತಿಯಲ್ಲಿವೆ. ದೇಶದ ರಾಜಧಾನಿಯಲ್ಲಿ ಕಳೆದ ಮೂರು ತಿಂಗಳಿಗೂ ಮೀರಿ ಕರಾಳ ಕೃಷಿ ಕಾಯ್ದೆಯ ವಿರುದ್ಧ ಅನ್ನದಾತರು ಪ್ರತಿಭಟನೆಯಲ್ಲಿದ್ದಾರೆ. ಗಣನೀಯ ಸಂಖ್ಯೆಯಲ್ಲಿ ಮಹಿಳೆಯರೂ ಇದ್ದಾರೆ. ಯಾಕೆಂದರೆ ದೇಶದ ಕೃಷಿ ಕ್ಷೇತ್ರದ ಬಹುತೇಕ ಕೆಲಸವನ್ನು ನಿರ್ವಹಿಸುವವರು ಮಹಿಳೆಯರೇ. ದುರಂತವೆಂದರೆ ಅವರನ್ನು ರೈತರೆಂದು ದೇಶ ಪರಿಗಣಿಸುವುದಿಲ್ಲ. ಯಾಕೆಂದರೆ ಅವಳ ಹೆಸರಿನಲ್ಲಿ ಭೂಮಿ ಇಲ್ಲ, ಆಸ್ತಿ ಇಲ್ಲ, ಸಂಪತ್ತಿನ ಸೃಷ್ಟಿ ಮಾಡುತ್ತಾಳೆ. ಆದರೆ ಅದರ ಒಡತಿ ಆಕೆಯಲ್ಲ. ಸಾಲದೆಂಬಂತೆ ಕಳೆದ ಐದು ವರ್ಷಗಳಲ್ಲಿ 72 ಮಿಲಿಯನ್ ಮಹಿಳೆಯರು ಕೃಷಿ ಮತ್ತು ಕೃಷಿ ಸಂಬಂಧೀ ವಲಯಗಳಲ್ಲಿ ಉದ್ಯೋಗ ಕಳೆದುಕೊಂಡಿದ್ದಾರೆ. ನಾಲ್ಕು ಲಕ್ಷಕ್ಕೂ ಹೆಚ್ಚು ಜನ ಪುರುಷರು ಕೃಷಿ ಬಿಕ್ಕಟ್ಟಿನ ಪರಿಣಾಮದಿಂದ ಆತ್ಮಹತ್ಯೆಗೆ ಬಲಿಯಾಗಿದ್ದಾರೆ. ಎಂದರೆ ಈ ವ್ಯವಸ್ಥೆ ಅವರನ್ನು ಕೊಲೆ ಮಾಡಿದೆ. ಬಹುತೇಕ ಮಂದಿಯ ವಿಧವಾ ಪತ್ನಿಯರಿಗೆ ಸಾಲ ಮನ್ನಾ ಅಥವಾ ಪರಿಹಾರದ ಪ್ಯಾಕೇಜ್ ಗಳು ಸಿಗುವುದಿಲ್ಲ ಯಾಕೆಂದರೆ ದಾಖಲೆಗಳಲ್ಲಿ ಅವರು ರೈತರಲ್ಲ. ಪಿ.ಎಂ. ಕಿಸಾನ್ ನಿಧಿ ಎಂಬ ಆಕರ್ಷಕ ಪದಪುಂಜದ ಅತ್ಯಲ್ಪ ಪ್ರಮಾಣದ, ಹಾಗೂ ಅಸಮರ್ಪಕ ಆದಾಯದ ಬೆಂಬಲವೂ ಅವರಿಗೆ ದೊರೆಯುವುದಿಲ್ಲ ಯಾಕೆಂದರೆ ಅವರು ದಸ್ತಾವೇಜಿನಲ್ಲಿ ರೈತರಲ್ಲ. ಸರಕಾರದ ಲಕ್ಷ್ಯ ಕಾರ್ಪೊರೇಟ್ ಮತ್ತು ದೊಡ್ಡ ಉದ್ಯಮಪತಿಗಳ ಥೈಲಿ ತುಂಬಿಸಿ ನಾಳೆಯ ಚುನಾವಣೆಯ ಬಂಡವಾಳ ಹೂಡಿಕೆಯತ್ತ ಇರುವ ಕಾರಣದಿಂದ ಬ್ಯಾಂಕುಗಳಲ್ಲಿ ಕಡಿಮೆ ಬಡ್ಡಿಯ ಅಥವಾ ಬಡ್ಡಿ ರಹಿತ ಸಾಲ, ಮುಂತಾದವುಗಳು ಮಹಿಳೆಯರ ಪಾಲಿಗಂತೂ ಗಗನ ಕುಸುಮವೇ ಆಗಿದೆ.

ಇನ್ನು ಕೊವಿಡ್ ಎದುರು ದೇಶದ ದುಡಿಯುವ ಜನ ಮತ್ತು ವಿಪರೀತವಾಗಿ ಮಹಿಳೆಯರು ಸೆಣಸುತ್ತಿರುವಾಗ ದೇಶರಕ್ಷಕರು ಕೊಂದ ಕಾಯ್ದೆಗಳಲ್ಲಿ ಒಂದು ಅಗತ್ಯ ವಸ್ತುಗಳ ಕಾಯ್ದೆ. ಇದಕ್ಕೆ ತಿದ್ದುಪಡಿ ತಂದು ಅದನ್ನು ಕೊಂದ ಕಾರಣದಿಂದ ಇಂದು ಪಡಿತರ ವ್ಯವಸ್ಥೆ ಏರುಪೇರಾಗುವ ಎಲ್ಲ ಸೂಚನೆಗಳಿವೆ. ಇದು ಮತ್ತೆ ಗಾಯದ ಮೇಲೆ ಬರೆ ಎಳೆಯುವುದು ದುಡಿದು ತಿನ್ನುವ ಜನರಿಗೆ ಅದರಲ್ಲಿಯೂ ಮನೆಯನ್ನು ಸಂಭಾಳಿಸುವ ಅಲಿಖಿತ ಹೊರೆಯನ್ನು ಹೊಣೆಯಾಗಿ ಹೊತ್ತಿರುವ ಮಹಿಳೆಯರಿಗೆ. ಎ.ಪಿ.ಎಂ.ಸಿ. ಕಾಯ್ದೆಗೆ ತಿದ್ದುಪಡಿ ತಂದು ದೇಶಕ್ಕೆ ಮತ್ತು ಕೃಷಿಕರಿಗೆ ಸ್ವಾತಂತ್ರ ಕೊಡುತ್ತೇವೆ ಎನ್ನುವ ಊರುಹಾಳು ಕ್ರಮದಿಂದಾಗಿಯೂ ದೊಡ್ಡ ಪೆಟ್ಟು ಬೀಳುತ್ತಿದೆ. ತರಕಾರಿ, ಹೈನುಗಾರಿಕೆ ಚಿಲ್ಲರೆ ಮಾರಾಟದ ಮಹಿಳೆಯರು ಬೀದಿಪಾಲಾಗುವುದರಲ್ಲಿ ಯಾವುದೇ ಸಂಶಯವಿಲ್ಲ.

ಕೃಷಿ ಕ್ಷೇತ್ರದ ಮಹಿಳೆಯರ ಕುರಿತು ರಾಷ್ಟ್ರೀಯ ಧೋರಣೆ

ವಿಶ್ವಸಂಸ್ಥೆಯ ಆಶಯ ಸಾಕಾರಗೊಳ್ಳಬೇಕೆಂದರೆ ಕೃಷಿಕ್ಷೇತ್ರಕ್ಕೆ ಸಂಬಂಧಿಸಿದಂತೆ 2009ರಲ್ಲಿಯೇ ರಾಷ್ಟ್ರೀಯ ಮಹಿಳಾ ಆಯೋಗ ರೂಪಿಸಿದ ಕೃಷಿ ಕ್ಷೇತ್ರದ ಮಹಿಳೆಯರ ಕುರಿತು ಕರಡು ರಾಷ್ಟ್ರೀಯ ಧೋರಣೆಯಲ್ಲಿ ಪ್ರಸ್ತಾಪಿಸಿದ ಪರಿಹಾರಗಳನ್ನು ಕೈಗೆತ್ತಿಕೊಳ್ಳಬೇಕು. ನೆನಪಿಸಿಕೊಳ್ಳೋಣ, ವಿಶೇಷ ಸಂದರ್ಭವಾಗಿದ್ದ ಅಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ನೇತ್ರತ್ವವಾಗಿದ್ದರೂ ಕನಿಷ್ಟ ಸಾಮಾನ್ಯ ಕಾರ್ಯಕ್ರಮದಡಿಯಲ್ಲಿ ಎಡ ಪಕ್ಷಗಳು ಕೇಂದ್ರದ ಸರಕಾರಕ್ಕೆ ಬೆಂಬಲ ಘೋಷಿಸಿತ್ತು, ಹಾಗೂ ಸಿ.ಪಿ.ಐ.(ಎಂ) ಪಕ್ಷವು ಬಾಹ್ಯ ಬೆಂಬಲ ಘೋಷಿಸಿತ್ತು. ಆ ಸಂದರ್ಭದಲ್ಲಿ ಅಖಿಲ

ಪುಟ 14 ಕ್ಕೆ



ಈ ಮೂರು ಕೃಷಿ ಕಾನೂನುಗಳು ಮಹಿಳೆಯರ ದೈನಂದಿನ ಜೀವನದ ಮೇಲೆ ತೀವ್ರ ಪರಿಣಾಮ ಬೀರುತ್ತವೆ ಎಂಬ ಕಾರಣಕ್ಕೆ ಅನೇಕ ಮಹಿಳಾ ರೈತರು ಮತ್ತು ಸಂಘಟನೆಗಳು ಕೂಡ ಆಂದೋಲನದಲ್ಲಿ ಸೇರಿಕೊಂಡಿವೆ. ಗ್ರಾಹಕರಾಗಿ ಅಥವಾ ರೈತರಾಗಿ ಮಾತ್ರವಲ್ಲದೆ ಸಂಬಂಧಿತ ಕ್ಷೇತ್ರಗಳಲ್ಲಿನ ಕಾರ್ಮಿಕರು / ಉತ್ಪಾದಕರಾಗಿಯೂ ಮಹಿಳೆಯರ ಮೇಲೆ ಈ ಕರಾಳ ಕಾನೂನುಗಳು ಪರಿಣಾಮ ಬೀರುತ್ತವೆ. ಈ ಸಮಸ್ಯೆಗಳನ್ನು ಎತ್ತಿತೋರಿಸುವ ಮೂಲಕ, ಮಹಿಳಾ ಸಂಘಟನೆಗಳು ಹೋರಾಟದ ಆಯಾಮವನ್ನು ವಿಸ್ತರಿಸಲು ಮತ್ತು ಅದರ ವ್ಯಾಪ್ತಿಯನ್ನು ಹೆಚ್ಚು ಸಮಗ್ರಗೊಳಿಸಲು ಸಹಾಯ ಮಾಡಬಹುದು.

ಪ್ರೊ. ಅರ್ಚನಾ ಪ್ರಸಾದ್



ಫೋಟೋ ಕೃಪೆ: ಹೆಚ್.ಆರ್. ನವೀನ್‌ಕುಮಾರ್

ಮಹಿಳಾ ದುಡಿಮೆಗಾರರು ಮತ್ತು ರೈತ ವಿರೋಧಿ ಕಾನೂನುಗಳು

ಕನ್ನಡಕ್ಕೆ: ಸಿ.ಆರ್. ಶಾನಭಾಗ

ಮೂರು ಕೃಷಿ ಕಾನೂನುಗಳನ್ನು ರದ್ದುಗೊಳಿಸುವಂತೆ ಭಾರತದ ರೈತರು 2020 ರಲ್ಲಿ ಆ ಶಾಸನಗಳನ್ನು ತಂದಂದಿನಿಂದಲೂ ಚಳುವಳಿ ನಡೆಸುತ್ತಿದ್ದಾರೆ. ಕಳೆದ ನವೆಂಬರ್ 26 ರಿಂದ ದೆಹಲಿಯ ಗಡಿಪ್ರದೇಶಗಳಲ್ಲಿ ಪ್ರತಿಭಟನೆಕಾರರು ಈ 'ಕರಾಳ ಕಾನೂನು'ಗಳ ವಾಪಸ್ಸಾತಿಗೆ ಆಗ್ರಹಿಸುತ್ತಾ ಧರಣಿ ಆರಂಭಿಸುವುದರೊಂದಿಗೆ ಇದು ಶಿಖರವನ್ನು ತಲುಪಿದೆ. ಈ ಕಾನೂನುಗಳು ಮಹಿಳೆಯರ ದೈನಂದಿನ ಜೀವನದ ಮೇಲೆ ತೀವ್ರ ಪರಿಣಾಮ ಬೀರುತ್ತವೆ ಎಂಬ ಕಾರಣಕ್ಕೆ ಅನೇಕ ಮಹಿಳಾ ರೈತರು ಮತ್ತು ಸಂಘಟನೆಗಳು ಕೂಡ ಆಂದೋಲನದಲ್ಲಿ ಸೇರಿಕೊಂಡಿವೆ. ಈ ಕಾನೂನುಗಳ ಅನುಷ್ಠಾನವು ಹೆಚ್ಚಿನ ಕೃಷಿ ಕುಟುಂಬಗಳಿಗೆ ಆಸ್ತಿತ್ವದ ಬಿಕ್ಕಟ್ಟನ್ನು ಸೃಷ್ಟಿಸುತ್ತದೆ ಎಂದು ಈಗ ಅನೇಕರು ಗಮನ 'ಸೆಳೆದಿದ್ದಾರೆ, ಮತ್ತು ಇವುಗಳಿಂದ ಸ್ಪಷ್ಟವಾಗಿ ತಮ್ಮ ಕುಟುಂಬಗಳ ದೈನಂದಿನ ಅಗತ್ಯಗಳನ್ನು ಪೂರೈಸುವ ಜವಾಬ್ದಾರಿಯಿರುವ ಮಹಿಳೆಯರ ಮೇಲೆ ಹೆಚ್ಚಿನ ಹೊರೆ ಬೀಳುತ್ತದೆ.

ಮಹಿಳಾ ಸಂಘಟನೆಗಳು ವಿಶೇಷವಾಗಿ ಅಗತ್ಯ ಸರಕುಗಳ ಕಾಯ್ದೆಯ ತಿದ್ದುಪಡಿಗಳ ವಿರುದ್ಧ ಪ್ರತಿಭಟಿಸುತ್ತಿವೆ, ಈ ತಿದ್ದುಪಡಿ ಆಹಾರ ಧಾನ್ಯಗಳು ಮತ್ತು ಅಗತ್ಯ ವಸ್ತುಗಳ ಆಕ್ರಮದಾಸ್ತಾನಿಗೆ ಕುಮ್ಮಕ್ಕು ನೀಡುತ್ತದೆ ಮತ್ತು ಬೆಲೆ ಏರಿಕೆಗೆ ಕಾರಣವಾಗುತ್ತದೆ. ಸಾರ್ವಜನಿಕ ಸಂಗ್ರಹಣೆ ಮತ್ತು ಆಹಾರ ಧಾನ್ಯಗಳ ವಿತರಣೆಯನ್ನು ಆಧರಿಸಿದ ಸಾರ್ವಜನಿಕ ವಿತರಣಾ ವ್ಯವಸ್ಥೆಯ , ಮತ್ತು ಅಂಗನವಾಡಿ ಮತ್ತು ಮಧ್ಯಾಹ್ನದ ಬಿಸಿಯೂಟ ಯೋಜನೆಯ ಆಧಾರದ ಮೇಲೆಯೂ ದಾಳಿ ಮಾಡುತ್ತವೆ. ಆದ್ದರಿಂದ, ರೈತರ ಪ್ರಸ್ತುತ ಚಳವಳಿಗೆ ಬೆಂಬಲ ನೀಡುವ ಪ್ರಕ್ರಿಯೆ, ಕೃಷಿ ಕಾನೂನುಗಳು ಹೆಚ್ಚಿನ ಕುಟುಂಬಗಳಿಗೆ ಮತ್ತು ವಿಶೇಷವಾಗಿ ಆ ಕುಟುಂಬಗಳ ಮಹಿಳೆಯರ. ಹಸಿವು ಮತ್ತು ಆಹಾರ ಅಭದ್ರತೆ ಹೆಚ್ಚಲು ಕಾರಣವಾಗುತ್ತವೆ ಎಂಬ ಸರಿಯಾದ ತಿಳುವಳಿಕೆಯನ್ನು ಆಧರಿಸಿದೆ,

ಕಾರ್ಪೋರೇಟ್ ನುಸುಳಿಕೆಯ ದುಷ್ಪರಿಣಾಮಗಳು

ಇದರ ಹೊರತಾಗಿ, ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳಲ್ಲಿನ ಮಹಿಳಾ ಕಾರ್ಮಿಕರ ಮೇಲೆ ಕೃಷಿ ವ್ಯವಹಾರದಲ್ಲಿ ಕಾರ್ಪೋರೇಟಗಳ ನುಸುಳಿಕೆಯ ಆಳವಾದ ಪರಿಣಾಮವನ್ನು ಗುರುತಿಸುವ ಅವಶ್ಯಕತೆಯಿದೆ. ನಮಗೆ ತಿಳಿದಿರುವಂತೆ, ಶೇಕಡಾ 70 ರಷ್ಟು ಮಹಿಳೆಯರು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ ಮತ್ತು ಕೂಲಿಗೆಲಸಗಾರರಲ್ಲಿ ಸುಮಾರು ಮೂರನೇ ಎರಡರಷ್ಟು ಮಹಿಳೆಯರು. ಕೃಷಿಕೂಲಿ, ಹೈನುಗಾರಿಕೆ ಮತ್ತು ಮೀನುಗಾರಿಕೆ ಉದ್ಯಮಗಳು, ಅರಣ್ಯಉತ್ಪನ್ನ ಸಂಗ್ರಹಣೆ ಮತ್ತು ಮಾರಾಟ ಮುಂತಾದ ಕೃಷಿಯನ್ನೇ ಅವಲಂಬಿಸಿದ ಉದ್ಯೋಗಗಳಲ್ಲಿದ್ದಾರೆ ಇವುಗಳಲ್ಲದೆ, ನೆರೆಹೊರೆಯ ಮತ್ತು ಸ್ಥಳೀಯ ಮಾರುಕಟ್ಟೆಗಳ ಅವಶ್ಯಕತೆಗಳನ್ನು ಪೂರೈಸುವ ಸ್ವ-ಉದ್ಯೋಗಿ ಕುಟುಂಬ ಉದ್ಯಮಗಳಲ್ಲಿ ಮಹಿಳೆಯರು ಕೂಲಿಯಿಲ್ಲದ ಕಾರ್ಮಿಕರಾಗಿ ಪ್ರಮುಖ ಕಾರ್ಯಗಳನ್ನು ನಿರ್ವಹಿಸುತ್ತಾರೆ. ಬಹುತೇಕ ಎಲ್ಲರೂ ಅಸಂಘಟಿತ ವಲಯದಲ್ಲಿದ್ದಾರೆ ಮತ್ತು ಇತ್ತೀಚಿನ ಕಾಯ್ದೆಗಳಿಂದ ತೀವ್ರವಾಗಿ ಸಂಕಷ್ಟಕ್ಕೊಳಗಾಗುತ್ತಾರೆ.

ನಾವು ತಜ್ಞರು ಮತ್ತು ರೈತ ಸಂಘಗಳಿಂದ ಪದೇ ಪದೇ ಕೇಳಿರುವಂತೆ ಈ ಮೂರು ಕೃಷಿ ಕಾನೂನುಗಳು, ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳಲ್ಲಿನ ಮಾರುಕಟ್ಟೆಗಳ ಸ್ವರೂಪವನ್ನು ಬದಲಾಯಿಸುತ್ತವೆ. ಚರ್ಚೆಯು ಗಮನವು ಕೃಷಿ ಕ್ಷೇತ್ರದ ಮೇಲೆ ಇದ್ದರೂ, ಮಾರುಕಟ್ಟೆ ಸಂಯೋಜನೆ ಮತ್ತು ಕಾರ್ಪೊರೇಟ್ ಗುತ್ತಿಗೆ ಕೃಷಿಯನ್ನು ಉತ್ತೇಜಿಸುವ ಈ ಕಾನೂನುಗಳ ಪರಿಣಾಮವು ಸಂಬಂಧಿತ ಕ್ಷೇತ್ರಗಳಾದ ಹೈನುಗಾರಿಕೆ, ಮೀನುಗಾರಿಕೆ ಮತ್ತು ಆಹಾರದ ಚಿಲ್ಲರೆ ವ್ಯಾಪಾರದಲ್ಲೂ ಕಂಡುಬರುತ್ತದೆ. ಅಸಂಘಟಿತ ವಲಯದ ಸಣ್ಣ ಉತ್ಪಾದನೆಯ ಕಾರ್ಪೊರೇಟೀಕರಣದ ಮೂಲಕ ಗದ್ದೆಯಿಂದ ಅಂಗಡಿಯವರೆಗಿನ ಸಂಪೂರ್ಣ ಉತ್ಪಾದನೆ ಮತ್ತು ಪೂರೈಕೆ ಸರಪಳಿಯನ್ನು ನಿಯಂತ್ರಿಸಲು ಸೂಪರ್ ಮಾರ್ಕೆಟ್ ಮತ್ತು ಕೃಷಿ ವ್ಯಾಪಾರಿ ಸಂಸ್ಥೆಗಳಿಗೆ ಈ ಕಾನೂನುಗಳು ಅವಕಾಶ ನೀಡುತ್ತವೆ. ಇತ್ತೀಚಿನ ಕೃಷಿ ಉತ್ಪನ್ನಗಳ ವ್ಯಾಪಾರ ಮತ್ತು ವಾಣಿಜ್ಯ (ಉತ್ತೇಜನ ಮತ್ತು ಸೌಕರ್ಯ) ಕಾಯ್ದೆ-2020 ಮತ್ತು ರೈತ (ಸಶಕ್ತೀಕರಣ ಮತ್ತು ಸಂರಕ್ಷಣೆ) ಒಪ್ಪಂದ ಮತ್ತು ಬೆಲೆ ಭರವಸೆ ಮತ್ತು ಕೃಷಿ ಸೇವೆಗಳ ಕಾಯ್ದೆ 2020 ರ ವಿಷಯದಲ್ಲಿ ಇದು ವಿಶೇಷವಾಗಿ ಸತ್ಯವಾಗಿದೆ. ಇದರ ಮುಖ್ಯ ಗುರಿ ಗ್ರಾಮೀಣ ಭಾರತದ ಪ್ರತಿಯೊಂದು ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಲ್ಲಿ ವಿದೇಶಿ-ಬಂಡವಾಳದ ನುಸುಳಿಕೆಯನ್ನು ಸಾಧ್ಯಗೊಳಿಸಲು ಜಾಗತಿಕ ಮೌಲ್ಯ ಸರಪಳಿಗಳನ್ನು ರಚಿಸುವುದಾಗಿದೆ.. ಅಂತಹ ಮರುಸಂಘಟನೆಯ ಮೂಲಕ, ಮುಂದಿನ 3-4 ವರ್ಷಗಳಲ್ಲಿ ಮೀನುಗಾರಿಕೆ ಕ್ಷೇತ್ರದಲ್ಲಿ ಒಂಬತ್ತು ಬಿಲಿಯನ್ ಡಾಲರುಗಳನ್ನು ಆಕರ್ಷಿಸುವ ಗುರಿಯನ್ನು ಸರ್ಕಾರ ಹೊಂದಿದೆ ಮತ್ತು ಹೈನುಗಾರಿಕೆ ಕ್ಷೇತ್ರದಲ್ಲಿ ಶೇಕಡಾ 100 ರಷ್ಟು ವಿದೇಶಿ-ನೇರ ಬಂಡವಾಳಕ್ಕೆ ಒಪ್ಪಿಗೆ ನೀಡಿದೆ. ಈ ಕ್ಷೇತ್ರಗಳಲ್ಲಿ ಶೇ .80 ಕ್ಕಿಂತ ಹೆಚ್ಚು ಉತ್ಪಾದನೆಯು ಅಸಂಘಟಿತ ವಲಯದಲ್ಲಿದ್ದು, ಶೇಕಡಾ 70-72ರಷ್ಟು ಉದ್ಯೋಗಿಗಳು ಮಹಿಳೆಯರಾಗಿದ್ದಾರೆ.

ಯಾವ, ಮತ್ತು ಎಷ್ಟು ಮಹಿಳೆಯರಿಗೆ ಸಂಕಷ್ಟಗಳು ಕಾದಿವೆ

ಆದ್ದರಿಂದ ಈ ಕಾನೂನುಗಳಿಂದ ಕೃಷಿ ಮತ್ತು ಸಂಬಂಧಿತ ಕೃಷಿಯೇತರ ಕ್ಷೇತ್ರಗಳಲ್ಲಿನ ಎಷ್ಟು,, ಯಾವ, ಮತ್ತು ಎಷ್ಟು ಮಹಿಳೆಯರು ಸಂಕಷ್ಟಕ್ಕೊಳಗಾಗುತ್ತಾರೆ ಎಂದು ಪರಿಶೀಲಿಸುವುದು ಸೂಕ್ತವಾಗಿದೆ. ನಮಗೆ ಲಭ್ಯವಿರುವ ಸಾರ್ವಜನಿಕ ದತ್ತಾಂಶವು ಸೀಮಿತವಾಗಿದ್ದರೂ, ಲಭ್ಯವಿರುವ ಮಾಹಿತಿಗಳ ಆಧಾರದ ಮೇಲೆ, ಮಹಿಳೆಯರು ಪ್ರಮುಖ ಪಾತ್ರವಹಿಸುವ ಕೆಲವು **ಪುಟ 10 ನೋಡಿ**



ಕೃಷಿಯಲ್ಲಿ ಮಹಿಳೆಯರ ಕುರಿತ ರಾಷ್ಟ್ರೀಯ ಧೋರಣಾ ಕರಡನ್ನು ಅಂಗೀಕರಿಸಿ

ವರದಿ: ಟಿ. ಯಶವಂತ್

ದೇಶದಾದ್ಯಂತ ನಡೆಯುತ್ತಿರುವ ರೈತ ಹೋರಾಟದಲ್ಲಿ ಸಮಾಜದ ಎಲ್ಲಾ ವಿಭಾಗಗಳ ಮಹಿಳೆಯರು ವಿಶೇಷವಾಗಿ ಮಹಿಳಾ ಕೃಷಿಕರು ಹಾಗೂ ಕೃಷಿ ಕೂಲಿಕಾರರು ಅಭೂತಪೂರ್ವ ರೀತಿಯಲ್ಲಿ ಭಾಗವಹಿಸುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ(ಎಐಡಿಡಬ್ಲ್ಯುಎ), ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಮತ್ತು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ(ಎಐಎಡಬ್ಲ್ಯುಯು) ಫೆಬ್ರುವರಿ 26ರಂದು ಒಂದು ಪತ್ರಿಕಾಗೋಷ್ಠಿಯಲ್ಲಿ ರೈತರು ಮತ್ತು ಕೃಷಿಕೂಲಿಕಾರರಾಗಿ ಮಹಿಳೆಯರ ಹಕ್ಕುಗಳಿಗೆ ಮಾನ್ಯತೆ ನೀಡಬೇಕು, ಕೃಷಿಯಲ್ಲಿ ಮಹಿಳೆಯರನ್ನು ಕುರಿತ ರಾಷ್ಟ್ರೀಯ ನೀತಿಯ 2009ರ ಕರಡನ್ನು ಅಂಗೀಕರಿಸಬೇಕು ಎಂದು ಕರೆ ನೀಡಿವೆ.

ಕಳೆದ ಮೂರು ದಶಕಗಳಿಗೂ ಹೆಚ್ಚು ಕಾಲದಿಂದಲೂ ಕೃಷಿ ಬಿಕ್ಕಟ್ಟು ನಿರಂತರವಾಗಿ ಮುಂದುವರೆದುಕೊಂಡು ಬಂದಿದೆ. ಕಳೆದ ಐದು ವರ್ಷದಲ್ಲಿ ಕೃಷಿ ಮತ್ತು ಕೃಷಿ ಸಂಬಂದಿತ ವಲಯಗಳಲ್ಲಿ ಸುಮಾರು 7.2 ಕೋಟಿ ಮಹಿಳೆಯರು ತಮ್ಮ ಉದ್ಯೋಗಗಳನ್ನು ಕಳೆದುಕೊಂಡಿದ್ದಾರೆ. ಸುಮಾರು 4 ಲಕ್ಷ ಪುರುಷ ರೈತರು ಕೃಷಿ ಬಿಕ್ಕಟ್ಟಿನ ಪರಿಣಾಮದಿಂದ ಆತ್ಮಹತ್ಯೆಗೀಡಾಗಿದ್ದರೂ ಸಾಲಮನ್ನಾ ಅಥವಾ ಪುನರ್ವಸತಿ ಪ್ಯಾಕೇಜ್‌ಗಳೂ ಅವರ ವಿಧವಾ ಪತ್ನಿಯರಿಗೆ ಇನ್ನೂ ತಲುಪಿಲ್ಲ. ರೈತರು ಹಾಗೂ ಕೃಷಿ ಕೂಲಿಕಾರರು ಎಂದು ಗುರುತಿಸಲ್ಪಡದೇ ಇರುವುದೇ ಸಾಮಾಜಿಕ ಭದ್ರತೆ ಹಾಗೂ ಇನ್ನಿತರ ಸೌಕರ್ಯಗಳ ಲಭ್ಯತೆಯಿಂದ ದೂರ ಉಳಿಯುವಂತಾಗಿದೆ. ಪಿಎಂ ಕಿಸಾನ್ ನಿಧಿ ಅಡಿಯಲ್ಲಿ ಸಿಗುವ ಅಲ್ಪ ಪ್ರಮಾಣದ ಹಾಗೂ ಅಸಮರ್ಪಕ ಆದಾಯ ಬೆಂಬಲ ಪಡೆಯಲೂ ಸಹ ಬಹುತೇಕ ಮಹಿಳೆಯರು ಅರ್ಹರಾಗಿಲ್ಲ.

ಮಹಿಳಾ ರೈತರ ಹಾಗೂ ಕೃಷಿ ಕೂಲಿಕಾರರ ಉಲ್ಬಣಗೊಳ್ಳುತ್ತಿರುವ ಸಮಸ್ಯೆಗಳಿಗೆ ಸರ್ಕಾರದ ಅತ್ಯಲ್ಪ ಪ್ರಮಾಣದ ಪ್ರತಿಕ್ರಿಯೆ ಅತ್ಯಂತ ಅಸಮರ್ಪಕ ವಾಗಿದ್ದು, MNREGA ಮತ್ತು NRLM ಹಾಗೂ Mudra ಯೋಜನೆಗಳೂ ಕುಂಠಿತಗೊಳ್ಳಲು ಕಾರಣವಾಗಿದೆ. ಇದರಿಂದಾಗಿ ಮಹಿಳೆಯರಲ್ಲಿ ಸಾಲಗ್ರಸ್ಥತೆ ಹೆಚ್ಚುತ್ತಿದ್ದು ಅವರು ಸಾಲದ ಸುಳಿಗೆ ನೂಕಲ್ಪಡುತ್ತಿರುವುದನ್ನು ಕಾಣಬಹುದಾಗಿದೆ. ಸಾಲಮನ್ನಾ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕ ಕಡಿಮೆ ಬಡ್ಡಿ ದರದ ಸಾಲ ಒದಗಿಸಬೇಕೆಂಬ ಬೇಡಿಕೆಯನ್ನು ಬಹು ಹಿಂದಿನಿಂದಲೂ ಸರ್ಕಾರಗಳು ನಿರ್ಲಕ್ಷಿಸಿವೆ. ಕಾರ್ಪೊರೇಟ್‌ಗಳ ಯೋಜನೆಗಳಿಗಾಗಿ ಸಾರ್ವಜನಿಕ ಉಪಯೋಗದ ಭೂಮಿಗಳನ್ನು ಮಾರುತ್ತಿರುವುದರಿಂದ ಮೇವು ಮತ್ತಿತರ ಅಗತ್ಯಗಳಿಗೆ ಅರಣ್ಯ ಹಾಗೂ ಜಲ ಸಂಪನ್ಮೂಲಗಳ ಮೇಲೆ ಪೂರ್ಣವಾಗಿ ಅಥವಾ ಪೂರಕ ಅಗತ್ಯವಾಗಿ ಅವಲಂಬಿಸಿರುವ ಮಹಿಳೆಯರ ಬದುಕು ಶೋಚನೀಯ ಸ್ಥಿತಿಗೆ ತಳ್ಳಲ್ಪಡುತ್ತಿದೆ. ಸಾರ್ವಜನಿಕ ಖರೀದಿ-ದಾಸ್ತಾನು ಹಾಗೂ ಸಾರ್ವಜನಿಕ ಪಡಿತರ ವ್ಯವಸ್ಥೆ ದುರ್ಬಲಗೊಳ್ಳುತ್ತಿರುವುದರ ಫಲವಾಗಿ ಮಹಿಳೆಯರು ಹಾಗೂ ಮಕ್ಕಳಲ್ಲಿ ಅಪೌಷ್ಠಿಕತೆ ಹೆಚ್ಚುತ್ತಿದೆ. ಬಹು ಬ್ರಾಂಡ್ ಚಿಲ್ಲರೆ ವ್ಯಾಪಾರಕ್ಕೆ ಅವಕಾಶ ನೀಡುತ್ತಿರುವುದು ಹಾಗೂ ಎಪಿಎಂಸಿ ಗಳನ್ನು ದುರ್ಬಲಗೊಳಿಸುತ್ತಿರುವುದು ತರಕಾರಿ, ಹಾಲು, ಮೀನು ಮುಂತಾದ ಚಿಲ್ಲರೆ ಮಾರಾಟದ ಮಹಿಳೆಯರ ಮೇಲೆ ದುಷ್ಪರಿಣಾಮಗಳನ್ನು ಉಂಟು ಮಾಡುತ್ತದೆ.

ಈ ಹಿನ್ನೆಲೆಯಲ್ಲಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಸವಾಲುಗಳ ಮೇಲೆ ಗಮನಹರಿಸಬೇಕಾದ ವಿಶೇಷ ಮುತುವರ್ಜಿ ಅಗತ್ಯ ವಾಗಿದ್ದು, 2009 ರಲ್ಲಿ ರಾಷ್ಟ್ರೀಯ ಮಹಿಳಾ ಆಯೋಗ ರೂಪಿಸಿದ ಕೃಷಿ ಕ್ಷೇತ್ರದ ಮಹಿಳೆಯರ ಕುರಿತ ಕರಡು ರಾಷ್ಟ್ರೀಯ ಧೋರಣೆಯಲ್ಲಿ **ಪುಟ 10 ನೋಡಿ**

ಮಹಿಳಾ ದುಡಿಮೆಗಾರರು ಮತ್ತು ರೈತ-ವಿರೋಧಿ ಕಾನೂನುಗಳು

ಪುಟ 9 ರಿಂದ

ವಿಭಾಗಗಳನ್ನು ನಾವು ಗುರುತಿಸಬಹುದು.

ಮೊದಲ ವಿಧದ ಅಸಂಘಟಿತ ವಲಯದ ಉದ್ಯಮಗಳನ್ನು 'ಗೃಹಾಧಾರಿತ ಉದ್ಯಮಗಳು' ಎಂದು ವರ್ಗೀಕರಿಸಲಾಗಿದೆ, 2018 ರಲ್ಲಿ ಸುಮಾರು 47.4 ಲಕ್ಷ ಮಹಿಳೆಯರು ಕೂಲಿ ಸಂದಾಯವಾಗುವ ಆರ್ಥಿಕ ಚಟುವಟಿಕೆಗಳಲ್ಲಿರುತ್ತಾರೆ ಎಂದು ಅಂದಾಜಿಸಲಾಗಿದೆ; ಇದು ಕೃಷಿಯಲ್ಲಿ ಮಹಿಳೆಯರ ಎಲ್ಲಾ ಉದ್ಯೋಗಗಳಲ್ಲಿ ಶೇಕಡಾ 7.5 ರಷ್ಟಿದೆ ಮತ್ತು ಪ್ರಾಣಿಗಳ ಸಾಕಣಿಕೆ ಮತ್ತು ಸುಗ್ಗಿಯ ನಂತರದ ಬೆಂಬಲ ಚಟುವಟಿಕೆಗಳಂತಹ ಚಟುವಟಿಕೆಗಳನ್ನು ಒಳಗೊಂಡಿದೆ. ಈ ಕಾರ್ಮಿಕರಲ್ಲಿ ಮೂರನೇ ಒಂದು ಭಾಗದಷ್ಟು ಜನರು ಸ್ವಂತ–ಖಾತೆ ಕೆಲಸಗಾರರಾಗಿದ್ದರೆ, ಶೇಕಡಾ 61 ರಷ್ಟು ಜನರು ಸ್ವಯಂ ಉದ್ಯೋಗಿ ಉದ್ಯಮಗಳಲ್ಲಿ ಅವಲಂಬಿತ ಕಾರ್ಮಿಕರಾಗಿ ಕೆಲಸ ಮಾಡುತ್ತಾರೆ.

ಎರಡನೇ ವಿಭಾಗ ಹೈನುಗಾರಿಕೆ ಮತ್ತು ಮೀನುಗಾರಿಕೆಯಲ್ಲಿ ಕೆಲಸ ಮಾಡುವ ಮಹಿಳೆಯರನ್ನು ಹೊಂದಿದ್ದು, ಅವರು ಈ ಕ್ಷೇತ್ರಗಳಲ್ಲಿ ಶೇಕಡಾ 70 ಕ್ಕಿಂತ ಹೆಚ್ಚು ಉದ್ಯೋಗಗಳನ್ನು ನಿಭಾಯಿಸಿತ್ತಾರೆ.. ಸರ್ಕಾರದ ಮಾಹಿತಿಯ ಪ್ರಕಾರ, 2016 ರಲ್ಲಿ ಸುಮಾರು 1.7 ಕೋಟಿ ಹೈನುಗಾರಿಕೆಯಲ್ಲಿ ತೊಡಗಿರುವ ರೈತರು ಇದ್ದರು, ಇವರಲ್ಲಿ ಹೆಚ್ಚಿನವರು ಮಹಿಳೆಯರು; ಮತ್ತೊಂದು ಅಧ್ಯಯನದಲ್ಲಿ, 2018 ರಲ್ಲಿ ಹಾಲು ಉತ್ಪಾದನೆಯಲ್ಲಿ ಸುಮಾರು 60 'ಲಕ್ಷ ಮಹಿಳೆಯರು ವರ್ಷಕ್ಕೆ 90–120 ದಿನಗಳವರೆಗೆ ಉದ್ಯೋಗದಲ್ಲಿದ್ದಾರೆ ಎಂದು ಅಂದಾಜಿಸಲಾಗಿದೆ. ಈ ಗ್ರಾಮೀಣ ಉದ್ಯೋಗಗಳು ಕೃಷಿ ಕುಟುಂಬಗಳಿಗೆ ಗಮನಾರ್ಹ ಆದಾಯವನ್ನು ನೀಡುತ್ತವೆ; ಸರ್ಕಾರದ ಅಂದಾಜಿನ ಪ್ರಕಾರವೇ ಸುಮಾರು 7.5 ಕೋಟಿ ಕೃಷಿ ಕುಟುಂಬಗಳು ಕನಿಷ್ಠ ಒಂದು ಅಥವಾ ಎರಡು ಜಾನುವಾರುಗಳನ್ನು ಹೊಂದಿದ್ದು, ಮಹಿಳೆಯರೇ ಹಾಲು ಉತ್ಪಾದನೆಯಲ್ಲಿ ಹೆಚ್ಚಿನ ಭಾಗದ ಕೆಲಸವನ್ನು ನಿಭಾಯಿಸುತ್ತಾರೆ. 2016 ರಲ್ಲಿ ಗೃಹಾಧಾರಿತ ಮತ್ತು ಚಿಲ್ಲರೆ ಮೀನುಗಾರಿಕೆ ಕ್ಷೇತ್ರದಲ್ಲಿ ಸುಮಾರು 1 ಕೋಟಿ ಮಹಿಳೆಯರು ಉದ್ಯೋಗದಲ್ಲಿದ್ದರು. ಒಂದು ಅಂದಾಜಿನ ಪ್ರಕಾರ, ಈ ಪೈಕಿ ಶೇಕಡಾ 48 ರಷ್ಟು ಮಹಿಳೆಯರು ಮೀನು ಚಿಲ್ಲರೆ ವ್ಯಾಪಾರದಲ್ಲಿದ್ದಾರೆ ಮತ್ತು ತಮ್ಮ ಉತ್ಪನ್ನಗಳನ್ನು ಸ್ಥಳೀಯ ಮಾರುಕಟ್ಟೆಗಳಲ್ಲಿ ಮಾರಾಟ ಮಾಡುತ್ತಾರೆ.

ಮಹಿಳೆಯರು ಪ್ರಮುಖ ಪಾತ್ರವಹಿಸುವ ಮೂರನೇ ವಿಭಾಗವೆಂದರೆ ಬೀದಿಬದಿ ವ್ಯಾಪಾರ ಮತ್ತು ಆಹಾರ ಸಂಸ್ಕರಣೆ / ಚಿಲ್ಲರೆ ವ್ಯಾಪಾರ. ಈ ವಿಭಾಗಕ್ಕೆ ಯಾವುದೇ ವಿಶ್ವಾಸಾರ್ಹ ಸ್ಥೂಲ ಅಂಕಿ–ಅಂಶಗಳಿಲ್ಲದಿದ್ದರೂ, ಕೆಲವು ಅಧ್ಯಯನಗಳು ಕಿರಾಣಿ ಚಿಲ್ಲರೆ ವ್ಯಾಪಾರದಲ್ಲಿ ಸುಮಾರು 10ಲಕ್ಷ ಮಹಿಳೆಯರು ಮತ್ತು ಆಹಾರ ಸಂಸ್ಕರಣೆ ಮತ್ತು ಚಿಲ್ಲರೆ ವ್ಯಾಪಾರದಲ್ಲಿ ಅಂದಾಜು ಮಾಡಲಾಗದ ಸಂಖ್ಯೆಯ ಮಹಿಳೆಯರು ಕೆಲಸಮಾಡುತ್ತಾರೆಂದು ಸೂಚಿಸುತ್ತವೆ. ಇದಲ್ಲದೆ, ಮೇಲೆ ಹೇಳಿದಂತೆ, ಸುಮಾರು 50ಲಕ್ಷ ಮೀನು ಚಿಲ್ಲರೆ ವ್ಯಾಪಾರಿಗಳಿದ್ದಾರೆ.. ಆದ್ದರಿಂದ, ಸಾಂಪ್ರದಾಯಿಕ ಮೂಲ ಅಂದಾಜಿನ ಪ್ರಕಾರ ಅಸಂಘಟಿತ ವಲಯದ ಸುಮಾರು 1ರಿಂದ 2 ಕೋಟಿ ಮಹಿಳಾ ಕಾರ್ಮಿಕರು ಈ ಕಾನೂನುಗಳಿಂದ ಸಂಕಷ್ಟಕ್ಕೊಳಗಾಗುತ್ತಾರೆ.

ಈ ನಿಟ್ಟಿನಲ್ಲಿ ನೋಡಿದರೆ, ಸರ್ಕಾರದ ಘೋಷಣೆಗಳನ್ನು ಮಹಿಳಾ ಕಾರ್ಮಿಕರ ಜೀವನದಲ್ಲಿ ಪ್ರಮುಖ ಬದಲಾವಣೆಗಳನ್ನು ತರಲು ಹೊಂದಿಸಲಾಗಿವೆ. ಪರಿಣಾಮದ ಸಮಗ್ರ ಸ್ವರೂಪವನ್ನು ಅಂದಾಜಿಸುವುದು ಕಷ್ಟವಾದರೂ, ಇತರ ದೇಶಗಳಲ್ಲಿನ ಕೃಷಿಯೇತರ ವಲಯದ ಕಾರ್ಪೊರೇಟಿಕರಣದ ಕೆಲವು ನಿದರ್ಶನಗಳು ಲಭ್ಯವಿವೆ.

ಬೇರೆ ದೇಶಗಳ ಅನುಭವಗಳ ಪಾಠ

ಹಲವಾರು ಆಫ್ರಿಕನ್, ಆಗ್ನೇಯ ಏಷ್ಯಾ ಮತ್ತು ಲ್ಯಾಟಿನ್ ಅಮೇರಿಕನ್ ದೇಶಗಳ ಅನುಭವಗಳು ವಿವರಿಸುವಂತೆ, ಅಸಂಘಟಿತ ವಲಯದ ಸ್ವ-ಉದ್ಯೋಗಿ ಕಾರ್ಮಿಕರೊಂದಿಗಿನ ಗುತ್ತಿಗೆ ಒಪ್ಪಂದಗಳು ಉಭಯ ಗುತ್ತಿಗೆ ಪಕ್ಷಗಳ ನಡುವಿನ ಅಸಮಾನ ಸಮೀಕರಣಗಳಿಂದಾಗಿ ಭಾರಿ ಬೆಲೆ ಹಿಂಡುವಿಕೆಗೆ ಕಾರಣವಾಗಿವೆ.

ಚೀನಾದಲ್ಲಿನ ಹೈನುಗಾರಿಕೆ ವಲಯದಲ್ಲಿ ಕಾರ್ಪೊರೇಟ್ ನುಗ್ಗುವ ಸಂದರ್ಭದಲ್ಲಿ ನಡೆಸಿದ ಅಧ್ಯಯನಗಳು ಸಣ್ಣ ಡೈರಿ ರೈತರಿಗೆ ಕಡಿಮೆ ಆದಾಯಕ್ಕೆ ಕಾರಣವಾದ ಬೆಲೆ ಹಗರಣಗಳಿಗೆ ಸಂಬಂಧಿಸಿವೆ.ಇದೇ ರೀತಿಯ ಅನುಭವವು ಫ್ರಾನ್ಸ್‌ನ ವಿಷಯದಲ್ಲೂ ಕಂಡುಬಂದಿದೆ.

ಮೀನುಗಾರಿಕೆ ಕ್ಷೇತ್ರದಲ್ಲೂ, ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಮತ್ತು ಸ್ವತಂತ್ರ ಸಂಶೋಧಕರ ಹಲವಾರು ಅಧ್ಯಯನಗಳು ಪೂರೈಕೆ ಸರಪಳಿಗಳ ಪ್ರವೇಶದೊಂದಿಗೆ ಕಡಿಮೆ ಸಂಬಳದ ಗುತ್ತಿಗೆ ಉದ್ಯೋಗಕ್ಕೆ ಕಾರ್ಮಿಕರನ್ನು ಬಲವಂತಪಡಿಸಿದ ನಿದರ್ಶನಗಳನ್ನು ವಿವರಿಸುತ್ತವೆ.. ಇವುಗಳಲ್ಲಿ, ಮಹಿಳಾ ಕಾರ್ಮಿಕರು ಹದಗೆಡುತ್ತಿರುವ ಕೆಲಸದ ಪರಿಸ್ಥಿತಿಗಳನ್ನು ಮತ್ತು ಥೈಲ್ಯಾಂಡ್ ಮತ್ತು ಫಿಲಿಪೈನ್ಸ್‌ನಂತಹ ದೇಶಗಳಲ್ಲಿ ಲೈಂಗಿಕ ಕಳ್ಳಸಾಗಣೆಯನ್ನು ಎದುರಿಸುತ್ತಿದ್ದಾರೆ.

ಈ ಉದಾಹರಣೆಗಳು ಗ್ರಾಮೀಣ ಆರ್ಥಿಕತೆಯ ವ್ಯವಸ್ಥೆಯು ಸರಬರಾಜು ಸರಪಳಿಗಳಾಗುವುದರಿಂದ ಸಂಭವಿಸುವ ದುಷ್ಪರಿಣಾಮಗಳಿಗೆ ಒಂದು ನಿದರ್ಶನವನ್ನು ಒದಗಿಸುತ್ತವೆ. ಈ ಅನೇಕ ಕೆಲಸಗಳಲ್ಲಿ ಮಹಿಳೆಯರು ಶ್ರಮ ಪ್ರಕ್ರಿಯೆಗಳ ಅತ್ಯಂತ ತಳಮಟ್ಟದಲ್ಲಿರುವುದರಿಂದ, ಕೃಷಿ ಮತ್ತು ಸಂಬಂಧಿತ ವಲಯದಲ್ಲಿ ಕಾರ್ಪೊರೇಟ್‌ಗಳ ಲಾಭಕೋರ ಅನ್ವೇಷಣೆಯಲ್ಲಿ ಮಹಿಳೆಯರು ಮತ್ತಷ್ಟು ಶೋಷಣೆಯನ್ನು ಎದುರಿಸಬೇಕಾಗುತ್ತದೆ ಎಂಬುದು ಸ್ಪಷ್ಟವಾಗಿದೆ.

ಈ ಚರ್ಚೆಯು ಕೃಷಿ ಮತ್ತು ಕೃಷಿಯೇತರ ಉತ್ಪಾದನೆಯಲ್ಲಿ ಕೃಷಿ ಕಾನೂನುಗಳು ಮತ್ತು ಮಹಿಳಾ ಕಾರ್ಮಿಕರ ನಡುವಿನ ಪರಸ್ಪರ ಸಂಬಂಧಗಳನ್ನು ಎತ್ತಿ ತೋರಿಸಿದೆ. ಕೃಷಿ ವಿರೋಧಿ ಕಾನೂನುಗಳಲ್ಲಿ ಕೃಷಿ ಉತ್ಪನ್ನಗಳ ವ್ಯಾಖ್ಯಾನದಲ್ಲಿ ಹೈನುಗಾರಿಕೆ ಮತ್ತು ಮೀನುಗಾರಿಕೆಯನ್ನು ಸೇರಿಸಿರುವುದು ಮಹಿಳಾ ಕಾರ್ಮಿಕರ ಮೇಲೆ ಪರಿಣಾಮ ಬೀರುವ ವಿಧಾನಕ್ಕೆ ಒಂದು ಅಶುಭ ಸೂಚಕವಾಗಿದೆ. ಕೃಷಿ ಕಾನೂನುಗಳನ್ನು ವಿರೋಧಿಸುವ ರೈತ ಚಳವಳಿಯನ್ನು ಬೆಂಬಲಿಸುವ ಪ್ರಜಾಪ್ರಭುತ್ವ ಮಹಿಳಾ ಆಂದೋಲನವು ಈ ಕೆಲವು ವಿಷಯಗಳನ್ನು ತನ್ನ ವಿಶಾಲ ಅಭಿಯಾನದಲ್ಲಿ ಸೇರಿಸಬೇಕಾಗಿದೆ. ನಾವು ನೋಡಿದಂತೆ, ಗ್ರಾಹಕರಾಗಿ ಅಥವಾ ರೈತರಾಗಿ ಮಾತ್ರವಲ್ಲದೆ ಸಂಬಂಧಿತ ಕ್ಷೇತ್ರಗಳಲ್ಲಿನ ಕಾರ್ಮಿಕರು / ಉತ್ಪಾದಕರಾಗಿಯೂ ಮಹಿಳೆಯರ ಮೇಲೆ ಈ ಕರಾಳ ಕಾನೂನುಗಳು ಪರಿಣಾಮ ಬೀರುತ್ತವೆ. ಈ ಸಮಸ್ಯೆಗಳನ್ನು ಎತ್ತಿತೋರಿಸುವ ಮೂಲಕ, ಮಹಿಳಾ ಸಂಘಟನೆಗಳು ಹೋರಾಟದ ಆಯಾಮವನ್ನು ವಿಸ್ತರಿಸಲು ಮತ್ತು ಅದರ ವ್ಯಾಪ್ತಿಯನ್ನು ಹೆಚ್ಚು ಸಮಗ್ರಗೊಳಿಸಲು ಸಹಾಯ ಮಾಡಬಹುದು..

ಪುಟ 9 ರಿಂದ

ಕೃಷಿಯಲ್ಲಿ ಮಹಿಳೆಯರ ಕುರಿತ ರಾಷ್ಟ್ರೀಯ ಧೋರಣಾ ಕರಡನ್ನು ಅಂಗೀಕರಿಸಿ



ಕೆಲವು ಪರಿಹಾರಗಳನ್ನು ಒದಗಿಸಲಾಗಿದೆ. ಈಗ ಎಐಡಿಡಬ್ಲ್ಯುಎ ಅಧ್ಯಕ್ಷರಾಗಿರುವ ಆಗ ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯರಾಗಿದ್ದ ಮಾಲಿನಿ ಭಟ್ಟಾಚಾರ್ಯರವರ ನೇತೃತ್ವದಲ್ಲಿ ಈ ಕರಡು ಸಿದ್ದಗೊಂಡಿದ್ದು ಈ ಸಮಿತಿಯಲ್ಲಿ ಸಂಶೋಧಕರು ಹಾಗೂ ಕೃಷಿ ಮತ್ತು ಕೃಷಿ ಸಂಬಂಧಿತ ಕ್ಷೇತ್ರ ಗಳ ಮಹಿಳೆಯರ ಹಕ್ಕುಗಳಿಗಾಗಿ ನಿರಂತರವಾಗಿ ಧ್ವನಿ ಎತ್ತುತ್ತಿರುವ ಸಾಮಾಜಿಕ ಕಾರ್ಯಕರ್ತರು ಇದ್ದರು. ಇವೆಲ್ಲವೂ ಮಹಿಳೆಯನ್ನು' ರೈತ' ಹಾಗೂ 'ಶ್ರಮಿಕ' ಎಂದು ಗುರುತಿಸುವ, ಭೂಮಿ ಹಾಗೂ ನೈಸರ್ಗಿಕ ಸಂಪನ್ಮೂಲಗಳ ಹಕ್ಕು ; ಆಹಾರ ಹಾಗೂ ಆಹಾರ ಭದ್ರತೆಯ ಹಕ್ಕು; ಬದುಕುವ ಹಾಗೂ ಘನತೆಯ ಕೆಲಸದ ಹಕ್ಕು ಹಾಗೂ ಸಾಲದಿಂದ ಮುಕ್ತಿ ಹಕ್ಕು ಮತ್ತು ನಿಯಂತ್ರಿತ ಮಾರುಕಟ್ಟೆ ಹಾಗೂ ನ್ಯಾಯಯುತ ಬೆಲೆ ಪಡೆಯುವ ಹಕ್ಕು ಎಂಬುದಕ್ಕೆ ಸಂಬಂದಿಸಿದ ಹಕ್ಕುಗಳಾಗಿವೆ .ಈ ಧೋರಣೆಗಳನ್ನು ಅಂತಿಮಗೊಳಿಸಿ ಕೃಷಿ ಮಂತ್ರಾಲಯಕ್ಕೆ ಸಲ್ಲಿಸಲಾಯಿತಾದರೂ ದುರದೃಷ್ಟವಶಾತ್ ಆ ನಂತರದ ಎಲ್ಲಾ ಸರ್ಕಾರಗಳು ಈ ಶಿಫಾರಸ್ಸುಗಳನ್ನು ಕಡೆಗಣಿಸುತ್ತಾ ಬಂದಿವೆ.

ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿದ್ದ ಪ್ರೊ. ಅರ್ಚನಾ ಪ್ರಸಾದ್ ಕರಡು ರಾಷ್ಟ್ರೀಯ ನೀತಿಯ ಈ ಅಂಶಗಳನ್ನು ಸ್ಥೂಲವಾಗಿ ಮುಂದಿಟ್ಟರು.

ಕೃಷಿ ಕ್ಷೇತ್ರದ ಮಹಿಳೆಯರ ಕುರಿತ ಕರಡು ರಾಷ್ಟ್ರೀಯ ಧೋರಣೆಗಳನ್ನು ಅಂಗೀಕರಿಸುವ ಮೂಲಕ ಈ ಕೆಲವು ಸವಾಲುಗಳಿಗೆ ಪರಿಹಾರ ತೋರಬಹುದು ಎಂದು ಪ್ರೊ. ಅರ್ಚನಾ ಪ್ರಸಾದ್ ಅಲ್ಲದೆ, ಎಐಕೆಎಸ್ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲಾ, ಎಐಕೆಎಸ್ ಅಧ್ಯಕ್ಷ ಡಾ.ಅಶೋಕ್ ಧವಳೆ, ಎಐಡಿಡಬ್ಲ್ಯೂಎ ಪ್ರಧಾನ ಕಾರ್ಯದರ್ಶಿ ಮರಿಯಂ ಧವಳೆ, ಹಾಗೂ ಎಐಎಡಬ್ಲ್ಯೂಯು ಜಂಟಿ ಕಾರ್ಯದರ್ಶಿ ವಿಕ್ರಮ್ ಸಿಂಗ್ ಬಲವಾಗಿ ಪ್ರತಿಪಾದಿಸಿದರು. ಮಹಿಳಾ ರೈತರ ಹಾಗೂ ಗ್ರಾಮೀಣ ಶ್ರಮಜೀವಿಗಳ ಉತ್ತಮ ಸ್ಥಿತಿಯನ್ನು ಖಾತ್ರಿಪಡಿಸಲು ಅಗತ್ಯವಾದ ನಿರ್ದಿಷ್ಟ ಬಜೆಟ್ ಅನುದಾನ ಒದಗಿಸುವ ಉದ್ದೇಶದ ಧೋರಣಾ ದಿಕ್ಕನ್ನು ಈ ಕರಡು ಹೇಳುತ್ತದೆ. ಈ ಪ್ರಸ್ತಾಪಿತ ಕ್ರಮಗಳು ಈ ಕೆಳಗಿನವುಗಳನ್ನು ಒಳಗೊಂಡಿದೆ ಎಂದು ಅವರು ಹೇಳಿದರು:

1. ಈ ದೃಷ್ಟಿಯಿಂದ ಭೂ ಸುಧಾರಣೆಯನ್ನು ಜಾರಿಗೊಳಿಸಲು ಹಾಗೂ ಜಂಟಿ ಪಟ್ಟಾ ನೀಡಲು ಅಗತ್ಯವಾದ ವೈಯಕ್ತಿಕ ಮತ್ತು ಸಾಂಪ್ರದಾಯಿಕ ಕಾನೂನುಗಳು ಸೇರಿದಂತೆ ಎಲ್ಲಾ ಕಾನೂನುಗಳಿಗೆ ತಿದ್ದುಪಡಿ ತರುವ ಕಾನೂನು ಕ್ರಮಗಳನ್ನು ಕೈಗೊಳ್ಳುವುದು.ಅರಣ್ಯ ಹಕ್ಕು ಕಾಯ್ದೆ ಅಡಿಯಲ್ಲೂ ಜಂಟಿ ಪಟ್ಟವನ್ನು ಜಾರಿಗೊಳಿಸುವುದು. ಮಹಿಳಾ ಹಕ್ಕುಗಳ ಹಾಗೂ ವಿಧವೆ, ಪರಿತ್ಯಕ್ತೆ , ತೊರೆಯಲ್ಪಟ್ಟ ಮಹಿಳೆಯರು ಸೇರಿದಂತೆ ಒಂಟಿ ಮಹಿಳೆ ನೇತೃತ್ವದ ಕುಟುಂಬಗಳನ್ನು ಕೇಂದ್ರೀಕರಿಸಿ ಮಹಿಳೆಯರ ಭೂಮಿ ಹಕ್ಕನ್ನು ದಾಖಲಿಸುವುದು.
2. ಸರ್ಕಾರಿ ಭೂಮಿ ಅಥವಾ ಬೀಳು ಭೂಮಿಯನ್ನು ಭೂ ರಹಿತರಿಗೆ ಕೃಷಿ ಉದ್ದೇಶಕ್ಕಾಗಿ ಗುತ್ತಿಗೆ ಅಥವಾ ಮಾರಾಟಕ್ಕೆ ಕೊಡುವಾಗ ಮಹಿಳಾ ಸಹಕಾರಿ ಸಂಘಗಳನ್ನು ಅದ್ಯತೆಯಾಗಿ ಪರಿಗಣಿಸುವುದು.
3. ಕೃಷಿ ಹಾಗೂ ಕೃಷಿ ಸಂಬಂಧಿತ ವಲಯಗಳಲ್ಲಿ ಇರುವ ಮಹಿಳಾ ಕೃಷಿಕರು ಹಾಗೂ ಶ್ರಮಿಕರು ಶ್ರಮಜೀವಿಗಳಾಗಿ ಗುರುತಿಸಲ್ಪಡಬೇಕು ಹಾಗೂ ದಾಖಲಿಸಲ್ಪಡಬೇಕು ಮತ್ತು ಸಾಮಾಜಿಕ ಭದ್ರತೆ ಸೌಲಭ್ಯಗಳಾದ ಮಕ್ಕಳ ಆರೈಕೆ, ಆರೋಗ್ಯ ಆರೈಕೆ ಹಾಗೂ ವೃದ್ದಾಪ್ಯ ಪಿಂಚಣಿ ಯಂತಹ ಸವಲತ್ತುಗಳನ್ನು ಒದಗಿಸಬೇಕು.
4. ಮಹಿಳಾ ಕಾರ್ಮಿಕರ ಸಹಕಾರಿ ಸಂಘಗಳ ರಚನೆಗೆ ಹಾಗೂ ಗುಂಪು ಕೃಷಿ ಗೆ ಸಹಾಯ ಧನ ಮತ್ತು ಉತ್ತೇಜನ ನೀಡುವ ಯೋಜನೆಗಳನ್ನು ರಾಜ್ಯ, ಕೇಂದ್ರ ಸರ್ಕಾರಗಳು ರೂಪಿಸಬೇಕು.ಪಶು ಸಂಗೋಪನೆ, ಅರಣ್ಯ ಕೃಷಿ ಮತ್ತಿತರೆ ಕೃಷಿ ಸಂಬಂದಿತ ಚಟುವಟಿಕೆಗಳಲ್ಲಿ ಗುಂಪಾಗಿ ತೊಡಗುವಂತೆ ಉತ್ತೇಜನ ಯೋಜನೆಗಳು ಹಾಗೂ ಹಣಕಾಸು ನೆರವು ಮೂಲಕ ಪ್ರೊತ್ಸಾಹಿಸಬೇಕು.
5. ಗರಿಷ್ಟ ಮಟ್ಟದ ಕನಿಷ್ಠ ಕೂಲಿಯೊಂದಿಗೆ ಯಾವುದೇ ಧಾರ್ಮಿಕ, ಜಾತಿ ಹಾಗೂ ಲಿಂಗ ತಾರತಮ್ಯ ವಿಲ್ಲದೇ ಕನಿಷ್ಠ 200 ದಿನಗಳ ಉದ್ಯೋಗ ಒದಗಿಸುವಂತೆ ಮನರೇಗಾ ವನ್ನು ವಿಸ್ತರಿಸಬೇಕು.ಶಿಶು ಅರೈಕೆ ಸೌಲಭ್ಯಗಳನ್ನು ಮನರೇಗಾ ಕೆಲಸದ ಸ್ಥಳಗಳಲ್ಲಿ ಒದಗಿಸಬೇಕು.
6. ಮೇವು, ಬಿದಿರಿನಂತಹ ಅರಣ್ಯ ಉತ್ಪನ್ನಗಳು, ಮೀನು, ಕೋಳಿ ಮತ್ತು ಇತರ ಸಾಕಾಣಿಕೆ ಉತ್ಪನ್ನಗಳ ಕನಿಷ್ಠ ಬೆಂಬಲ ಬೆಲೆ ನಿರ್ಧರಿಸಲು ಹಾಗೂ ನಿರ್ವಹಿಸಲು ಬೆಲೆ ಆಯೋಗ ಮತ್ತು ಬೆಲೆ ಸ್ಥಿರಿಕರಣ ನಿಧಿ ಸ್ಥಾಪಿಸಬೇಕು.
7. ಮಹಿಳಾ ಸ್ವ ಸಹಾಯ ಗುಂಪುಗಳು ಮತ್ತು ಬೀಜ ಬ್ಯಾಂಕ್ ಗಳ ಮೂಲಕ ಬೀಜ ಹಾಗೂ ಬೆಳೆ ತಳಿಗಳ ಸಂರಕ್ಷಣೆ ಗೆ ಉತ್ತೇಜನ ಮತ್ತು ಬೆಂಬಲ ನೀಡಬೇಕು.
8. ಗ್ರಾಮೀಣ ಪ್ರದೇಶದಲ್ಲಿ ಮನೆ ಬಳಕೆಗೆ ಹೊರತಾದ ಹಾಗೂ ಕೃಷಿ ಯೇತರ (ಕೃಷಿ ಸಂಬಂಧಿತ ಚಟುವಟಿಕೆಗಳು ಸೇರಿದಂತೆ) ಚಟುವಟಿಕೆಗಳಿಗೆ ನೀರು ಹಂಚಿಕೆ ಮಾಡುವಾಗ ಸ್ಥಳೀಯ ಮಹಿಳಾ ಬಳಕೆದಾರರ ಸ್ಪಷ್ಟ ಹಾಗೂ ಪೂರ್ವ ಒಪ್ಪಿಗೆಯನ್ನು ಕಡ್ಡಾಯ ವಾಗಿ ಪಡೆಯತಕ್ಕದ್ದು.
9. ರೈತ ಆತ್ಮಹತ್ಯೆಯಿಂದಾದ ವಿಧವೆಯರಿಗೆ ಋಣ ಪರಿಹಾರ ಹಾಗೂ ಸಾಲ ಮನ್ನಾ ಸೌಲಭ್ಯ ಕಲ್ಪಿಸಬೇಕು.ಪರಿತ್ಯಕ್ತೆ, ತೊರೆಯಲ್ಪಟ್ಟ ಹಾಗೂ ಹೊರಹಾಕಲ್ಪಟ್ಟು ನಿರಾಶ್ರಿತ ರಾದ ಮಹಿಳೆಯರೇ ನಡೆಸುತ್ತಿರುವ ಕುಟಂಬಗಳು ಸಾಲದಿಂದ ಮುಕ್ತಿ ಹೊಂದಲು ವಿಶೇಷ ನೆರವು ಒದಗಿಸುವುದು.

ಈ ನಿಬಂಧ'ನೆಗಳು ಕಾರ್ಯರೂಪಕ್ಕೆ ಬರಬೇಕಾದರೆ ಮೂರು ಕೃಷಿ ವಿರೋಧಿ ಕಾಯ್ದೆಗಳು ರದ್ದಾಗಲೇಬೇಕು, ಲಾಭದಾಯಕ ಕನಿಷ್ಠ ಬೆಂಬಲ ಬೆಲೆ (MSP) ಖಾತರಿ ಪಡಿಸುವ ಕಾನೂನನ್ನು ಅಂಗೀಕರಿಸಬೇಕು ಮತ್ತು ಗಮನಾರ್ಹ ರೀತಿಯಲ್ಲಿ ಮಹಿಳಾ ರೈತರು ಹಾಗೂ ಕೃಷಿ ಕೂಲಿಕಾರರ ಕುರಿತ ಸರ್ಕಾರದ ಮನೋಭಾವ ಬದಲಾಗಬೇಕು ಎಂದು ಈ ಮೂರು ಸಂಘಟನೆಗಳ ಮುಖಂಡರು ಹೇಳಿದರು.

ಐಟಿ ನಿಯಮಗಳು, 2021 ಕ್ಕೆ ವ್ಯಾಪಕ ವಿರೋಧ

ಪುಟ 2 ರಿಂದ

ಪ್ರಕಟಣೆಯ ಹಿತದೃಷ್ಟಿಯಿಂದಷ್ಟೇ ಅಲ್ಲ, ಒಟ್ಟು ಸಾರ್ವಜನಿಕರ ಹಿತದೃಷ್ಟಿಯಿಂದ ಸುದ್ದಿಗಳು ಮತ್ತು ವಿಚಾರಗಳನ್ನು ಸಾಧ್ಯವಾದಷ್ಟು ವ್ಯಾಪಕವಾಗಿ ಹರಡಿಸಲು ಲಿಖಿತ ಮಾಧ್ಯಮವನ್ನು ಎಲ್ಲಾ ಕಾರ್ಯಾಂಗದ ಹಸ್ತಕ್ಷೇಪಗಳಿಂದ ದೂರವಿಡಬೇಕು ಎಂಬ ವಿಚಾರ ಇರುವುದನ್ನು ಡಿಜಿಪಬ್ ಒತ್ತಿ ಹೇಳಿದೆ.

ಕಳೆದ ವರ್ಷ ನವೆಂಬರ್‌ನಲ್ಲಿ ಡಿಜಿಪಬ್ ಎಲ್ಲ ಭಾಗೀದಾರರೊಂದಿಗೆ ವಿವರವಾದ ಸಮಾಲೋಚನೆ ನಡೆಸುವಂತೆ" ಸರ್ಕಾರವನ್ನು ಒತ್ತಾಯಿಸಿತ್ತು. "ಸಾಂಕ್ರಾಮಿಕದ ಮಧ್ಯೆ ಭಾರತದಲ್ಲಿ ಮತ್ತು ಪ್ರಪಂಚದಾದ್ಯಂತ ಆರ್ಥಿಕ ವ್ಯವಸ್ಥೆಗಳು, ಹೂಡಿಕೆಗಳು ಮತ್ತು ಉದ್ಯೋಗಗಳು ಕುಂಠಿತ ಗೊಳ್ಳುತ್ತಿರುವಾಗ, ಸರ್ಕಾರದ ಇಂತಹ ನಡೆಗಳು ಒಳ್ಳೆಯದಕ್ಕಿಂತ ಹಾನಿ ಮಾಡುವ ಹಾನಿ ಮಾಡುವ ಸಂಭವವೇ ಹೆಚ್ಚಿದೆ. ನಿರ್ಬಂಧಿಸುವ ಧೋರಣೆಗಳು ಉದ್ಯೋಗ ನಷ್ಟ ಸೇರಿದಂತೆ ಗಂಭೀರ ಪರಿಣಾಮಗಳನ್ನು ಉಂಟುಮಾಡಬಹುದು "ಎಂದು ಡಿಜಿಪಬ್ ಸರಕಾರಕ್ಕೆ ಬರೆದಿರುವ ಈ ಪತ್ರ ಹೇಳಿದೆ.

ಎನ್.ಎ.ಜೆ. ಮತ್ತು ಡಿ.ಯು.ಜೆ. ಆಗ್ರಹ

ಪತ್ರಕರ್ತರ ರಾಷ್ಟ್ರೀಯ ಮೈತ್ರಿಕುಟ(ಎನ್.ಎ.ಜೆಎ.) ಮತ್ತು ದಿಲ್ಲಿ ಪತ್ರಕರ್ತರ ಸಮಗ (ಡಿಯುಜೆ) ಕೂಡ ಕೇಂದ್ರ ಸರಕಾರ ಡಿಜಿಟಲ್ ಮಾಧ್ಯಮದ ಮೇಲೆ ಕಣ್ಣಿಡಲು ತರಾತುರಿಯಿಂದ ಈ ನಿಯಮಗಳನ್ನು ರೂಪಿಸಿದೆ, ಇವನ್ನು ರದ್ದು ಮಾಡಬೇಕು ಎಂದು ಆಗ್ರಹಿಸಿವೆ. ಈಗಾಗಲೇ ಈ ನಿಯಮಗಳ ಮೇಲೆ ತಮ್ಮ ಫೇಸ್‌ಬುಕ್‌ನಲ್ಲಿ ಚರ್ಚೆಏರ್ಪಡಿಸಿದ ಮಣಿಪುರದ ಪತ್ರಕರ್ತರಿಗೆ ನೋಟಿಸು ಕಳಿಸಿರುವುದು ಈ ನಿಯಮಗಳು ಒಡ್ಡಿರುವ ಅಪಯದ ಮುನ್ಸೂಚನೆ ನೀಡಿದೆ ಎಂದು ಅವು ಹೇಳಿವೆ.

ಕಾರ್ಮಿಕ ಆಂದೋಲನದಲ್ಲಿ ಮಾರ್ಕ್ಸ್‌ವಾದಿ ಚಿಂತನೆಯ ಆರಂಭ



ಕಾಂಗ್ರೆಸಿನ ನಾಯಕತ್ವವು ಜನಸಾಮಾನ್ಯರ ಹೆಚ್ಚುತ್ತಿದ್ದ ಸಾಮ್ರಾಜ್ಯಶಾಹಿ-ವಿರೋಧಿ ಭಾವನೆಯಿಂದ ದಿಗ್ಭ್ರಮೆಗೊಳಗಾಗಿ ಅದನ್ನು ನಿಯಂತ್ರಿಸಲು ಪ್ರಯತ್ನಿಸುತ್ತಿದ್ದ ಕ್ಷಣದಲ್ಲಿ, 1921 ರ ಡಿಸೆಂಬರ್ 1 ರಂದು ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಅಹಮದಾಬಾದ್ ಅಧಿವೇಶನದ ಪ್ರತಿನಿಧಿಗಳನ್ನು ಉದ್ದೇಶಿಸಿ ಆಗಷ್ಟೇ ತಾಷ್ಕೆಂಟಿನಲ್ಲಿ ಸ್ಥಾಪನೆಗೊಂಡಿದ್ದ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿತು. ಈ ಪ್ರಣಾಳಿಕೆಯು ಭಾರತದ ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟದಲ್ಲಿ ಹೊಸ ಆಲೋಚನಾ ಕ್ರಮವನ್ನು ರೂಪಿಸಿತು, ಕಾರ್ಮಿಕ-ರೈತರ ಸಾಮೂಹಿಕ ಹೋರಾಟದ ಮಹತ್ವವನ್ನು ಸರಿಯಾದ ದೃಷ್ಟಿಕೋನದಲ್ಲಿ ಮಂಡಿಸಿ ಜನರ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ವಿಮೋಚನೆಯ ಪ್ರಶ್ನೆಯನ್ನು ಮೊದಲ ಬಾರಿಗೆ ಮುನ್ನೆಲೆಗೆ ತಂದಿತು. ಇದರೊಂದಿಗೆ ಅಂತರ್‍ರಾಷ್ಟ್ರೀಯ ಕಾರ್ಮಿಕ ರಂಗದಲ್ಲಿನ ಬೆಳವಣಿಗೆಗಳಿಂದಾಗಿ ಭಾರತದ ಕಾರ್ಮಿಕ ಚಳುವಳಿಯಲ್ಲಿ ಸ್ಪಷ್ಟ ವರ್ಗಚಿಂತನೆ ಗೋಚರಿಸಲಾರಂಭಿಸಿತು.

ಮೂಲ ಲೇಖಕರು: **ಸುಕೋಮಲ್ ಸೇನ್** ಸಂಗ್ರಹ-ಅನುವಾದ: ಸಿ.ಆರ್.ಶಾನಭಾಗ

1921 ರ ಡಿಸೆಂಬರ್‌ನಲ್ಲಿ ನಡೆದ ಭಾರತ ರಾಷ್ಟ್ರೀಯ ಕಾಂಗ್ರೆಸಿನ ಅಹಮದಾಬಾದ್ ಅಧಿವೇಶನ ರಾಷ್ಟ್ರೀಯ ವಿಮೋಚನಾ ಆಂದೋಲನದ ಮೇಲೆ ಬೂರ್ಜ್ವಾ ನಾಯಕತ್ವವನ್ನು ದೃಡವಾಗಿ ಸ್ಥಾಪಿಸಲು ಪ್ರಯತ್ನಿಸಿತು. ಮತ್ತು ಯಾವುದೇ ಕ್ರಿಯಾ ಯೋಜನೆ ರೂಪಿಸದಿರಲು ತೀರ್ಮಾನಿಸಿ ದೇಶಾದ್ಯಂತ ಹೋರಾಟಕ್ಕೆ ಚಡಪಡಿಸುತ್ತಿದ್ದ ಜನರ ಆಶಯಗಳನ್ನು ಹುಸಿಗೊಳಿಸಿತು.

ಆದರೆ ಈ ಸಮಯದಲ್ಲಿ ಮೊದಲ ಮಾರ್ಕ್ಸ್‌ವಾದಿ ಗುಂಪುಗಳು ಭಾರತದಲ್ಲಿ ಕಾಣಿಸಿಕೊಳ್ಳಲು ಪ್ರಾರಂಭಿಸಿದವು ಮತ್ತು ಅತ್ಯಂತ ಸೀಮಿತ ವ್ಯಾಪ್ತಿಯಲ್ಲಿದ್ದರೂ, ಮಾರ್ಕ್ಸ್‌ವಾದಿ ಜಾಗತಿಕ ದೃಷ್ಟಿಕೋನವು ಭಾರತದ ರಾಜಕೀಯ ಮತ್ತು ಟ್ರೇಡ್ ಯೂನಿಯನ್ ಆಂದೋಲನದಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳಲು ಪ್ರಾರಂಭಿಸಿತು.

ಏತನ್ಮಧ್ಯೆ, ಭಾರತದ ವಲಸಿಗ ಕಮ್ಯುನಿಸ್ಟ್ ಪಕ್ಷವನ್ನು 1920 ರ ಅಕ್ಟೋಬರ್ 17 ರಂದು ಸೋವಿಯತ್ ಒಕ್ಕೂಟದ ತಾಷ್ಕೆಂಟ್‌ನಲ್ಲಿ ಸ್ಥಾಪಿಸಲಾಯಿತು ಮತ್ತು 1921 ರಲ್ಲಿ ಅದು ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್‌ನಿಂದ ಮಾನ್ಯತೆ ಪಡೆಯಿತು. ಭಾರತದ ಒಳಗೆ ಸಣ್ಣಸಂಖ್ಯೆಯಲ್ಲಿದ್ದರೂ ಯುವ ಕಮ್ಯುನಿಸ್ಟರು ತಮ್ಮ ಬರಹಗಳ ಮತ್ತು ಭಾಷಣಗಳ ಮೂಲಕ ಸಮಾಜವಾದಿ ವಿಚಾರಗಳ ಪ್ರಚಾರಕ್ಕೆ ತಮ್ಮನ್ನು ತಾವು ತೊಡಗಿಸಿಕೊಂಡರು.

ಕಾಂಗ್ರೆಸಿನ ಬೂರ್ಜ್ವಾ ನಾಯಕತ್ವವು ಜನಸಾಮಾನ್ಯರ ಹೆಚ್ಚುತ್ತಿದ್ದ ಸಾಮ್ರಾಜ್ಯಶಾಹಿ-ವಿರೋಧಿ ಭಾವನೆಯಿಂದ ದಿಗ್ಭ್ರಮೆಗೊಳಗಾಗಿ ಮತ್ತು ಅದನ್ನು ನಿಯಂತ್ರಿಸಲು ಪ್ರಯತ್ನಿಸುತ್ತಿದ್ದ ಕ್ಷಣದಲ್ಲಿ, 1921 ರ ಡಿಸೆಂಬರ್ 1 ರಂದು ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಅಹಮದಾಬಾದ್ ಅಧಿವೇಶನದ ಪ್ರತಿನಿಧಿಗಳನ್ನು ಉದ್ದೇಶಿಸಿ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿತು. ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾದ ಈ ಪ್ರಣಾಳಿಕೆಯು ಭಾರತದ ನಿರ್ದಿಷ್ಟ ಪರಿಸ್ಥಿತಿಗಳಲ್ಲಿ ಬೂರ್ಜ್ವಾ-ಸುಧಾರಣಾವಾದಿ ಚಿಂತನೆಯ ಮಾರ್ಗಕ್ಕೆ ಮಾರ್ಕ್ಸ್‌ವಾದಿ ಪರ್ಯಾಯವನ್ನು ನಿರೂಪಿಸಿತು.. ಹೊಸದಾಗಿ ಸ್ಥಾಪನೆಯಾದ ಪಾರ್ಟಿಯು ಈ ಮೊದಲ ಪ್ರಕಟಿತ ಪ್ರಣಾಳಿಕೆ ಕಾರ್ಮಿಕ-ರೈತ ಜಾಗೃತಿ ಮತ್ತು ಅವರ ಹೋರಾಟದ ಅಪಾರ ಮಹತ್ವವನ್ನು ತಿಳಿಸಿತು.

"......ರಾಷ್ಟ್ರೀಯ ಚಳವಳಿ ಯಶಸ್ಸನ್ನು ಸಾಧಿಸಬೇಕಾದರೆ ನಗರಗಳ ದುಡಿಯುವ ಜನರು, ಹಳ್ಳಿಗಳಲ್ಲಿನ ಲಕ್ಷಾಂತರ ಜನರನ್ನು ಚಳವಳಿಯೊಳಗೆ ತರಬೇಕು. ...... ಶ್ರೀಮಂತ ಭಾರತೀಯರ ಒಡೆತನದ ಗಿರಣಿಗಳು ಮತ್ತು ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಲಕ್ಷಾಂತರ ಕಾರ್ಮಿಕರು, ಅವರಲ್ಲಿ ಅನೇಕರು ರಾಷ್ಟ್ರೀಯ ಚಳವಳಿಯ ಕಾರ್ಯಕರ್ತರು, ಅಸಹನೀಯ ಸ್ಥಿತಿಯಲ್ಲಿ ವಾಸಿಸುತ್ತಿದ್ದಾರೆ ... ಬಡ ಕಾರ್ಮಿಕರು ಮತ್ತು ರೈತರು ಹಸಿವಿನಿಂದ ಬಳಲುತ್ತಿದ್ದಾರೆ. ಅವರನ್ನು ಹೋರಾಟಕ್ಕೆ ಕರೆದೊಯ್ಯಬೇಕಾದರೆ, ಆ ಹೋರಾಟ ಅವರ ವಸ್ತು ಸ್ಥಿತಿಯ ಸುಧಾರಣೆಗಾಗಿ ಇರಬೇಕು. ಬಹುಪಾಲು ಜನಸಮೂಹದ ಹಿತಾಸಕ್ತಿಗೆ ಅನುಗುಣವಾದ ಮತ್ತು ಅದರ ಪರಿಣಾಮವಾಗಿ ಪ್ರಜ್ಞಾಪೂರ್ವಕವಾಗಿ ಹೋರಾಡಲು ಉತ್ಸಾಹದಿಂದ ಅವರನ್ನು ಪ್ರಚೋದಿಸುವ ಘೋಷಣೆ, 'ಉಳುವವನಿಗೆ-ಭೂಮಿ, ಕಾರ್ಮಿಕನಿಗೆ-ಅನ್ನ' ("ಲ್ಯಾಂಡ್ ಟು ದಿ ಪೀಸೆಂಟ್ - ಬ್ರೆಡ್ ಟು ದಿ ವರ್ಕರ್")....

...ನಗರಗಳಲ್ಲಿನ ಕಾರ್ಮಿಕರು ಹೆಚ್ಚಿನ ವೇತನ, ಕಡಿಮೆ ಕೆಲಸದ- ಸಮಯ, ಉತ್ತಮ ಜೀವನ ಪರಿಸ್ಥಿತಿಗಳನ್ನು ಬಯಸುತ್ತಾರೆ: ಮತ್ತು ಬಡ ರೈತರು ಭೂಮಿಯ ಒಡೆತನಕ್ಕಾಗಿ, ಅತಿಯಾದ ಗೇಣಿ ಮತ್ತು ತೆರಿಗೆಗಳಿಂದ ಸ್ವಾತಂತ್ರ್ಯ ಮತ್ತು ಭೂಮಾಲೀಕರ ಅತಿಯಾದ ಶೋಷಣೆಯಿಂದ ಮುಕ್ತಿ ಪಡೆಯಲು ಹೋರಾಡುತ್ತಾರೆ, ಅವರು ಸಾಮಾಜಿಕ ಮತ್ತು ಆರ್ಥಿಕ ಶೋಷಣೆಯ ವಿರುದ್ಧ ದಂಗೆ ಏಳುತ್ತಾರೆ; ಶೋಷಕನು ಯಾವ ರಾಷ್ಟ್ರೀಯತೆಗೆ ಸೇರಿದವನು ಎಂಬುದು ಅವರಿಗೆ ಯಾವುದೇ ವ್ಯತ್ಯಾಸವನ್ನುಂಟು ಮಾಡುವುದಿಲ್ಲ. ...."

ಈ ಪ್ರಣಾಳಿಕೆಯ ಮೂಲಕ ಕಮ್ಯುನಿಸ್ಟ್ ಪಕ್ಷವು ಭಾರತದ ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟದಲ್ಲಿ ಹೊಸ ಆಲೋಚನಾ ಕ್ರಮವನ್ನು ರೂಪಿಸಿತು, ಕಾರ್ಮಿಕ-ರೈತರ ಸಾಮೂಹಿಕ ಹೋರಾಟದ ಮಹತ್ವವನ್ನು ಸರಿಯಾದ ದೃಷ್ಟಿಕೋನದಲ್ಲಿ ಮಂಡಿಸಿದ್ದು ಮತ್ತು ಜನರ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ವಿಮೋಚನೆಯ ಪ್ರಶ್ನೆಯನ್ನು ಮೊದಲ ಬಾರಿಗೆ ಮುನ್ನೆಲೆಗೆ ತಂದ ಪ್ರಯತ್ನವಿದು. ಆದರೆ ಬೂರ್ಜ್ವಾಗಳ ನೇತೃತ್ವದಲ್ಲಿ ಮತ್ತು ಅವರ ಸಿದ್ಧಾಂತ ಸಂಪೂರ್ಣವಾಗಿ ಆವರಿಸಿದ್ದ ರಾಷ್ಟ್ರೀಯ ಕಾಂಗ್ರೆಸ್ ಈ ಪ್ರಣಾಳಿಕೆಯ ಹೊಸ ರಾಜಕೀಯ ಚಿಂತನೆಯತ್ತ ಸ್ವಲ್ಪ ಮಟ್ಟಿಗೂ ಚಲಿಸಲು ಸಾಧ್ಯವಾಗಲಿಲ್ಲ. ಆದರೆ ನಂತರದ ಅವಧಿಯಲ್ಲಿ ಈ ಸಾಮಾಜಿಕ ಮತ್ತು ರಾಜಕೀಯ ಸಿದ್ಧಾಂತ ಕಾಂಗ್ರೆಸ್ಸಿನ ಹೊರಗೆ ಅಭಿವ್ಯಕ್ತಿಯನ್ನು ಪಡೆದುಕೊಂಡು ಮುಂದೆ ಸಾಗಿತು.

ಏತನ್ಮಧ್ಯೆ, ಬಾರ್ಡೋಲಿ ನಿರ್ಧಾರ ಮತ್ತು ಅಹಮದಾಬಾದ್ ಅಧಿವೇಶನದ ಅಸಮರ್ಥತೆಯು ಅನಿವಾರ್ಯವಾಗಿ ದೇಶದ ರಾಷ್ಟ್ರೀಯ ರಾಜಕೀಯ ಚಳವಳಿಯಲ್ಲಿ ಇಳಿತಕ್ಕೆ ಕಾರಣವಾಯಿತು. ರಾಜಕೀಯ ವೇದಿಕೆಯಲ್ಲಿ ಎಲ್ಲರೂ ಸ್ಥಬ್ದವಾಗಿದ್ದರಿಂದ, ದೇಶದ ಕೆಲವು ಭಾಗಗಳಲ್ಲಿ ಕೋಮು ಗಲಭೆಗಳು ನಡೆದವು. ಮುಸ್ಲಿಂ ಲೀಗ್ ಕೂಡ ಕಾಂಗ್ರೆಸನ್ನು ತೊರೆದು ಪ್ರತ್ಯೇಕ ಅಸ್ತಿತ್ವದೊಂದಿಗೆ ಕಾಣಿಸಿಕೊಂಡಿತು.

ಆದರೆ ಇಳಿಯುತ್ತಿದ್ದ ಹೋರಾಟದ ಅಲೆಗಳನ್ನು ಗಮನಿಸಿದ ಮತ್ತು ಕಾಂಗ್ರೆಸ್ ಬೃಹತ್ ಸಾಮೂಹಿಕ-ಆಂದೋಲನದಿಂದ ದೂರವಾಗುತ್ತಿರುವುದು ಖಚಿತವಾದ ಕೂಡಲೇ, ಬ್ರಿಟಿಷ್ ಸರ್ಕಾರವು ದೇಶದ ಆಡಳಿತ ಮತ್ತು ಆರ್ಥಿಕತೆಯ ಮೇಲಿನ ತನ್ನ ಹಿಡಿತವನ್ನು ಇನ್ನಷ್ಟು ಬಿಗಿಗೊಳಿಸಲು ಪ್ರಯತ್ನಿಸಿತು. 1927 ರ ಕೊನೆಯಲ್ಲಿ, ಬ್ರಿಟಿಷ್ ಸರ್ಕಾರವು 'ಸೈಮನ್ ಆಯೋಗ'ದ ನೇಮಕವನ್ನು ಘೋಷಿಸಿತು, ಆದರೆ ಭಾರತದ ಜನರ ಒಬ್ಬ ಪ್ರತಿನಿಧಿಯನ್ನು ಸಹ ಈ ಆಯೋಗದಲ್ಲಿ ಸೇರಿಸಲಿಲ್ಲ.

ಆದರೆ, ಈಗ, ಹೊಸ ಶಕ್ತಿಗಳು ಕಾಣಿಸಿಕೊಳ್ಳಲು ಪ್ರಾರಂಭಿಸಿದವು ಮತ್ತು ಹೊಸ ಪ್ರಜ್ಞೆಯು ಜನರಲ್ಲಿ ಪ್ರಕಟಗೊಳ್ಳಲು ಪ್ರಾರಂಭಿಸಿತು. ವಿದೇಶಿ ಸಾಮ್ರಾಜ್ಯಶಾಹಿ ಮತ್ತು ಸ್ಥಳೀಯ ಶೋಷಣೆಯ ವಿರುದ್ಧ ಏಕಕಾಲದಲ್ಲಿ ಹೋರಾಟ ನಡೆಸುವ ಅವಶ್ಯಕತೆಯ ಅರಿವು ದೃಢವಾದ ಆಕಾರವನ್ನು ಪಡೆದುಕೊಳ್ಳಲು ಪ್ರಾರಂಭಿಸಿತು. ಬಂಗಾಳ, ಮುಂಬೈ, ಮದ್ರಾಸ್, ಲಾಹೋರ್ ಮತ್ತು ಇತರ ಸ್ಥಳಗಳಲ್ಲಿ ರೂಪುಗೊಂಡ ಸಣ್ಣ ಕಮ್ಯುನಿಸ್ಟ್ ಗುಂಪುಗಳು ತಮ್ಮ ನಡುವೆ ಸಂಪರ್ಕವನ್ನು ಸ್ಥಾಪಿಸಲು ಪ್ರಾರಂಭಿಸಿದವು ಮತ್ತು ಸಮಾಜವಾದವನ್ನು ಪ್ರಚಾರ ಮಾಡುವ ಒಂದು ವಿನಮ್ರ ಪ್ರಯತ್ನವನ್ನು ಪ್ರಾರಂಭಿಸಿದವು.

1922 ರಲ್ಲಿ ರಾಷ್ಟ್ರೀಯ ಕಾಂಗ್ರೆಸ್‌ನ ಗಯಾ ಅಧಿವೇಶನ ನಡೆಯಿತು. ಆದರೆ ಭಾರತದ ಸ್ಥಿತಿಯ ವಸ್ತುನಿಷ್ಠ ಅಧ್ಯಯನದ ಆಧಾರದ ಮೇಲೆ ಕಾಂಗ್ರೆಸ್ ಪೂರ್ಣ ಪ್ರಮಾಣದ ಕಾರ್ಯಕ್ರಮವನ್ನು ರೂಪಿಸಲಿಲ್ಲ, ಅಥವಾ ಸಂಪೂರ್ಣ ರಾಷ್ಟ್ರೀಯ ಸ್ವಾತಂತ್ರ್ಯದ ಬೇಡಿಕೆಯನ್ನು ಎತ್ತಲಿಲ್ಲ. ಆರಂಭದಲ್ಲಿ ವಸಾಹತು ಆಳ್ವಿಕೆಯ ಅಡಿಯಲ್ಲಿ ಸ್ವಯಮಾಧಿಕಾರ, ನಂತರ 'ಸ್ವರಾಜ್ಯ' ಬೇಡಿಕೆಯಾಗಿ ಸುಧಾರಣೆ ಕಂಡಿತು, ಸ್ವರಾಜ್ಯ ಕುರಿತ ಅದರ ಸೂಚನೆಯೂ ಸ್ಪಷ್ಟವಾಗಿರಲಿಲ್ಲ. ಈ ಸಮಯದಲ್ಲಿ, ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ ಕಾಂಗ್ರೆಸ್ ಅಧಿವೇಶನಕ್ಕೆ ಮುಂಚಿತವಾಗಿ ಒಂದು ಕಾರ್ಯಕ್ರಮವನ್ನು ಕಳುಹಿಸಿ ಸಂಪೂರ್ಣ ರಾಷ್ಟ್ರೀಯ ಸ್ವಾತಂತ್ರ್ಯದ ನಿಸ್ಸಂದಿಗ್ಧವಾದ ಉದ್ದೇಶವನ್ನು ಒತ್ತಿಹೇಳಿತು.

ಈ 'ರಾಷ್ಟ್ರೀಯ ವಿಮೋಚನೆ ಮತ್ತು ಪುನರ್ನಿರ್ಮಾಣದ ಕಾರ್ಯಕ್ರಮ'ದ ಬೇಡಿಕೆಗಳು:

1. ಎಲ್ಲಾ ಸಾಮ್ರಾಜ್ಯಶಾಹಿ ಸಂಪರ್ಕದಿಂದ ಬೇರ್ಪಟ್ಟ ಮತ್ತು ಎಲ್ಲಾ ವಿದೇಶಿ ಮೇಲ್ವಿಚಾರಣೆಯಿಂದ ಮುಕ್ತವಾದ, ಸಂಪೂರ್ಣ ರಾಷ್ಟ್ರೀಯ ಸ್ವಾತಂತ್ರ್ಯ.
2. ವಯಸ್ಕ ಮತದಾನದ ಹಕ್ಕಿನೊಂದಿಗೆ ರಾಷ್ಟ್ರೀಯ ಅಸೆಂಬ್ಲಿಯ ಚುನಾವಣೆ. ಜನರ ಸಾರ್ವಭೌಮತ್ವವನ್ನು ರಾಷ್ಟ್ರೀಯ ಅಸೆಂಬ್ಲಿಗೆ ವಹಿಸಲಾಗುವುದು, ಅದು ಸರ್ವೋಚ್ಚ ಅಧಿಕಾರವನ್ನು ಹೊಂದಿರುತ್ತದೆ.
3. ಭಾರತ ಗಣತಂತ್ರ ಒಕ್ಕೂಟದ ಸ್ಥಾಪನೆ.

ಸಾಮಾಜಿಕ ಮತ್ತು ಆರ್ಥಿಕ ಕಾರ್ಯಕ್ರಮದಲ್ಲಿ ಭೂಮಾಲೀಕತ್ವ ವನ್ನು ನಿರ್ಮೂಲನೆ ಮಾಡುವುದು, ಕೃಷಿಯಲ್ಲಿ ಆಧುನಿಕ ವಿಧಾನಗಳ ಪರಿಚಯ ಮತ್ತು ಪ್ರಭುತ್ವದ ನೆರವಿನೊಂದಿಗೆ ಆಧುನಿಕ ಕೈಗಾರಿಕೆಗಳ ಅಭಿವೃದ್ಧಿ, ಎಂಟು ಗಂಟೆಗಳ ಕೆಲಸದ ದಿನ, ಎಲ್ಲಾ ಕೈಗಾರಿಕೆಗಳಲ್ಲಿ ಕನಿಷ್ಟ ವೇತನವನ್ನು ಶಾಸನಬದ್ಧವಾಗಿ ನಿಗದಿಪಡಿಸುವುದು, ಕಾರ್ಮಿಕರ ಸಂಘಟನೆಗೆ ಶಾಸನಬದ್ಧ ಸ್ಥಾನಮಾನವನ್ನು ನೀಡುವುದು, ಮತ್ತು ಕಾರ್ಮಿಕರು ಮತ್ತು ರೈತರಿಗೆ ಹಲವಾರು ಪ್ರಗತಿಪರ ಕ್ರಮಗಳು, ಮಹಿಳೆಯರಿಗೆ ಸಂಪೂರ್ಣ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಹಕ್ಕುಗಳು, ಜಾತ್ಯತೀತತೆ, ಸ್ಥಾಯಿ ಸೈನ್ಯವನ್ನು ರದ್ದು ಮಾಡುವುದು ಮತ್ತು ರಾಷ್ಟ್ರೀಯ ಸ್ವಾತಂತ್ರ್ಯದ ರಕ್ಷಣೆಗಾಗಿ ಇಡೀ ಜನಸಮುದಾಯವನ್ನು ಶಸ್ತ್ರಸಜ್ಜಿತಗೊಳಿಸುವುದು ಸೇರಿದಂತೆ ಕಾರ್ಮಿಕರ ಮುಷ್ಕರದ ಹಕ್ಕನ್ನು ಮಾನ್ಯಮಾಡುವುದು.


ನಳಿನಿಭೂಷಣ್ ದಾಸ್‌ಗುಪ್ತಾ, ಶೌಕತ್ ಉಸ್ಮಾನಿ, ಎಸ್.ಎ. ಡಾಂಗೆ ಮತ್ತು ಮುಜಾಫರ್ ಅಹ್ಮದ್

ಈ ಕಾರ್ಯಕ್ರಮವನ್ನು ವಾಸ್ತವಕ್ಕೆ ತರುವ ದೃಷ್ಟಿಯಿಂದ, ಕಾರ್ಯಾಚರಣೆಯ ಕಾರ್ಯಕ್ರಮವನ್ನು (ಆಕ್ಷನ್ ಪ್ರೋಗ್ರಾಂ) ಸಹ ಘೋಷಿಸಲಾಯಿತು,

ಗಯಾ ಕಾಂಗ್ರೆಸಿನ ಚುಕ್ಕಾಣಿ ಹಿಡಿದಿದ್ದ ವ್ಯಕ್ತಿಗಳು, ಪ್ರತಿನಿಧಿಗಳ ಪರಿಗಣನೆಗೆ ಈ ಕಾರ್ಯಕ್ರಮವನ್ನು ಸಲ್ಲಿಸಲಿಲ್ಲ. ಆದರೆ ಕಾರ್ಯಕ್ರಮವು ಸಾಕಷ್ಟು ವ್ಯಾಪಕ ಪ್ರಸಾರವನ್ನು ಪಡೆಯಿತು. ರಾಯಿಟರ್ ಇಡೀ ಕಾರ್ಯಕ್ರಮವನ್ನು ಟೆಲಿಗ್ರಾಂ ಮೂಲಕ ಬಿತ್ತರಿಸಿತು. ಅಮೃತ ಬಜಾರ್ ಪತ್ರಿಕಾ ಮತ್ತು ಇತರ ಪತ್ರಿಕೆಗಳು ಸಹ ಇದನ್ನು ಪ್ರಕಟಿಸಿದವು. ಐತಿಹಾಸಿಕವಾಗಿ ಗಯಾ ಅಧಿವೇಶನಕ್ಕೆ ಕಳುಹಿಸಿದ ಕಾರ್ಯಕ್ರಮವು ಭಾರತದ ಕಮ್ಯುನಿಸ್ಟ್ ಪಕ್ಷದ ಮೊದಲ ಕಾರ್ಯಕ್ರಮ ಎಂದು ನೆನಪಿನಲ್ಲಿಡಬೇಕು. ಈ ಕಾರ್ಯಕ್ರಮವು ಭಾರತದ ರಾಜಕೀಯದಲ್ಲಿ ವಿಶಿಷ್ಟವಾಗಿತ್ತು. ಮೊದಲಬಾರಿಗೆ ಈ ಮಾದರಿಯಲ್ಲಿ ಜನರ ಬೇಡಿಕೆಗಳನ್ನು ಮುಂದಿಡಲಾಯಿತು.

ಅಂತರರಾಷ್ಟ್ರೀಯ ಘಟನೆಗಳು

1922 ರ ನವೆಂಬರ್ 5 ರಿಂದ ಡಿಸೆಂಬರ್ 5 ರವರೆಗೆ ಮಾಸ್ಕೋದಲ್ಲಿ ಸೇರಿದ್ದ ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್‌ನ ನಾಲ್ಕನೇ ಅಧಿವೇಶನ ರಾಷ್ಟ್ರೀಯ ಕಾಂಗ್ರೆಸ್‌ನ ಗಯಾ ಅಧಿವೇಶನಕ್ಕೆ ಸಂದೇಶವನ್ನು ರವಾನಿಸಿ,. 'ಬ್ರಿಟಿಷ್ ಪ್ರಾಬಲ್ಯದಿಂದ ತಮ್ಮನ್ನು ಮುಕ್ತಗೊಳಿಸಲು' ನಡೆಯುತ್ತಿರುವ ಭಾರತದ ಜನರ ಐತಿಹಾಸಿಕ ಹೋರಾಟಕ್ಕೆ 'ಗ್ರೇಟ್ ಬ್ರಿಟನ್ ಸೇರಿದಂತೆ ಸಾಮ್ರಾಜ್ಯಶಾಹಿ ರಾಷ್ಟ್ರಗಳ ಕ್ರಾಂತಿಕಾರಿ ಶ್ರಮಜೀವಿ ಜನಸಮೂಹದ ಸಂಪೂರ್ಣ ಸಹಾನುಭೂತಿ ಮತ್ತು ಬೆಂಬಲವನ್ನು ವ್ಯಕ್ತಪಡಿಸಿತು,

ದೇಶದಲ್ಲಿ ಮತ್ತು ವಿದೇಶಗಳಲ್ಲಿ, ಭಾರತದ ಕಮ್ಯುನಿಸ್ಟರ ಚಟುವಟಿಕೆಗಳು ಮತ್ತು ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್‌ನೊಂದಿಗಿನ ಅವರ ಸಂಪರ್ಕವು ಬ್ರಿಟಿಷ್ ಸಾಮ್ರಾಜ್ಯಶಾಹಿಗಳಿಗೆ ತೀವ್ರ ಕಳವಳವನ್ನು ಉಂಟುಮಾಡಿತು. ಕಾರ್ಮಿಕರಲ್ಲಿ ಜಾಗೃತಿ ಮತ್ತು ಅವರ ಸಮರಶೀಲ ಆರ್ಥಿಕ ಹೋರಾಟಗಳು ಸಾಮ್ರಾಜ್ಯಶಾಹಿ ಸರ್ಕಾರವನ್ನು ಬಹಳವಾಗಿ ಎಚ್ಚರಿಸಿದವು. ಆದ್ದರಿಂದ ಅದನ್ನು ಮೊಗ್ಗಿನಲ್ಲೇ ಹಿಸುಕಿ ಹಾಕುವ ಪ್ರಯತ್ನದೊಂದಿಗೆ . 1924 ರಲ್ಲಿ ಸರ್ಕಾರವು ಮುಜಾಫರ್ ಅಹ್ಮದ್, ಎಸ್.ಎ.ಡಾಂಗೆ, ಶೌಕತ್ ಉಸ್ಮಾನಿ ಮತ್ತು ನಳಿನಿಭೂಷಣ್ ದಾಸ್‌ಗುಪ್ತಾ ಅವರನ್ನು ಭಾರತದಲ್ಲಿ ಬೋಲ್ಶೆವಿಸಂ ಅನ್ನು ಪ್ರಚಾರ ಮಾಡಿದ ಆರೋಪದಲ್ಲಿ ಜೈಲಿಗೆ ತಳ್ಳಿತು ಮತ್ತು. 'ಕಾನ್ಪುರ ಕಮ್ಯುನಿಸ್ಟ್ ಪಿತೂರಿ ಪ್ರಕರಣ, 1924' ಎಂದು ಗುರುತಿಸಲಾದ ಈ ವಿಚಾರಣೆಯಲ್ಲಿ, ಕಮ್ಯುನಿಸ್ಟ್ ಚಟುವಟಿಕೆಗಳನ್ನು ನಡೆಸುವುದು ಮತ್ತು ಭಾರತದಲ್ಲಿ ಕಮ್ಯುನಿಸ್ಟ್ ವಿಚಾರಗಳನ್ನು ಪ್ರಚಾರ ಮಾಡುವುದು, ಕಾರ್ಮಿಕರು ಮತ್ತು ರೈತರನ್ನು ಸಂಘಟಿಸುವುದು ಮತ್ತು ಇತರ ರೀತಿಯ ಆರೋಪಗಳನ್ನು ಕೈದಿಗಳ ವಿರುದ್ಧ ಹೊರಿಸಲಾಯಿತು. ಗಯಾ ಅಧಿವೇಶನಕ್ಕೆ ಕಮ್ಯುನಿಸ್ಟ್ ಪಕ್ಷ ಕಳುಹಿಸಿದ ಕಾರ್ಯಕ್ರಮವನ್ನು ಅವರ ವಿರುದ್ಧದ ಆರೋಪಗಳ ಆಧಾರವಾಗಿ ಸರ್ಕಾರ ಉಲ್ಲೇಖಿಸಿತು. ವಿಚಾರಣೆಯ ಸಮಯದಲ್ಲಿ ನಾಲ್ವರೂ 'ತಪ್ಪಿತಸ್ಥರು' ಎಂದು ಘೋಷಿಸಲ್ಪಟ್ಟರು, ಅವರಿಗೆ ತಲಾ ನಾಲ್ಕು ವರ್ಷಗಳ ಜೈಲು ಶಿಕ್ಷೆಯನ್ನು ವಿಧಿಸಲಾಯಿತು.

ಈ ಪ್ರಯೋಗವು ಭಾರತದ ಕಾರ್ಮಿಕ-ವರ್ಗದ ರಾಜಕೀಯ ಆಂದೋಲನವನ್ನು ಭ್ರೂಣದಲ್ಲಿಯೇ ನಾಶಮಾಡಲು ಸಾಮ್ರಾಜ್ಯಶಾಹಿ ಸರ್ಕಾರದ ಕಡೆಯಿಂದ ಮಾಡಿದ ಒಂದು ಬಹಿರಂಗ ಪ್ರಯತ್ನವಾಗಿತ್ತು. ಆದರೆ ವ್ಯತಿರಿಕ್ತವಾಗಿ ಇದು ಕಾರ್ಮಿಕ-ವರ್ಗದ

ಪುಟ 14 ನೋಡಿ

ಅತ್ಯಾಚಾರ ಕುರಿತ ಮುಖ್ಯ ನ್ಯಾಯಾಧೀಶರ ಟಿಪ್ಪಣಿಗಳಿಗೆ ವ್ಯಾಪಕ ಟೀಕೆ

ಈ ಟಿಪ್ಪಣಿಗಳನ್ನು, ಆದೇಶಗಳನ್ನು ಹಿಂತೆಗೆದುಕೊಳ್ಳಬೇಕು – ಸಿ.ಜೆ.ಐ.ಗೆ ಬೃಂದಾ ಕಾರಟ್ ಪತ್ರ

ಕ್ಷೋಭೆ ಉಂಟುಮಾಡುವಂತದ್ದು–ಎಐಡಿಡಬ್ಲ್ಯುಎ; ಸಿ.ಜೆ.ಐ. ಕ್ಷಮೆ ಕೇಳಬೇಕು–ಪ್ರತಿಷ್ಠಿತ ನಾಗರಿಕರ ಆಗ್ರಹ



ಭಾರತದ ಮುಖ್ಯ ನ್ಯಾಯಾಧೀಶ(ಸಿಜೆಐ)ರು ಮಾರ್ಚ್ 1ರಂದು ಎರಡು ಮೊಕದ್ದಮೆಗಳಲ್ಲಿ ಹೇಳಿರುವ ಮಾತುಗಳು ದೇಶಾದ್ಯಂತ ಕಟುಟೀಕೆಗಳಿಗೆ ಒಳಗಾಗಿವೆ. * ಇವನ್ನು ಮತ್ತು ಈ ಮೂಲಕ ಪ್ರಕಟಿಸಿರುವ ನಿರ್ಧಾರಗಳನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು ಎಂದು ಮಹಿಳಾ ಆಂದೋಲನದ ಒಬ್ಬ ಹಿರಿಯ ಮುಖಂಡರೂ, ಸಿಪಿಐ(ಎಂ) ಪೊಲಿಟ್‌ಬ್ಯೂರೊ ಸದಸ್ಯರೂ ಆಗಿರುವ ಬೃಂದಾ ಕಾರಟ್ ಭಾರತದ ಮುಖ್ಯ ನ್ಯಾಯಾಧೀಶರಿಗೆ ಈ ಕುರಿತು ಪತ್ರ ಬರೆದು ಆಗ್ರಹಿಸಿದ್ದಾರೆ. ದೇಶದ ಸರ್ವೋಚ್ಚ ನ್ಯಾಯಾಲಯದ ಅಧಿಕಾರ ಮತ್ತು ಶಕ್ತಿಯನ್ನು ಲೈಂಗಿಕ ದಾಳಿಗೆ ಒಳಗಾಗಿರುವವರಿಗೆ ನೆರವಾಗಲು ಬಳಸಲಾಗುವುದೇ ಹೊರತು, ದಾಳಿಮಾಡಿದವರಿಗಲ್ಲ ಎಂದು ಮಹಿಳೆಯರು ಆಶಿಸುತ್ತಾರೆ ಎಂದು ಅವರು ದೇಶದ ಮುಖ್ಯ ನ್ಯಾಯಾಧೀಶರಿಗೆ ಹೇಳಿದ್ದಾರೆ. * ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ(ಎಐಡಿಡಬ್ಲ್ಯುಎ) ಸಿಜೆಐ ರವರ ಈ ಹೇಳಿಕೆಗಳು ಆಳವಾದ ಕ್ಷೋಭೆಯನ್ನು ಉಂಟುಮಾಡಿವೆ ಎನ್ನುತ್ತ ಭಾರತೀಯ ಅಪರಾಧಿಕ ನ್ಯಾಯ ವ್ಯವಸ್ಥೆಯ ಕೆಲವು ವಿಭಾಗಗಳಲ್ಲಿ ಇರುವ ಸಂಪ್ರದಾಯಶರಣ ಮತ್ತು ಪಿತೃಪ್ರಧಾನ ವ್ಯವಸ್ಥೆಯ ಭಾವನೆಗಳನ್ನು ಬುಡಸಹಿತ ಕಿತ್ತುಹಾಕಬೇಕಾಗಿದೆ ಮತ್ತು ಈ ವ್ಯವಸ್ಥೆಯನ್ನು ಲಿಂಗ ಸಂವೇದಿಯಾಗಿಸಬೇಕಾಗಿದೆ ಎಂದು ಅಭಿಪ್ರಾಯ ಪಟ್ಟಿದೆ. * ಅನಿ ರಾಜಾ, ಕವಿತಾ ಕೃಷ್ಣನ್, ಕಮಲಾ ಭಾಸಿನ್, ಮೀರಾ ಸಂಘಮಿತ್ರಾ, ಮೈಮುನ ಮೊಲ್ಲ, ಝೂಕಿಯಾ ಸೋಮನ್ ಮುಂತಾದವರು ಸಹಿ ಹಾಕಿರುವ ಒಂದು ಬಹಿರಂಗ ಪತ್ರದಲ್ಲಿ ಮುಖ್ಯ ನ್ಯಾಯಾಧೀಶರು ತನ್ನ ಈ ಟಿಪ್ಪಣಿಗಳಿಗೆ ಕ್ಷಮೆ ಕೋರಬೇಕು ಮತ್ತು ತನ್ನ ಸ್ಥಾನದಿಂದ ಕೆಳಗಿಳಿಯಬೇಕು ಎಂದು 3500 ಪ್ರತಿಷ್ಠಿತ ನಾಗರಿಕರು ಮತ್ತು ಸಂಘಟನೆಗಳು ಆಗ್ರಹಿಸಿವೆ.

"ಚೀಫ್ ಜಸ್ಟಿಸ್ ಸರ್, ಸಂತ್ರಸ್ತೆಯ ಸಂಕಟ, ಮಾನಸಿಕ ಆಘಾತ ಲೆಕ್ಕಕ್ಕೆ ಇಲ್ಲವೇ?"

ಸುಪ್ರಿಂ ಕೋರ್ಟಿನ ಮುಖ್ಯ ನ್ಯಾಯಾಧೀಶರ ಟಿಪ್ಪಣಿಗಳಲ್ಲಿ ಮೊದಲನೆಯದ್ದು ಮುಂಬೈ ಹೈಕೋರ್ಟಿನ ಔರಂಗಾಬಾದ್ ಪೀಠ ಮೋಹಿತ್ ಸುಭಾಷ್ ಚವಾಣ್ vs ಮಹಾರಾಷ್ಟ್ರ ರಾಜ್ಯ ಪ್ರಕರಣದಲ್ಲಿ ಜಾಮೀನು ನಿರಾಕರಿಸಿದ್ದರ ವಿರುದ್ಧ ಸುಪ್ರಿಂ ಕೋರ್ಟಿನಲ್ಲಿ ಸಲ್ಲಿಸಿದ್ದ ಅರ್ಜಿಗೆ ಸಂಬಂಧಪಟ್ಟದ್ದು. ಈ ಅರ್ಜಿದಾರ ಎರಡು ವರ್ಷಗಳ ಹಿಂದೆ ಅಗಿನ್ನೂ ಅಪ್ರಾಪ್ತ ವಯಸ್ಕಳಾಗಿದ್ದ ಹುಡುಗಿಯ ಮೇಲೆ ಅತ್ಯಾಚಾರ ನಡೆಸಿದ್ದ ಎಂಬ ಆರೋಪಕ್ಕೆ ಒಳಗಾಗಿರುವವನು; ವಿಚಾರಣೆಯ ವೇಳೆಯಲ್ಲಿ ಸಿಜೆಐರವರು ಅರ್ಜಿದಾರನಿಗೆ ಆತನ ವಕೀಲರ ಮೂಲಕ ಕೇಳಿದ ಪ್ರಶ್ನೆ "ನೀನು ಆಕೆಯನ್ನು ಮದುವೆಯಾಗುತ್ತೀಯಾ?" ಇದಕ್ಕೆ ಆತನ ವಕೀಲರು ಆತನನ್ನು ಕೇಳಿ ತಿಳಿಸುವುದಾಗಿ ಹೇಳಿದಾಗ ಸಿಜೆಐ ಬೊಬ್ಡೆಯವರು "ಆ ಯುವತಿಯನ್ನು ತಪ್ಪುದಾರಿಗೆ ಎಳೆಯುವ ಮತ್ತು ಅತ್ಯಾಚಾರ ನಡೆಸುವ ಮೊದಲು ಯೋಚಿಸಬೇಕಾಗಿತ್ತು. ನೀನೊಬ್ಬ ಸರಕಾರಿ ಸೇವಕ ಎಂದು ನಿನಗೆ ತಿಳಿದಿತ್ತು." ಎಂದು ಹೇಳಿದರು; ಮುಂದುವರೆದು ಅವರು "ನಾವೇನು ನೀನು ಮದುವೆಯಾಗಬೇಕೆಂದು ಬಲವಂತ ಮಾಡುತ್ತಿಲ್ಲ. ಆಗುತ್ತೀಯಾ ಎಂದು ಕೇಳುತ್ತೇವೆ. ಇಲ್ಲವಾದರೆ ನಾವು ನಿನ್ನನ್ನು ಬಲವಂತ ಮಾಡುತ್ತಿದ್ದೇವೆ ಎಂದು ಹೇಳುತ್ತೀಯಾ" ಎಂದಿರುವುದಾಗಿ ವರದಿಯಾಗಿದೆ. ಸ್ವಲ್ಪ ಹೊತ್ತಿನ ನಂತರ ಈ ಬಗ್ಗೆ ಮತ್ತೆ ವಿಚಾರಣೆ ನಡೆದಾಗ ಅರ್ಜಿದಾರ "ನಾನು ಆಕೆಯನ್ನು ಮದುವೆಯಾಗ ಬಯಸಿದ್ದೆ. ಆದರೆ ಅವಳು ನಿರಾಕರಿಸಿದಳು. ಈಗ ನನಗೆ ಸಾಧ್ಯವಿಲ್ಲ, ಏಕೆಂದರೆ ಈಗಾಗಲೇ ವಿವಾಹಿತನಾಗಿದ್ದೇನೆ" ಎಂದು ವಕೀಲರ ಮೂಲಕ ತಿಳಿಸಿದ. ನ್ಯಾಯಾಲಯ ಆತನಿಗೆ ನಾಲ್ಕು ವಾರಗಳ ಮಧ್ಯಂತರ ರಕ್ಷಣೆ ನೀಡಿ ಸಾಮಾನ್ಯ ಜಾಮೀನು ಪಡೆಯುವಂತೆ ಹೇಳಿತು.

ಈ ಬಗ್ಗೆ ಆಕ್ಷೇಪ ವ್ಯಕ್ತಪಡಿಸುತ್ತ ಬೃಂದಾ ಕಾರಟ್ "ಈ ಪ್ರಶ್ನೆಗಳು, ಪದಗಳು ಮತ್ತು ಕ್ರಿಯೆಗಳು ಅಪ್ರಾಪ್ತ ವಯಸ್ಕರ ಮೇಲೆ ಅತ್ಯಾಚಾರಗಳ ಪ್ರಕರಣಗಳಲ್ಲಿ ಜಾಮೀನು ನೀಡುವಲ್ಲಿ ಗಂಭೀರ ದುಷ್ಪರಿಣಾಮಗಳನ್ನು ಉಂಟು ಮಾಡುತ್ತವೆ " ಎಂದು ಸಿಜೆಐ ರವರಿಗೆ ಬರೆದಿರುವ ಪತ್ರದಲ್ಲಿ ಖೇದ ವ್ಯಕ್ತಪಡಿಸಿದ್ದಾರೆ,

"ದಯವಿಟ್ಟು ಮರುಪರಿಶೀಲಿಸಿ, ಈ ಟಿಪ್ಪಣಿಗಳನ್ನು ಮತ್ತು ಪ್ರಶ್ನೆಗಳನ್ನು ಹಾಗೂ ನೀವು ಅತ್ಯಾಚಾರಿಗೆ ನೀಡಿರುವ ಜಾಮೀನನ್ನು ಹಿಂತೆಗೆದುಕೊಳ್ಳಿ. ಕೆಳಗಣ ಕೋರ್ಟ್ ಆತನಿಗೆ ನೀಡಿದ ಜಾಮೀನು 'ಅಸಹ್ಯಕರ' ಎಂದಿರುವ ಔರಂಗಾಬಾದ್ ಹೈಕೋರ್ಟಿನ ತೀರ್ಪನ್ನು ದಯವಿಟ್ಟು ಎತ್ತಿ ಹಿಡಿಯಿರಿ" ಎಂದು ಬೃಂದಾ ಅವರು ಸಿಜೆಐ ರವರನ್ನು ವಿನಂತಿಸಿಕೊಂಡಿದ್ದಾರೆ.

9ನೇ ತರಗತಿಯಲ್ಲಿ ಓದುತ್ತಿದ್ದ ಈ ಹುಡುಗಿ "ಕೇವಲ 16 ವರ್ಷದವಳಾಗಿದ್ದಾಗ, ಈ ಕ್ರಿಮಿನಲ್ ಆಕೆಯ ಕೈಕಾಲು ಕಟ್ಟಿ ಅತ್ಯಾಚಾರ ಎಸಗಿದ್ದಾನೆ, 10–12 ಬಾರಿ ಇದನ್ನು ಮಾಡಿದ್ದಾನೆ. ಹುಡುಗಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದಳು. ಇದು ಒಪ್ಪಿಗೆಯನ್ನು ತೋರಿಸುತ್ತದೆಯೇ? ಏನೇ ಆಗಲಿ, ಈ ಹುಡುಗಿಯಂತೆ ಒಬ್ಬ ಅಪ್ರಾಪ್ತವಯಸ್ಕೆಯ ವಿಷಯದಲ್ಲಿ ಒಪ್ಪಿಗೆಯ ಪ್ರಶ್ನೆಯೇ ಇಲ್ಲ ಎಂಬುದು ಕಾನೂನಿನಲ್ಲಿ ಸ್ಪಷ್ಟವಾಗಿದೆ" ಎಂಬ ಸಂಗತಿಯತ್ತ ಗಮನ ಸೆಳೆಯುತ್ತ "ಮುಖ್ಯ ನ್ಯಾಯಾಧೀಶ ಸರ್, ಈಗ 18 ವರ್ಷದವಳಾಗಿರುವ ಸಂತ್ರಸ್ತೆಯ ಬಗೆಯೇನು, ಅಕೆಯ ಮೇಲೆ ಇಂತಹ ಪ್ರಶ್ನೆಯ ಪರಿಣಾಮವೇನು? ಆಕೆಯ ಸಂಕಟ, ಮಾನಸಿಕ ಆಘಾತ ಲೆಕ್ಕಕ್ಕೇ ಇಲ್ಲವೇ? ಅದಕ್ಕೆ ಬೆಲೆಯೇ ಇಲ್ಲವೇ?" ಎಂದು ಖಾರವಾಗಿ ಪ್ರಶ್ನಿಸಿದ್ದಾರೆ.

ಅತ್ಯಾಚಾರ ಸಂತ್ರಸ್ತರು ಕೀಲುಗೊಂಬೆಗಳಲ್ಲ, ಯಂತ್ರಗಳಲ್ಲ, ಅವರ ವಿಚಾರಗಳು ಮತ್ತು ಭಾವನೆಗಳು ಬೇರೆಯವರ ರಿಮೋಟ್ ಕಂಟ್ರೋಲಿನಲ್ಲಿ ಇಲ್ಲ. ಆಕೆಯ ತಂದೆ–ತಾಯಿ ಏನೇ ಬಯಸಿದ್ದರೂ, ಆಕೆ ಮದುವೆಯ ಪ್ರಸ್ತಾಪವನ್ನು ನಿರಾಕರಿಸಿದ್ದಳು ಎಂಬ ವರದಿಯತ್ತ ಬೃಂದಾ ಕಾರಟ್ ಸಿಜೆಐರವರ ಗಮನ ಸೆಳೆದಿದ್ದಾರೆ.

ಇಂತಹ ಪ್ರಶ್ನೆಗಳನ್ನು ಅತ್ಯಾಚಾರಿಯನ್ನು ಕೇಳುವ ಮೂಲಕ ಈ ಅಪರಾಧ ಎಸಗಿದ ನಂತರ, ಅದಕ್ಕೆ ಬಲಿಯಾದವಳು ಒಪ್ಪಲಿ, ಬಿಡಲಿ, ಆಕೆಯನ್ನು ಮದುವೆಯಾಗಲು ಆತ "ಒಪ್ಪಿದರೆ" ಆತ ಜೈಲುಶಿಕ್ಷೆಯಿಂದ ಪಾರಾಗಬಹುದು ಎಂಬ ಸಂದೇಶವನ್ನು ಕೊಟ್ಟಂತಾಗುತ್ತದೆ. ಅತ್ಯಾಚಾರಕ್ಕೆ ಬಲಿಯಾದವಳು ಒಬ್ಬ "ಕೆಟ್ಟ ಹೆಂಗಸು, ಆಕೆಯನ್ನು ಅದೇ ಅತ್ಯಾಚಾರಿ ಮದುವೆಯಾದರೆ ಆಕೆಗೆ ಸಮಾಜದ ಕಣ್ಣುಗಳಲ್ಲಿ ಗೌರವ ಪ್ರಾಪ್ತಿಯಾಗುತ್ತದೆ ಎಂಬ ಒಂದು ಪ್ರತಿಗಾಮಿ ಸಾಮಾಜಿಕ ನಿಲುವು ಇದೆ. ಇಂತಹ ನಿಲುವುಗಳನ್ನು ಬೆಂಬಲಿಸುವಂತಹ ಭಾವನೆಯನ್ನು ಸರ್ವೋಚ್ಚ ನ್ಯಾಯಾಲಯದ ಟಿಪ್ಪಣಿಗಳು ಉಂಟುಮಾಡಬಾರದು ಎಂದು ಬೃಂದಾ ಕಾರಟ್ ಸಿಜೆಐಯವರಿಗೆ ಬರೆದಿರುವ ಈ ಪತ್ರದಲ್ಲಿ ಹೇಳಿದ್ದಾರೆ.

ಅತ್ಯಾಚಾರದ ಅಪರಾಧದಲ್ಲಿ ನ್ಯಾಯ ನೀಡಿಕೆಯ ಪ್ರಕ್ರಿಯೆಗಳು ಸಂತ್ರಸ್ತೆಯ ಹಿತಗಳನ್ನು ಕೇಂದ್ರದಲ್ಲಿ ಇಟ್ಟುಕೊಳ್ಳಬೇಕು. ದುರದೃಷ್ಟವಶಾತ್ ಈ ಪ್ರಕರಣದಲ್ಲಿ ತದ್ವಿರುದ್ಧವೇ ಆಗಿದೆ ಎಂದು ಅವರು ಖೇದ ವ್ಯಕ್ತಪಡಿಸಿದ್ದಾರೆ.

"ಹೌದು ಸರ್, ಅತ್ಯಾಚಾರ ಎಂದೇ ಹೇಳಬಹುದು"

ಎರಡನೇಯದ್ದು, ಒಬ್ಬ ಮಹಿಳೆಗೆ ಮದುವೆಯಾಗುತ್ತೇನೆ ಎಂದು ಭರವಸೆ ಕೊಟ್ಟು ಆಕೆಯೊಡನೆ ಸಂಭೋಗ ನಡೆಸಿದ ಒಬ್ಬನ ಜಾಮೀನು ಅರ್ಜಿಯ ವಿಚಾರಣೆಯ ಸಂದರ್ಭದಲ್ಲಿ ಸಿಜೆಐ ಮಾಡಿರುವರೆಂಬ ಟಿಪ್ಪಣಿಯ ಕುರಿತಾದ್ದು. ಕಾನೂನಿನ ಪ್ರಕಾರ ಇದು ಅತ್ಯಾಚಾರವಾಗುತ್ತದೆ. ಆದರೆ, "ಸುಪ್ರಿಂಕೋರ್ಟ್, 'ಗಂಡ ಎಷ್ಟೇ ಪಾಶವೀಯನಾಗಿದ್ದರೂ... ಗಂಡ ಮತ್ತು ಹೆಂಡತಿಯಾಗಿ ಬದುಕುತ್ತಿರುವ ಇಬ್ಬರ ನಡುವೆ ಲೈಂಗಿಕ ಸಂಭೋಗವನ್ನು ಅತ್ಯಾಚಾರ ಎನ್ನಬಹುದೇ?' ಎಂದು ಕೇಳುತ್ತ, ಅತ್ಯಾಚಾರ ನಡೆಸಿದ್ದಾನೆಂದು ತನ್ನ ಮಾಜೀ ಭಾಗೀದಾರಳಿಂದ ಆರೋಪಕ್ಕೆ ಒಳಗಾಗಿರುವ ವ್ಯಕ್ತಿಯ ಬಂಧನಕ್ಕೆ ತಡೆಯಾಜ್ಞೆ ಕೊಟ್ಟಿದೆ" ಎಂದು ವರದಿಯಾಗಿದೆ.

"ಹೌದು ಸರ್, ಅದನ್ನು ಅತ್ಯಾಚಾರ ಎನ್ನಬಹುದು. ಅತ್ಯಾಚಾರವನ್ನು ಒಂದು ವಿವಾಹದ ಪ್ರಮಾಣ ಪತ್ರದಿಂದ ನಿರ್ಧರಿಸಲು ಸಾಧ್ಯವಿಲ್ಲ, ಬದಲಿಗೆ, ಮಹಿಳೆ ಸಂಭೋಗಕ್ಕೆ ಒಪ್ಪಿದ್ದಾಳೋ ಇಲ್ಲವೋ ಎಂಬುದರಿಂದ ನಿರ್ಧಾರವಾಗಬೇಕು. ಈ ವಿಷಯದಲ್ಲಿ ಮಾಡಿದರೆಂದು ವರದಿಯಾಗಿರುವ ಟಿಪ್ಪಣಿಗಳು ಪಾಶವೀಯತೆಯನ್ನು ಸಮರ್ಥಿಸುತ್ತವೆ ಮತ್ತು ಮಹಿಳೆಗೆ ತೊಂದರೆಯುಂಟು ಮಾಡುತ್ತದೆ" ಎಂದು ಬೃಂದಾ ಕಾರಟ್ ಸಿಜೆಐ ರವರಿಗೆ ಬರೆದ ಪತ್ರದಲ್ಲಿ ಹೇಳಿದ್ದಾರೆ.

"ನ್ಯಾಯಾಲಯದ ಈ ಟಿಪ್ಪಣಿಗಳು ನ್ಯಾಯಕ್ಕಾಗಿ ಮಹಿಳೆಯರ

ಪುಟ 14 ನೋಡಿ

ನ್ಯಾಯಾಂಗ ವ್ಯವಸ್ಥೆಯನ್ನು ಲಿಂಗ ಸಂವೇದಿಯಾಗಿಸಬೇಕಾಗಿದೆ

ಭಾರತದ ಮುಖ್ಯ ನ್ಯಾಯಾಧೀಶರ ಈ ಟಿಪ್ಪಣಿಗಳ ಬಗ್ಗೆ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಆಳವಾದ ಕ್ಷೋಭೆಯನ್ನು ವ್ಯಕ್ತಪಡಿಸಿದೆ.

ದೇಶದಲ್ಲಿ ಹಲವು ಅತ್ಯಾಚಾರ ಪ್ರಕರಣಗಳಲ್ಲಿ ನ್ಯಾಯಾಧೀಶರುಗಳು ಕಾನೂನಿನ ಪ್ರಕಾರ ಮುಂದುವರೆಯುವ ಬದಲು ಅತ್ಯಾಚಾರಿಗೆ ಸಂತ್ರಸ್ತೆಯನ್ನು ಮದುವೆಯಾಗುವಂತೆ ಕೇಳುವುದು ಕಂಡು ಬರುತ್ತಿದೆ. ಈ ನಿರ್ದಿಷ್ಟ ಪ್ರಕರಣದಲ್ಲಿ ಮುಂಬೈ ಹೈಕೋರ್ಟ್(ಔರಂಗಾಬಾದ್ ಪೀಠ) ಅರ್ಜಿದಾರ ಮತ್ತು ಆತನ ಕುಟುಂಬದವರು ಎಷ್ಟು ಪ್ರಭಾವಿಗಳೆಂದರೆ, ಆ ಹುಡುಗಿ ಮತ್ತು ಆಕೆಯ ತಾಯಿಯಿಂದ ಅರ್ಜಿದಾರ ಮತ್ತು ಸಂತ್ರಸ್ತೆ ಪರಸ್ಪರ ಸಂಬಂಧವಿಟ್ಟಿಕೊಂಡಿದ್ದರು ಮತ್ತು ಅಕೆಯ ಒಪ್ಪಿಗೆಯಿಂದಲೇ ಸಂಭೋಗ ನಡೆದಿತ್ತು ಎಂದು 500 ರೂ. ಸ್ಟಾಂಪ್ ಪೇಪರಿನ ಮೇಲೆ ಬರೆಸಿಕೊಂಡಿದ್ದರು ಎಂದು ಗಮನಿಸಿರುವುದಾಗಿಯೂ ವರದಿಯಾಗಿದೆ. ಅದು ಅತ್ಯಾಚಾರಿಯ ಕೃತ್ಯಗಳನ್ನು 'ಅಸಹ್ಯಕರ' ಎನ್ನುತ್ತ ಆತನ ಜಾಮೀನು ಅರ್ಜಿಯನ್ನು ವಜಾ ಮಾಡಿತ್ತು. ಸುಪ್ರಿಂ ಕೋರ್ಟ್ ಆತನಿಗೆ ಸಾಮಾನ್ಯ ಜಾಮೀನು ಅರ್ಜಿ ಸಲ್ಲಿಸಲು ಸಮಯ ಕೊಡಬಾರದಾಗಿತ್ತು ಎಂದು ಎಐಡಿಡಬ್ಲ್ಯುಎ ಖೇದ ವ್ಯಕ್ತಪಡಿಸಿದೆ.

ಅತ್ಯಾಚಾರದ ಪ್ರಕರಣಗಳಲ್ಲಿ ಮದುವೆಯನ್ನು ಒಂದು ಪರಿಹಾರವಾಗಿ ಸೂಚಿಸುವುದು ಸಂಪೂರ್ಣ ತಪ್ಪು. ಇದು ಸಂತ್ರಸ್ತೆ ಎದುರಿಸಿದ ಹಿಂಸಾಚಾರ ಮತ್ತು ಮಾನಸಿಕ ಆಘಾತವನ್ನು ಕಡಿಮೆಗೊಳಿಸಬಹುದಷ್ಟೇ, ಅತ್ಯಾಚಾರವನ್ನು ಎಂದೂ ಕ್ಷಮಿಸಲಾಗದು ಅಥವ ಕಾನೂನುಬದ್ಧಗೊಳಿಸಬಾರದು. ಅತ್ಯಾಚಾರಿಗೇ ಮದುವೆ ಮಾಡಿದರೆ ಆಕೆಯ ಮಾನವನ್ನು ಉಳಿಸಿದಂತಾಗುತ್ತದೆ ಎಂಬುದು ಆಕೆಯ ಮೇಲೆ ಮತ್ತಷ್ಟು ಹಿಂಸಾಚಾರ ಎಸಗುವ ಅತ್ಯಂತ ಪ್ರತಿಗಾಮಿ ವಿಚಾರ ಎಂದು ಎಐಡಿಡಬ್ಲ್ಯುಎ ಹೇಳಿದೆ.

ವೈವಾಹಿಕ ಸಂಬಂಧದ ಒಳಗೂ ಅತ್ಯಾಚಾರ ಎಂದಾದರೂ ಸಂಭವಿಸುತ್ತದೆಯೇ ಎಂಬ ಸಿಜೆಐ ರವರ ಪ್ರಶ್ನೆಯೂ ಅತ್ಯಂತ ಕ್ಷೋಭೆ ಉಂಟುಮಾಡುವಂತದ್ದು ಎಂದು ಅದು ಖೇದ ವ್ಯಕ್ತಪಡಿಸಿದೆ. ಇಂತಹ ಅತ್ಯಾಚಾರವನ್ನು ಭಾರತೀಯ ದಂಡ ಸಂಹಿತೆ(ಐಪಿಸಿ)ಯ 376ನೇ ವಿಭಾಗದ ಅಡಿಯಲ್ಲಿ ಅಪರಾಧ ಎಂದು ಪರಿಗಣಿಸಬೇಕು ಮತ್ತು ಅದನ್ನು ಐಪಿಸಿಯಲ್ಲಿ ಹೊರತುಪಡಿಸಿರುವದನ್ನು ತೆಗೆಯಬೇಕು ಎಂದು ಎಲ್ಲ ಮಹಿಳಾ ಸಂಘಟನೆಗಳು ಬಹಳ ವರ್ಷಗಳಿಂದ ಕೇಳುತ್ತ ಬಂದಿವೆ. ಇದನ್ನು 1983ರಷ್ಟು ಹಿಂದೆಯೇ ಐಪಿಸಿಯಲ್ಲಿ ಸೆಕ್ಷನ್ 498ಎ ಯನ್ನು ಸೇರಿಸುವ ಮೂಲಕ ಮತ್ತು ಮನೆಯೊಳಗಿನ ಹಿಂಸಾಚಾರದ ಕಾಯ್ದೆಯಲ್ಲಿ ಭಾಗಶಃ ಗುರುತಿಸಲಾಗಿದೆ.

ಭಾರತೀಯ ಅಪರಾಧಿಕ ನ್ಯಾಯ ವ್ಯವಸ್ಥೆಯ ಕೆಲವು ವಿಭಾಗಗಳಲ್ಲಿ ಇರುವ ಸಂಪ್ರದಾಯಶರಣ ಮತ್ತು ಪಿತೃ ಪ್ರಧಾನ ವ್ಯವಸ್ಥೆಯ ಭಾವನೆಗಳನ್ನು ಬುಡಸಹಿತ ಕಿತ್ತುಹಾಕಬೇಕಾಗಿದೆ ಮತ್ತು ಈ ವ್ಯವಸ್ಥೆಯನ್ನು ಲಿಂಗ ಸಂವೇದಿ ಯಾಗಿಸಬೇಕಾಗಿದೆ ಎಂದು ಎಐಡಿಡಬ್ಲ್ಯುಎ ಅಭಿಪ್ರಾಯ ಪಟ್ಟಿದೆ.



ನಾನು ಆಕೆಯನ್ನು ಮದುವೆಯಾಗುತ್ತೇನೆ, ಯುವರ್ ಆನರ್!

ವ್ಯಂಗ್ಯಚಿತ್ರ: ಸುಭಾನಿ, ಡೆಕ್ಕನ್ ಕ್ರಾನಿಕಲ್

ಮದುವೆ ಅತ್ಯಾಚಾರಕ್ಕೆ ಪರವಾನಿಗೆ ಎಂಬ ಸಂದೇಶ ನೀಡುತ್ತಿದ್ದಾರೆಯೇ?

ಭಾರತದ ಮುಖ್ಯ ನ್ಯಾಯಾಧೀಶರು ತನ್ನ ಈ ಟಿಪ್ಪಣಿಗಳಿಗೆ ಕ್ಷಮೆ ಕೋರಬೇಕು ಮತ್ತು ತನ್ನ ಸ್ಥಾನದಿಂದ ಕೆಳಗಿಳಿಯಬೇಕು ಎಂದು 3500 ಪ್ರತಿಷ್ಠಿತ ನಾಗರಿಕರು ಮತ್ತು ಸಂಘಟನೆಗಳು ಅವರಿಗೆ ಒಂದು ಬಹಿರಂಗ ಪತ್ರದಲ್ಲಿ ಆಗ್ರಹಿಸಿವೆ.

"ಇದು ಭಾರತದಲ್ಲಿ ನ್ಯಾಯ ಎಂಬುದು ಮಹಿಳೆಯರಿಗೆ ಒಂದು ಸಂವಿಧಾನಿಕ ಹಕ್ಕು ಅಲ್ಲ ಎಂಬ ಸಂದೇಶವನ್ನು ಸುಪ್ರಿಂ ಕೋರ್ಟಿನ ಮುಖ್ಯ ನ್ಯಾಯಾಧೀಶರ ಅತ್ಯುನ್ನತ ಹುದ್ದೆಯಿಂದ ಇತರ ನ್ಯಾಯಾಲಯಗಳಿಗೆ, ನ್ಯಾಯಾಧೀಶರುಗಳಿಗೆ, ಪೋಲೀಸ್ ಮತ್ತು ಇತರ ಕಾನೂನು ಜಾರಿ ಸಂಸ್ಥೆಗಳಿಗೆ ಕಳಿಸುತ್ತದೆ. ಹುಡುಗಿಯರು ಮತ್ತು ಮಹಿಳೆಯರನ್ನು ಮತ್ತಷ್ಟು ಬಾಯಿಮುಚ್ಚಿಸಲು ಇದು ದಾರಿ ಮಾಡಿಕೊಡುತ್ತದೆ. ಅತ್ಯಾಚಾರಿಗಳಿಗೆ ಇದು ಮದುವೆ ಎಂಬುದು ಅತ್ಯಾಚಾರಕ್ಕೆ ಒಂದು ಪರವಾನಿಗೆ, ಇಂತಹ ಪರವಾನಿಗೆ ಪಡೆದು ಅವರು ತಮ್ಮ ದುಷ್ಕೃತ್ಯಗಳನ್ನು ನಿರಪರಾಧೀಕರಿಸಬಹುದು ಮತ್ತು ಕಾನೂನುಬದ್ಧಗೊಳಿಸಬಹುದು ಎಂಬ ಸಂದೇಶವನ್ನು ಕಳಿಸುತ್ತದೆ" ಎಂದು ಈ ಬಹಿರಂಗಪ ಪತ್ರದಲ್ಲಿ ಹೇಳಲಾಗಿದೆ.

ರೈತರ ಆದಾಯವನ್ನು ಮೋದಿ ಈಗಾಗಲೇ ದ್ವಿಗುಣಗೊಳಿಸಿದ್ದಾರೆ!



ಎರಡೇ ಎರಡು ವರ್ಷಗಳಲ್ಲಿ ರೈತರ ಆದಾಯ ದ್ವಿಗುಣಗೊಳ್ಳುತ್ತದೆ ಎಂಬ ಮೋದಿ ಭವಿಷ್ಯವಾಣಿ ಈಗಾಗಲೇ ನಿಜವಾಗಿದೆ! ಏಕಾಏಕಿಯಾಗಿ ಸಾರಿದ ಲಾಕ್‌ಡೌನ್‌ನ ತೆರೆ ಮರೆಯಲ್ಲಿ, ರೈತರ ಆದಾಯ ದ್ವಿಗುಣಗೊಳಿಸುವ ಮೋದಿಯವರ ಭರವಸೆ ಈಡೇರಿದೆ.ಏಕೆಂದರೆ ಅಂಬಾನಿ ಮತ್ತು ಅದಾನಿ ಮಹಾಶಯರು ರೈತರಿಗೆ ನೀಡಿರುವ ಕೊಡುಗೆಯನ್ನು ಪರಿಗಣಿಸಿ, ಅವರನ್ನು ಗೌರವ-ರೈತರೆಂದು ವರ್ಗೀಕರಿಸಿ, ಅವರ ಆದಾಯಗಳನ್ನು ಭಾರತದ ಉಳಿದ ರೈತರ ಆದಾಯಕ್ಕೆ ಸೇರಿಸಿದರೆ, ರೈತರ ಸರಾಸರಿ ಆದಾಯವು ಒಂದು ದೊಡ್ಡ ಜಿಗಿತವನ್ನು ಪಡೆಯುತ್ತದೆ! ಅದು ಖಂಡಿತಾ ದ್ವಿಗುಣಗೊಂಡಿದೆಯಲ್ಲವೇ ಎನ್ನುತ್ತಾರೆ ಅರ್ಥಶಾಸ್ತ್ರಜ್ಞ

ಪ್ರೊ. ಅಮಿತ್ ಬಾಧುರಿ ಅನು: ಕೆ.ಎಂ.ನಾಗರಾಜ್

ನಮ್ಮ ಪ್ರಧಾನಮಂತ್ರಿಯವರು ಒಬ್ಬ ಗೌರವಾನ್ವಿತ ವ್ಯಕ್ತಿ. ಅವರು ಏನು ಹೇಳುತ್ತಾರೋ ಅದನ್ನು ಮಾಡುತ್ತಾರೆ. ಆದರೆ, ಅವರು ಹೇಳಿದ್ದನ್ನು ಮಾಡಿದ್ದಾರೆ ಎಂಬುದು ಕೆಲವೊಮ್ಮೆ ಜನರಿಗೆ ನಿಜಕ್ಕೂ ಅರ್ಥವೇ ಆಗುವುದಿಲ್ಲವಲ್ಲ.

ತಾವು ಕೊಟ್ಟ ಮಾತನ್ನು ಮೋದಿ ಉಳಿಸಿಕೊಳ್ಳುತ್ತಾರೆ. ಅವರು ಒಬ್ಬ ಗೌರವಾನ್ವಿತ ವ್ಯಕ್ತಿ. ಭಾರತದ ಅರ್ಥವ್ಯವಸ್ಥೆಯಲ್ಲಿ ಬೆಳೆದಿರುವ ಕಪ್ಪು ಹಣವನ್ನು ನಿರ್ಮೂಲನೆ ಮಾಡುವುದಾಗಿ ಅವರು ಮಾತು ಕೊಟ್ಟಿದ್ದರು. ಏಕಾಏಕಿಯಾಗಿ ನಡೆಸಿದ ನೋಟು ರದ್ದತಿ ಎಂಬ ಮಿಂಚಿನ ದಾಳಿಯ ಮೂಲಕ ಕಪ್ಪು ಹಣವನ್ನು ನಿರ್ಮೂಲನೆ ಮಾಡುವುದಾಗಿ ಕೊಟ್ಟಿದ್ದ ತಮ್ಮ ಮಾತನ್ನು ಮೋದಿ ಉಳಿಸಿಕೊಂಡಿದ್ದರು, ದೊಡ್ಡ ದೊಡ್ಡ ಉದ್ಯಮಿಗಳು ತಾವು ಮಾಡಿಟ್ಟುಕೊಂಡಿದ್ದ ಕಪ್ಪು ಹಣವನ್ನು ರಾತ್ರೋರಾತ್ರಿ ಬಿಳಿ ಹಣವನ್ನಾಗಿ ಬದಲಾಯಿಸಿಕೊಂಡರು, ಅತ್ತ ರಾಷ್ಟ್ರೀಕೃತ ಬ್ಯಾಂಕ್‌ಗಳು ತಮ್ಮ ಅನುತ್ಪಾದಕ ಆಸ್ತಿಗಳ(ವಸೂಲಾಗದ ಸಾಲಗಳ) ಹೊರೆಯನ್ನು ರಾತ್ರೋರಾತ್ರಿ ಹೆಚ್ಚಿಸಿಕೊಂಡವು. ನೋಟು ರದ್ದತಿಯ ಪರಿಣಾಮಗಳು ಎಲ್ಲರಿಗೂ ಹಗಲಿನಷ್ಟು ಸ್ಪಷ್ಟವಾಗಿ ಗೋಚರಿಸುತ್ತಿದ್ದವು. ಆದರೆ, ಅನೌಪಚಾರಿಕ ವಲಯದ ಅನೇಕ ಮಂದಿಗೆ ಮಾತ್ರ ಗೋಚರಿಸಲಿಲ್ಲ. ಏಕೆಂದರೆ, ಅವರು ಮಿಂಚಿನ ದಾಳಿಯಲ್ಲಿ ಸುಟ್ಟು ಬೂದಿಯಾದರು.

ಇದೇ ರೀತಿಯಲ್ಲಿ, ಇದ್ದಕ್ಕಿದ್ದಂತೆ ಒಂದು ದಿನ ರಾತ್ರಿ ಎಂಟು ಗಂಟೆಯ ಹೊತ್ತಿನಲ್ಲಿ ಕೇವಲ ನಾಲ್ಕು ಗಂಟೆಗಳ ನೋಟೀಸ್ ಕೊಟ್ಟು, ಕೊರೊನಾ ಸಾಂಕ್ರಾಮಿಕ ಹರಡುವುದನ್ನು ತಡೆಯುವ ಉದ್ದೇಶವಾಗಿ ಒಂದು ಲಾಕ್‌ಡೌನ್ ಘೋಷಣೆ ಮಾಡಿದ್ದರು. ಇದ್ದಕ್ಕಿದ್ದಂತೆ, ಮತ್ತೊಂದು ದಿನ, ರಾತ್ರಿ ಒಂಭತ್ತು ಗಂಟೆಗೆ ಸರಿಯಾಗಿ ತಮ್ಮ ತಮ್ಮ ಬಾಲ್ಕನಿಯಲ್ಲಿ ನಿಂತು, ತಟ್ಟೆ-ಲೋಟ-ಪಾತ್ರೆ-ಜಾಗಟೆ ಬಡಿದು, ನಂತರ ದೀಪ ಬೆಳಗಿಸಿದರೆ ಹದಿನೆಂಟು ದಿನಗಳಲ್ಲಿ ಕೊರೊನಾ ನಿರ್ಮೂಲನೆಗೊಳ್ಳುತ್ತದೆ ಎಂಬುದನ್ನು ಶಾಸ್ತ್ರೋಕ್ತವಾಗಿ ಹೇಳಿದ್ದರು..

ನಿಜ, ಸಾಕಷ್ಟು ಮಂದಿಗೆ ನಿಲ್ಲುವ ಬಾಲ್ಕನಿಯ ಮಾತಿರಲಿ, ಮಲಗಲು ಮನೆಯೂ ಇರಲಿಲ್ಲ, ಬಡಿಯಲು ತಟ್ಟೆ-ಲೋಟಗಳೂ ಕೂಡ ಇರಲಿಲ್ಲ. ಕೆಲವರು ವೈರಸ್ ವಿರುದ್ಧ ಹೋರಾಡುವ ಮೊದಲೇ ರಸ್ತೆಯ ಮೇಲೇ ಸತ್ತು ಹೋದರು. ಅವರು ತಮ್ಮ ಊರಿಗೆ ಹಿಂತಿರುಗುತ್ತಿದ್ದ ವಲಸೆ ಕಾರ್ಮಿಕರು.

ಮುಂದಿನ ಎರಡೇ ಎರಡು ವರ್ಷಗಳಲ್ಲಿ ರೈತರ ಆದಾಯ ದ್ವಿಗುಣಗೊಳ್ಳುತ್ತದೆ ಎಂದು ಮೋದಿ ಭವಿಷ್ಯವಾಣಿ ನುಡಿದಿದ್ದರು. ಈಗಾಗಲೇ ಅದು ನಿಜವಾಗಿದೆ. ಏಕಾಏಕಿಯಾಗಿ ಘೋಷಣೆ ಮಾಡಿದ ಲಾಕ್‌ಡೌನ್‌ನ ತೆರೆ ಮರೆಯಲ್ಲಿ, ರೈತರ ಆದಾಯ ದ್ವಿಗುಣಗೊಳಿಸುವ ಮೋದಿಯವರ ಭರವಸೆ ಈಡೇರಿದೆ. ಅವರ ಬಗ್ಗೆ ಯಾರು ಏನೇ ಹೇಳಿದರೂ ಸಹ, ನಮ್ಮ ಪ್ರಧಾನ ಮಂತ್ರಿಯವರು ಒಬ್ಬ ಆಡಂಬರವಿಲ್ಲದ ವ್ಯಕ್ತಿ. ಅವರು ಒಬ್ಬ ಗೌರವಾನ್ವಿತ ವ್ಯಕ್ತಿ. ಅವರು ತಮ್ಮ ಸಾಧನೆಗಳ ಬಗ್ಗೆ ಜಂಬಕೊಚ್ಚಿಕೊಳ್ಳಲು ಇಷ್ಟಪಡುವುದಿಲ್ಲ. ಆದರೂ, ಕೇವಲ 227 ದಿನಗಳಲ್ಲಿ ರೈತರ ಸಂಪತ್ತು ಹೇಗೆ ದ್ವಿಗುಣಗೊಂಡಿತು ಎಂಬುದು ದೇಶಕ್ಕೆ ಗೊತ್ತಾಗಬೇಕು.

ಇತ್ತೀಚಿನ ಆಕ್ಸ್‌ಫಾಮ್ ವರದಿಯ ಪ್ರಕಾರ, ಮಾರ್ಚ್ 18 ಮತ್ತು ಅಕ್ಟೋಬರ್ 31ರ ನಡುವೆ, ಭಾರತದ ಅತ್ಯಂತ ಶ್ರೀಮಂತ ವ್ಯಕ್ತಿ ಮುಕೇಶ್ ಅಂಬಾನಿಯವರ ಸಂಪತ್ತು 36.8 ಬಿಲಿಯನ್ ಡಾಲರ್‌ಗಳಿಂದ 78.3 ಬಿಲಿಯನ್ ಡಾಲರ್‌ಗಳಿಗೆ ಏರಿಕೆಯಾಗಿದೆ.

ರಿಲೈಯನ್ಸ್ ಜಿಯೋ(ಟೆಲಿಕಮ್ಯೂನಿಕೇಷನ್), ಪೆಟ್ರೋಲಿಯಂ ಉತ್ಪನ್ನಗಳು, ಚಿಲ್ಲರೆ ವ್ಯಾಪಾರದ ಮಾಲ್‌ಗಳು ಮುಂತಾದ ಉದ್ದಿಮೆಗಳ ಸಮೂಹದ ಒಡೆತನ ಹೊಂದಿರುವ (ಅತಿ ದೊಡ್ಡ ಶೇರುದಾರರು) ಮುಕೇಶ್ ಅಂಬಾನಿ ಅವರ ಸಂಪತ್ತನ್ನು 2020ರ ಫೋರ್ಬ್ಸ್ ಶ್ರೀಮಂತರ ಪಟ್ಟಿಯು ಇನ್ನೂ ಮೇಲಕ್ಕೆ, 89 ಬಿಲಿಯನ್ ಡಾಲರ್‌ಗಳಿಗೆ ಏರಿಸುತ್ತದೆ. ಮುಕೇಶ್ ಅಂಬಾನಿ ಅವರು ಹೊಂದಿರುವ ಸಂಪತ್ತು, ಅಷ್ಟೇ ವೇಗದಿಂದ ಹಿಂಬಾಲಿಸಿದ ಭಾರತದ ಎರಡನೇ ಅತಿ ಶ್ರೀಮಂತ ವ್ಯಕ್ತಿ ಗೌತಮ್ ಅದಾನಿ ಅವರ ಸಂಪತ್ತಿಗಿಂತ ಸುಮಾರು ಮೂರು ಪಟ್ಟು ಹೆಚ್ಚಿಗೆ ಇದೆ. ನಮಗೆ ತಿಳಿದಿರುವಂತೆ, ಮುಕೇಶ್ ಅಂಬಾನಿ ಮತ್ತು ಗೌತಮ್ ಅದಾನಿ ಅವರುಗಳ ಈ ಸಾಧನೆಗಳನ್ನು ಹೇಳಲು ಪ್ರಧಾನಮಂತ್ರಿಗಳು ಇಷ್ಟಪಡುವುದಿಲ್ಲ ಏಕೆಂದರೆ, ಅವರು ಒಬ್ಬ ಗೌರವಾನ್ವಿತ ವ್ಯಕ್ತಿ ಮತ್ತು ಆಡಂಬರವಿಲ್ಲದ ವ್ಯಕ್ತಿ. ಅದೇನೇ ಇರಲಿ, ಕೃಷಿ ಉತ್ಪನ್ನಗಳ ದಾಸ್ತಾನು (ಹಗೇವುಗಳು) ಮತ್ತು ಅವುಗಳ ಚಿಲ್ಲರೆ ವ್ಯಾಪಾರದಲ್ಲಿ ತೊಡಗಿರುವ ಈ ಬಿಲಿಯನೇರ್ ಜೋಡಿಯನ್ನು ಗೌರವ-ರೈತರೆಂದು ವರ್ಗೀಕರಿಸಬಹುದು.

ಮಹತ್ವದ ಕೊಡುಗೆ ನೀಡುವ ವ್ಯಕ್ತಿಗಳ ಸೇವೆಯನ್ನು ಗುರುತಿಸಿ ಗೌರವಿಸುವ ಉದ್ದೇಶದಿಂದ ಸಂಘ-ಸಂಸ್ಥೆಗಳು ಅವರಿಗೆ ಗೌರವ ಸದಸ್ಯತ್ವ ನೀಡುವ ರೀತಿಯಲ್ಲಿ, ಮುಕೇಶ್ ಅಂಬಾನಿ ಮತ್ತು ಗೌತಮ್ ಅದಾನಿ ಮಹಾಶಯರು ರೈತರಿಗೆ ನೀಡಿರುವ ಕೊಡುಗೆಯನ್ನು ಪರಿಗಣಿಸಿ, ಅವರನ್ನು ಗೌರವ-ರೈತರೆಂದು ವರ್ಗೀಕರಿಸಿ, ಈ ಬಿಲಿಯನೇರ್ ಜೋಡಿಯ ಆದಾಯವನ್ನು ಭಾರತದ ಉಳಿದ ರೈತರ ಆದಾಯಕ್ಕೆ ಸೇರಿಸಿದರೆ, ರೈತರ ಸರಾಸರಿ ಆದಾಯವು ಒಂದು ದೊಡ್ಡ ಜಿಗಿತವನ್ನು ಪಡೆಯುತ್ತದೆ. ಎಲ್ಲ ಕಾರ್ಪೋರೇಟ್ ಪರ ಹಾಗೂ ಮಾರುಕಟ್ಟೆ-ಒಲವಿನ ಅರ್ಥಶಾಸ್ತ್ರಜ್ಞರು – ಈ ಸಂತತಿಯ ಕೆಲವರು ಇಲ್ಲೇ ಇದ್ದಾರೆ ಮತ್ತು ಇನ್ನೂ ಕೆಲವರು ಐಎಂಎಫ್ ಮತ್ತು ವಿಶ್ವಬ್ಯಾಂಕ್‌ಗಳಲ್ಲಿದ್ದಾರೆ – ಗುಜರಾತ್‌ನ ಈ ಇಬ್ಬರು ಕಾರ್ಪೋರೇಟ್ ಸದಸ್ಯರನ್ನು ರೈತ ಸಮುದಾಯಕ್ಕೆ ಸೇರಿದವರು ಎಂದು ಪರಿಗಣಿಸಿದರೆ, ರೈತರ ಸರಾಸರಿ ಆದಾಯವು ಭಾರಿ ಪ್ರಮಾಣದಲ್ಲಿ ಏರಿಕೆಯಾಗಲಿದೆ ಎಂಬ ಒಂದು ಅಂದಾಜನ್ನು ಈಗಾಗಲೇ ಮಾಡಿರಬಹುದು. ಬಹುಷಃ, ಈ ಸಂಖ್ಯಾಧಾರಿತ ಅಂಶದ ಬಲದಿಂದಲೇ ಅವರು ಮಾಧ್ಯಮಗಳಲ್ಲಿ ಏರಿದ ದನಿಯಲ್ಲಿ ಮಾತಾಡುತ್ತಿರುವುದು ಎಂದು ತೋರುತ್ತದೆ. ಈ ಅಂಶವನ್ನು ಪ್ರಧಾನ ಮಂತ್ರಿ ಮೋದಿ ಅವರು ಬಹುಷಃ ದೃಢೀಕರಿಸಬಲ್ಲರು. ಅಂಬಾನಿ-ಅದಾನಿ ಅವರೊಂದಿಗೆ ನಿಕಟ ಸಂಪರ್ಕ ಹೊಂದಿದ್ದರಿಂದಾಗಿ, ಮೋದಿಯವರು ಗುಜರಾತ್ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಅನೇಕ ಒಪ್ಪಂದಗಳನ್ನು ಕುದುರಿಸಿದ್ದರು. ಈಗ ವಿಮಾನ ನಿಲ್ದಾಣಗಳ ಸಂಬಂಧಿತ ಒಪ್ಪಂದಗಳೊಂದಿಗೆ ಈ ಸಂಬಂಧ ಇನ್ನಷ್ಟು ಗಾಢವಾಗಿದೆ.

ಇಂತಹ ಸಾಧನೆಯನ್ನೇ ಈ ಮೂರೂ ಕೃಷಿ ಕಾನೂನುಗಳು ಉದ್ದೇಶಿಸಿರುವುದು. ಈ ಸರಳ ಗಣಿತವು ರೈತರಿಗೆ ಅರ್ಥವಾಗದು ಎಂದೇ ಭಾವಿಸಿದ್ದ ಭಾರತದ ಗಣ-ಮಾನ್ಯರು ಈಗ ಗೊಂದಲಕ್ಕೀಡಾಗಿದ್ದಾರೆ. ಅಷ್ಟಕ್ಕೂ, ನಿಜ ಅರ್ಥವ್ಯವಸ್ಥೆಯು ತೀವ್ರ ಕುಗ್ಗುವಿಕೆಗೆ ಒಳಗಾದ ಈ ಲಾಕ್‌ಡೌನ್ ಅವಧಿಯಲ್ಲೇ ಭಾರತದ ಬಹುತೇಕ ಶ್ರೀಮಂತರು, ಗುರುತ್ವಾಕರ್ಷಣೆಯ ನಿಯಮವನ್ನು ಧಿಕ್ಕರಿಸುವ ರೀತಿಯಲ್ಲಿ, ಇನ್ನೂ ಹೆಚ್ಚು ಶ್ರೀಮಂತರಾದರು. ಈ ಶ್ರೀಮಂತಿಕೆಯು ಹಿಗ್ಗಲು ಷೇರುಗಳ ಬೆಲೆ ಏರಿಕೆ, ಅದರಲ್ಲೂ ವಿಶೇಷವಾಗಿ ಅಂಬಾನಿ ಮತ್ತು ಅದಾನಿ ಕಂಪನಿಗಳ ಷೇರುಗಳ ಬೆಲೆ ಏರಿಕೆ ಕಾರಣವಾಗಿತ್ತು ಎಂಬುದನ್ನು ಹುರುನ್ ಇಂಡಿಯಾ, ಸ್ವಿಜರ್ಲೆಂಡ್‌ನ ಯುಬಿಎಸ್ ಮತ್ತು ಪ್ರೈಸ್ ವಾಟರ್ ಹೌಸ್ ಕೂಪ್ಸ್ ಸಂಸ್ಥೆಗಳು ಗುರುತಿಸಿವೆ. ಅಲ್ಪ ಆದಾಯಕ್ಕಾಗಿ ಹೊಲ-ಗದ್ದೆಗಳಲ್ಲಿ ಕೆಲಸ ಮಾಡುವ ಬದಲು ಇಂತಹ ಷೇರುಗಳನ್ನು ಹೊಂದುವುದು ಅದೆಷ್ಟು ಲಾಭದಾಯಕ ಎಂಬುದನ್ನು ಅರಿಯಲು ಮೊಂಡು ರೈತರು ಮಾತ್ರ ನಿರಾಕರಿಸುತ್ತಾರೆ.

ಪುಂಡ ಪೋಕರಿ ವಿದ್ಯಾರ್ಥಿಗಳು ಪಾಠ ಕಲಿಯಲು ನಿರಾಕರಿಸುವ ರೀತಿಯಲ್ಲಿ ರೈತರು ವರ್ತಿಸುವಾಗ, ಪ್ರಧಾನಿಗೆ ಇರುವ ಆಯ್ಕೆಯಾದರೂ ಯಾವುದು? ಅವರನ್ನು ಬಂಧಿಸುವ ಮೂಲಕವೇ ಪಾಠ ಕಲಿಸಬೇಕಾಗುತ್ತದೆ. ಆದ್ದರಿಂದ, ರೈತರು ಎಲ್ಲೆಲ್ಲಿ ಜಮಾಯಿಸಿದ್ದರೋ ಅಲ್ಲೆಲ್ಲ (ದೆಹಲಿಯ ಸಿಂಘು ಮತ್ತು ಇತರ ಗಡಿ ಭಾಗಗಳ ಸುತ್ತ ಮುತ್ತ) ಮೊಳ ಉದ್ದದ ಮೊಳೆಗಳನ್ನು ರಸ್ತೆಯಲ್ಲಿ ಜಡಿದು, ಸುತ್ತ ಮುಳ್ಳು ತಂತಿ ಬೇಲಿ ನಿರ್ಮಿಸಿ, ರಸ್ತೆಗಳಲ್ಲಿ ಕಂದಕಗಳನ್ನು ತೋಡಲಾಗಿದೆ. ಮೇಲಾಗಿ, ಇಂದಿನ ದಿನಗಳಲ್ಲಿ ಭಯೋತ್ಪಾದಕರು, ಖಲಿಸ್ತಾನಿಗಳು, ನಗರ ನಕ್ಸಲರು ಮತ್ತು ವಿದೇಶಿ ಪಿತೂರಿಗಳು, ಕೊರೊನಾಗಿಂತಲೂ ಮಾರಕ ವೈರಸ್‌ಗಳು ಎಂಬುದು ನಮ್ಮ ರಾಷ್ಟ್ರೀಯ ಗುಪ್ತಚರ ಏಜೆನ್ಸಿಗೆ ಚೆನ್ನಾಗಿ ಗೊತ್ತಿದೆ. ನಮ್ಮ ಪ್ರಧಾನ ಮಂತ್ರಿಯವರು "ವಿದೇಶಿ ವಿನಾಶಕಾರಿ ಸಿದ್ಧಾಂತ" (ಎಫ್‌ಡಿಐ) ಎಂಬ ಇನ್ನೊಂದು ವೈರಸ್ ಸಹ ಇದೆ ಎಂದು ನಮ್ಮನ್ನು ಎಚ್ಚರಿಸುವಾಗ, ಬಹುಷಃ, ಕೆಲವು ಆಪಾದಿತರ ಕಂಪ್ಯೂಟರ್‌ಗಳಲ್ಲಿ ಅಳವಡಿಸಲಾದ ಪೂರಕ ಸಾಕ್ಷ್ಯವನ್ನು ಮನಸ್ಸಿನಲ್ಲಿಟ್ಟುಕೊಂಡೇ ಹೇಳಿರಬಹುದೇನೋ. ಇಂತಹ ವಿದೇಶಿ ವಿನಾಶಕಾರಿ ಸಿದ್ಧಾಂತದ ವಾಹಕಗಳೆಂದರೆ ವಾಷಿಂಗ್ಟನ್ ಪೋಸ್ಟ್, ನ್ಯೂಯಾರ್ಕ್ ಟೈಮ್ಸ್ ನಂತಹ ಕೆಲವು ಪತ್ರಿಕೆಗಳು. ಇವೇನೂ ಸಾಮಾನ್ಯದ ಪತ್ರಿಕೆಗಳಲ್ಲ. 1970ರಲ್ಲಿ ಅಂದಿನ ಅಮೆರಿಕದ ಅಂದಿನ ಅಧ್ಯಕ್ಷ ರಿಚರ್ಡ್ ನಿಕ್ಸನ್ ಅವರನ್ನು ಕೆಳಗಿಳಿಸಿದ್ದವು. ಅವು ಭೀಮಾ-ಕೋರೇಗಾಂವ್ ಪ್ರಕರಣದ ಆರೋಪಿಗಳ ಕಂಪ್ಯೂಟರ್‌ಗಳಲ್ಲಿ ಕೆಲವೊಂದು ಸುಳ್ಳು ದಾಖಲೆಗಳನ್ನು ಕಳ್ಳ ಮಾರ್ಗದಲ್ಲಿ ಅಳವಡಿಸಲಾಗಿತ್ತು ಎಂಬ ಸುದ್ದಿಯನ್ನು ಇತ್ತೀಚೆಗೆ ಪ್ರಕಟಿಸಿವೆ.

ಈ ಮೀಡಿಯಾ ವೈರಸ್‌ಗಳು ಎಷ್ಟು ಅಪಾಯಕಾರಿ ಎಂಬುದು ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಗೊತ್ತಿತ್ತು. ನಮ್ಮ ಪ್ರಧಾನಿಗಳೂ ಸಹ ಇಂತಹ ಅಪಾಯಗಳ ಬಗ್ಗೆ ಸದಾ ಜಾಗೃತರಾಗಿದ್ದಾರೆ. ಹಾಗಾಗಿ, ಇಂತಹ ಅಪಾಯಕಾರಿ "ಆಂದೋಲನಜೀವಿ" ಪರಾವಲಂಬಿಗಳು, ಖಲಿಸ್ತಾನಿಗಳು, ಸಿಎಎ-ವಿರೋಧಿ ವಿದ್ಯಾರ್ಥಿಗಳು, ತುಕ್ಡೆ ತುಕ್ಡೆ ಗ್ಯಾಂಗ್‌ನ ಸದಸ್ಯರು ಮತ್ತು ನಗರ ನಕ್ಸಲರ ಬಗ್ಗೆ ಜಾಗೃತರಾಗಿರುವಂತೆ ನಮ್ಮನ್ನು ಭಾವೋದ್ವೇಗದಿಂದ ಎಚ್ಚರಿಸಿದ್ದಾರೆ ನಮ್ಮ ಪ್ರಧಾನಿ. ರೈತ ಚಳುವಳಿಯ ಒಳಗೆ ನುಸುಳುತ್ತಿರುವ ಇವರೆಲ್ಲರೂ ದೇಶವಿರೋಧಿಗಳೇ. ಸಮಸ್ಯೆ ಎಷ್ಟು ವಿಚಿತ್ರವಾಗಿದೆ ಎಂದರೆ, ರೈತ ಚಳುವಳಿಯ ಒಳಗೆ ನುಸುಳುತ್ತಿರುವ ಈ ಎಲ್ಲ ವೈರಸ್‌ಗಳೂ ಸಹ ರೈತರಂತೆಯೇ ಆಗಿ ಬಿಟ್ಟಿವೆ. ಇವರೆಲ್ಲರೂ ದೇಶ ವಿರೋಧಿಯಲ್ಲದಿದ್ದರೂ, ಸರ್ಕಾರದ ವಿರೋಧಿಗಳೇ. ಸರ್ಕಾರದ ವಿರೋಧಿಗಳಲ್ಲದಿದ್ದರೆ ಸರ್ಕಾರದ ನೀತಿಗಳ ವಿರೋಧಿಗಳಂತೂ ಖರೆ. ಇಷ್ಟೆಲ್ಲಾ ನಮ್ಮೆದುರೇ ಜರುಗುತ್ತಿದ್ದರೂ ಸಹ, ನಾವು ರಾತ್ರಿ ಹೊತ್ತು ನೆಮ್ಮದಿಯಿಂದ ಮಲಗಬಹುದು, ಏಕೆಂದರೆ, ಒಬ್ಬ ಸಂವೇದನಾಶೀಲ ಮತ್ತು ರಾಜಿ ಮಾಡಿಕೊಳ್ಳದ ವ್ಯಕ್ತಿತ್ವದ ಮತ್ತು 56 ಇಂಚಿನ ಎದೆಯ ಒಬ್ಬ ಬಲಿಷ್ಠ ಪ್ರಧಾನಿಯಿಂದ ನಾವು ರಕ್ಷಿಸಲ್ಪಡುತ್ತಿದ್ದೇವೆ.

ದೆಹಲಿಯ ಗಡಿಭಾಗದಲ್ಲಿ ಜಮಾಯಿಸಿರುವ ರೈತರನ್ನು ಅಲುಗಾಡಿಸಲಾಗುತ್ತಿದೆ. ಒಂದು ಸಣ್ಣ ಅನುಮಾನದ ಮೇಲೂ ಅವರನ್ನು ಅರೆಸ್ಟ್ ಮಾಡಬಹುದು. ರೈತರು – ಗಂಡಸರು, ಮಹಿಳೆಯರು ಮತ್ತು ಮಕ್ಕಳು – ಆಕ್ರಮಣಕಾರಿ ಮನೋಭಾವದವರಲ್ಲ, ನಿಜ. ಆದರೆ, ಅವರು ಒಡ್ಡಿರುವ ಸವಾಲನ್ನು ಎದುರಿಸಲು ಪ್ರಧಾನ ಮಂತ್ರಿ ಮತ್ತು ಪ್ರಭುತ್ವದ ಇಡೀ ಶಕ್ತಿ ಸಿದ್ಧವಾಗಿವೆ. ರೈತರ ಬಳಿ ಇರುವ ಏಕೈಕ ಅಸ್ತ್ರ ವೆಂದರೆ ಟ್ರ್ಯಾಕ್ಟರ್‌ಗಳು ಮಾತ್ರ. ಈ ಅಸಮ ಬಲದ ಹೋರಾಟದಲ್ಲಿ ರೈತರು ಗೆಲ್ಲಲಾರರು. ಆದಾಗ್ಯೂ, ಈ ಯುದ್ಧದ ಫಲಿತಾಂಶವನ್ನು ಮೊದಲೇ ಹೇಳುವುದು ದಿನಗಳೆದಂತೆ ಕಷ್ಟವಾಗಿ ಪರಿಣಮಿಸುತ್ತಿದೆ. ರೈತರು ಮೊದಲೇ ಬೆಚ್ಚಿ ಬೀಳಿಸುವವರು, ಹಠವಾದಿಗಳು. ಧೃತಿಗೆಡದ ಸಂಕಲ್ಪ ಮಾಡಿರುವವರು. ಈ ಹೋರಾಟವನ್ನು ನಡೆಸಲು ಅವರು ಒಂದು ಅಸಂಗತ ಎಂದೇ ಹೇಳಬಹುದಾದ ಮಾರ್ಗವನ್ನು ಕಂಡುಕೊಂಡಿದ್ದಾರೆ. ಅವರು ದೆಹಲಿಗೆ ಬರಲು ಆಸಕ್ತಿ ತೋರುತ್ತಿಲ್ಲ. ಭಾವೋದ್ರೇಕದ ಅದ್ಭುತ ಭಾಷಣಗಳ ಬಗ್ಗೆ ಅಥವಾ ಪ್ರಧಾನ ಮಂತ್ರಿಯ 'ಮನ್ ಕಿ ಬಾತ್' ಭಾಷಣದ ಬಗ್ಗೆಯೂ ಆಸಕ್ತಿ ತೋರುತ್ತಿಲ್ಲ. ಸರ್ಕಾರ ಅವರೊಂದಿಗೆ ಮಾತುಕತೆ ನಡೆಸಲು ನಿಜವಾದ ಆಸಕ್ತಿ ತೋರದ ಹೊರತು ಸರ್ಕಾರದೊಂದಿಗೆ ಮಾತನಾಡುವ ಆಸಕ್ತಿಯನ್ನೂ ತೋರುತ್ತಿಲ್ಲ. ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆಯ ಬಗ್ಗೆ ಸಂಸತ್ತಿನಲ್ಲಿ ಪ್ರಧಾನಿ ನೀಡಿದ ಮೌಖಿಕ ಭರವಸೆಯ ಬಗ್ಗೆಯೂ ಅವರು ಆಸಕ್ತಿ ತೋರುತ್ತಿಲ್ಲ. ಅವರು ಆಸಕ್ತಿ ಮತ್ತು ಬಯಕೆ ಏನೆಂದರೆ, ಸಂಸತ್ತು ಅದಕ್ಕಾಗಿ ಅಂಗೀಕರಿಸಿದ ಒಂದು ಕಾನೂನು, ಅಷ್ಟೇ.

ಈ ಬಗ್ಗೆ ರೈತರು ಆತುರದಲ್ಲಿಲ್ಲ, ಆತಂಕದಲ್ಲಿಲ್ಲ ಎಂಬುದನ್ನು ಅರಿತ ಸರ್ಕಾರವೇ ಆತಂಕಿತವಾಗಿದೆ. ಪಂಜಾಬ್, ಹರಿಯಾಣ ಮತ್ತು ಪಶ್ಚಿಮ ಉತ್ತರ ಪ್ರದೇಶದಲ್ಲಿ ಮಾತ್ರವಲ್ಲ ಅಥವಾ ಸಿಖ್ ಮತ್ತು ಜಾಟ್ ಸಮುದಾಯದ ರೈತರು ಮಾತ್ರವಲ್ಲ, ಮಹಾರಾಷ್ಟ್ರ, ರಾಜಸ್ಥಾನ, ಬಿಹಾರ ಮತ್ತು ಮಧ್ಯಪ್ರದೇಶ ಸೇರಿದಂತೆ ಮಧ್ಯ ಭಾರತ ಮತ್ತು ಉತ್ತರ ಭಾರತದ ರೈತ ಸಮುದಾಯದ ಬೆಂಬಲವನ್ನು ಪಡೆಯುತ್ತಿದ್ದಾರೆ. ಜಾತಿ, ಧರ್ಮ, ವರ್ಗ ಮತ್ತು ಭಾಷಾ ಗಡಿಗಳನ್ನು ಮೀರಿದ ಮತ್ತು ಉತ್ಸಾಹದಿಂದ ಕೂಡಿದ ರೈತ-ಜನಸ್ತೋಮವನ್ನು ಮಹಾಪಂಚಾಯಿತಿಗಳು ಸೆಳೆಯುತ್ತಿವೆ. ಅಷ್ಟೊಂದು ಬೃಹತ್ ಸಂಖ್ಯೆಯಲ್ಲಿ ರೈತರು ಮಹಾಪಂಚಾಯಿತಿಗಳಲ್ಲಿ ಸೇರುತ್ತಿರುವುದು ಸರ್ಕಾರಕ್ಕೆ ಬರಲಿರುವ ಒಂದು ಕೇಡಿನ ಸ್ಪಷ್ಟ ಸೂಚನೆಯಾಗಿ ಕಾಣಿಸುತ್ತಿದೆ.

ಈ ಆಂದೋಲನವು ವಿಂಧ್ಯ ಪರ್ವತಗಳ ದಕ್ಷಿಣಕ್ಕಿರುವ ಆಂಧ್ರ, ತೆಲಂಗಾಣ, ಕರ್ನಾಟಕ, ತಮಿಳುನಾಡು ಮತ್ತು ಕೇರಳ ರಾಜ್ಯಗಳಲ್ಲಿ ದಿನದಿಂದ ದಿನಕ್ಕೆ ಹೊಸ ಚೈತನ್ಯ ಪಡೆಯುತ್ತಿದೆ. ಅಲ್ಲಿ ರೈತರು ಉತ್ಸಾಹಪೂರ್ಣ ಮೆರವಣಿಗೆ ನಡೆಸುತ್ತಿದ್ದಾರೆ. ಪೂರ್ವ ಭಾರತದಲ್ಲಿ ಚಳುವಳಿಯ ಕಾವು ಇದುವರೆಗೆ ಅಷ್ಟೊಂದು ಏರಿದಂತೆ ಕಾಣುತ್ತಿಲ್ಲವಾದರೂ, ರೈತ ಪ್ರತಿಭಟನೆಯ ಬೃಹತ್ ಅಲೆಗಳು ಒಮ್ಮೆ ಬಂಗಾಳ ಕೊಲ್ಲಿಯ ತೀರವನ್ನು ತಲುಪಿದವೆಂದರೆ, ಬಿಜೆಪಿಯ ಎಲ್ಲ ಕನಸುಗಳೂ ನುಚ್ಚು ನೂರಾಗುತ್ತವೆ. ಭಾರತದಲ್ಲಿ ಹಿಂದೆಂದೂ ಕಾಣದಷ್ಟು ಮಟ್ಟದ ಬಂಡಾಯವನ್ನು ರೈತರು ಹೂಡಿದ್ದಾರೆ. ದೆಹಲಿಯ ಗಡಿ ಭಾಗದಲ್ಲಿ ಜಮಾಯಿಸಿರುವ ರೈತರನ್ನು ಸುತ್ತುವರೆಯಬಹುದು ಎಂದು ಸರ್ಕಾರ ಬಗೆದಿತ್ತು, ಆದರೆ, ರೈತರು ತ್ವರಿತವಾಗಿ ಆ ಸರ್ಕಾರವನ್ನೇ ಸುತ್ತುವರೆದಿದ್ದಾರೆ.

ಒಂದು ಅಸಾಧಾರಣ ಸಂದರ್ಭ ಎದುರಾದಾಗ, ಸಣ್ಣ ಪುಟ್ಟ ಚುನಾವಣಾ ಲೆಕ್ಕಾಚಾರಗಳನ್ನು ಮೀರಿ, ಎದುರಾದ ಸಂದರ್ಭಕ್ಕೆ ತಕ್ಕಂತೆ ರಾಜಕೀಯ ಪಕ್ಷಗಳು ಒಂದು ಸಂಯುಕ್ತ ಶಕ್ತಿಯಾಗಿ ಆವಿರ್ಭವಿಸಿ, ಮೂರು ವಿವಾದಾತ್ಮಕ ಕೃಷಿ ಕಾನೂನುಗಳನ್ನು ಮಾತ್ರವಲ್ಲದೆ ಅದರ ನಿರ್ಮಾತೃಗಳನ್ನೂ ರೈತರ ಬಂಡಾಯದ ಬಲದೊಂದಿಗೆ ಮುಳುಗಿಸಲು ಎದ್ದು ನಿಲ್ಲುವ ಸಾಮರ್ಥ್ಯ ಹೊಂದಿವೆಯೇ ಎಂಬುದು ಪರೀಕ್ಷೆಗೆ ಒಳಗಾಗಿದೆ.

ಕೊವಿದ್ ವಿರುದ್ಧ ಸೆಣಸಾಟ–ಸಮತೆಯ..........

ಪುಟ 8 ರಿಂದ

ಭಾರತ ಜನವಾದಿ ಮಹಿಳಾ ಸಂಘಟನೆಯ ಇಂದಿನ ರಾಷ್ಟ್ರಾಧ್ಯಕ್ಷರಾದ ಪ್ರೊ.ಮಾಲಿನಿ ಭಟ್ಟಾಚಾರ್ಯರ ನೇತೃತ್ವದಲ್ಲಿ ಈ ಕರಡು ಸಿದ್ಧಗೊಂಡಿತ್ತು. ಈ ಸಮಿತಿಯಲ್ಲಿ ಸಂಶೋಧಕರು, ತಜ್ಞರು, ಕೃಷಿ ಮತ್ತು ಕೃಷಿ ಸಂಬಂಧಿತ ಕ್ಷೇತ್ರಗಳಲ್ಲಿ ನಿರಂತರವಾಗಿ ಕೆಲಸ ಮಾಡುತ್ತಿರುವ ಸಾಮಾಜಿಕ ಕ್ಷೇತ್ರದ ಕಾರ್ಯಕರ್ತರು ಇದ್ದರು. ಇವರೆಲ್ಲರ ಪ್ರಯತ್ನದಿಂದ ಮಹಿಳೆಯರನ್ನು ರೈತರೆಂದು, ಶ್ರಮಿಕರೆಂದು ಗುರುತಿಸುವ, ಭೂಮಿ ಹಾಗೂ ನೈಸರ್ಗಿಕ ಸಂಪನ್ಮೂಲಗಳಿಗೆ ಹಕ್ಕುದಾರರನ್ನಾಗಿಸುವ, ಆಹಾರ ಹಾಗೂ ಆಹಾರದ ಭದ್ರತೆಯ ಹಕ್ಕು ನೀಡುವ, ಬದುಕುವ ಹಾಗೂ ಘನತೆಯ ಕೆಲಸದ ಹಕ್ಕು ಪಡೆಯುವ, ಸಾಲದಿಂದ ಮುಕ್ತಿ ಮತ್ತು ನಿಯಂತ್ರಿತ ಮಾರುಕಟ್ಟೆಯ ಹಕ್ಕು, ನ್ಯಾಯಯುತ ಬೆಲೆ ಪಡೆಯುವ ಹಕ್ಕು – ಇವೆಲ್ಲವನ್ನೂ ಕೃಷಿ ಕ್ಷೇತ್ರದಲ್ಲಿ ತೊಡಗಿರುವ ಮಹಿಳೆಯರಿಗೂ ಲಭ್ಯಗೊಳಿಸಬೇಕೆಂದು ಪ್ರಸ್ತಾಪ ಸಲ್ಲಿಸಲಾಗಿತ್ತು. ಆದರೆ ಅಂದಿನ ಯು.ಪಿ.ಎ ಅಥವಾ ನಂತರ ಬಂದ ಬಾಯಿಬಡುಕ, ಘೋಷಣಾ ಪ್ರವೀಣ ಎನ್.ಡಿ.ಎ ಸರಕಾರಗಳಾಗಲೀ ಅತ್ತ ಕಣ್ಣೆತ್ತಿಯೂ ನೋಡಿಲ್ಲ. ಆ ಕಾರಣದಿಂದಾಗಿ ಇಂದು ಕೂಡಾ ಕೃಷಿಯ ಬಹುತೇಕ ಕೆಲಸವನ್ನು ಮಹಿಳೆಯರೇ ಮಾಡುತ್ತಿದ್ದಾಗ್ಯೂ, ಹಾಗೂ ಕೊರೆಯುವ ಛಳಿಯಲ್ಲಿ, ಸುರಿಯುವ ಮಳೆಯಲ್ಲಿ ನನ್ನ ನೆಲ ನನ್ನ ಹೊಲ, ನನ್ನ ಬೆಳೆ; ನನ್ನ ಬದುಕು ಕಾರ್ಪೊರೇಟ್ ವಶ ಮಾಡಲು ನಿಮಗೆ ಅಧಿಕಾರ ಕೊಟ್ಟಿಲ್ಲ ಎಂದು ಜಪ್ಪಿಸಿ ಮಹಿಳೆಯರು ಬಂದು ಕುಳಿತರು. ಆದರೆ ದೇಶದ ಸರ್ವೋಚ್ಚ ನ್ಯಾಯಾಲಯವೂ ತಾನು ತಿನ್ನುವ ಅನ್ನವನ್ನು ಮರೆತು ಮಹಿಳೆಯರೇಕೆ ಅಲ್ಲಿ ಕುಳಿತುಕೊಳ್ಳಬೇಕು ಎನ್ನುವ ಪ್ರಶ್ನೆ ಕೇಳುವ ಸ್ಥಿತಿ ಇದೆ.

ಸಮತೆಯ ತಲೆಮಾರಿನ ಸೃಷ್ಟಿಗೆ ಸಮಾಜವನ್ನು ಸಜ್ಜುಗೊಳಿಸಬೇಕಿದೆ

ಆದರೆ ನಾವು ಇತಿಹಾಸ ಸೃಷ್ಟಿಸಿದವರು. ಶತಮಾನದ ಹಿಂದೆಯೇ ಅತಿಮಾನವರಂತೆ ವರ್ತಿಸಿದವರಿಗೆ ಪ್ರತಿಭಟನೆಯ ಮೂಲಕ ಬಿಸಿ ಹತ್ತಿಸಿದವರು. ವಿಶ್ವವೇ ಒಪ್ಪಿಕೊಂಡ ಇತಿಹಾಸವನ್ನು 1857ರಲ್ಲಿಯೇ ಬರೆದವರು.

ಹೋರಾಟದ ದಾರಿಯಲ್ಲಿ ನಂಬಿಕೆ ಇಟ್ಟು ಪ್ರತಿಭಟನೆಯ ಹಕ್ಕನ್ನು ನೀಡಿದ ಸಂವಿಧಾನದ ಬೆಳಕಿನಲ್ಲಿ ಜನ ವಿರೋಧೀ ಕೃಷಿ, ಕಾರ್ಮಿಕ ಕಾಯ್ದೆಗಳ ವಿರುದ್ಧ ದಣಿವರಿಯದ ಹೋರಾಟಕ್ಕೆ ದುಡಿಯುವ ವರ್ಗ ಇಳಿದಿದೆ. ಸಂಘರ್ಷದ ರಣ ಕಹಳೆ ದೇಶದಾದ್ಯಂತ ಮೊಳಗಿದೆ. ಶ್ರಮಿಕರಿಗೆ ಕಳೆದುಕೊಳ್ಳಲಿರುವುದು ದಾಸ್ಯದ ಶ್ರಂಖಲೆ ಮಾತ್ರ. ಚರಿತ್ರೆ ಪುನರಾವರ್ತನೆಯಾಗುವುದು ಎಂಬ ನಾಣ್ನುಡಿ ಶ್ರಮಜೀವಿಗಳ ಸಂಘರ್ಷದ ವಿಷಯದಲ್ಲಿ ಸುಳ್ಳಾಗುವುದಿಲ್ಲ.

ಇದರ ಜೊತೆಯೇ ಗಾರ್ಮೆಂಟ್ ಮಹಿಳೆಯರೂ ಸೇರಿದಂತೆ ಅಸಂಘಟಿತ ವಲಯದ ಎಲ್ಲ ಕಾರ್ಮಿಕರು ಸರಕಾರದ ಕ್ರೂರ ಕೈಗಾರಿಕಾ ನೀತಿಯ ಬಲಿಪಶುಗಳಾಗುತ್ತಿದ್ದಾರೆ. ಯೋಜನಾ ಕಾರ್ಮಿಕರನ್ನು ಜೀತದಾಳುಗಳಾಗಿ ದುಡಿಸಿಕೊಳ್ಳುತ್ತಿರುವ ಸರಕಾರಗಳು ಕೊವಿಡ್ ವೈರಾಣುವಿನೆದುರು ಬರಿಗೈಯಲ್ಲಿ ಅವರನ್ನು ಸೆಣಸಲು ಬಿಟ್ಟಿದೆ. ಬಾಹ್ಯೋಪಚಾರದ ಮುಂಚೂಣಿ ಸೇನಾನಿಗಳೆಂಬ ಬಿರುದು ಬಾವಲಿಗಳನ್ನು ಕೊಟ್ಟು ಜೀವ ಬಲಿತೆಗೆದುಕೊಂಡ ರಾಕ್ಷಸೀ ಪ್ರವೃತ್ತಿಯನ್ನೂ ಕಂಡಿದ್ದೇವೆ.

ನಾವು ಬೆವರನು ಸುರಿಸಿ ದುಡಿಯುವ ಜನ ನಮ್ಮ ಬೆವರಿನ ಪಾಲನು ಕೇಳುವೆವು. ಸಂಘರ್ಷದ ದಾರಿಯಲ್ಲಿ ನಡೆಯುವಾಗ ಕಲ್ಲು ಮುಳ್ಳುಗಳು. ಲಾಠಿ ಬೂಟುಗಳು ನಮಗೆ ಹೂ ಹಾಸಿಗೆಯಂತೆ. ವಾಟರ್ ಜೆಟ್ ಗಳು ಮೇಘಮಲ್ಹಾರದಂತೆ. ಕಾಮ್ರೆಡ್ ಕ್ಲಾರಾಗೊಂದು ಲಾಲ್ ಸಲಾಂ. ಹತ್ತಿ ಗಿರಣಿಯ ಹುತಾತ್ಮ ಸೋದರಿಯರೇ, ನೀವು ಚಿರಾಯುಗಳು. ಹೋರಾಟದ ದಾರಿಯಲ್ಲಿ ನಮಗೆ ನಿಮ್ಮ ಹೆಜ್ಜೆ ಗುರುತುಗಳಿವೆ. ಸಮತೆಯ ತಲೆಮಾರಿನ ಸೃಷ್ಟಿಗೆ ಸಮಾಜವನ್ನು ಸಜ್ಜುಗೊಳಿಸಬೇಕಿದೆ.

ಕೇಂದ್ರ ಬಜೆಟ್ 2021–22: ಕಾಣೆಯಾದ......

ಪುಟ 6 ರಿಂದ

ನರ್ಸಿಂಗ್ ವೃತ್ತಿಯಲ್ಲಿ ಪಾರದರ್ಶಕತೆ, ದಕ್ಷತೆ ಹಾಗೂ ಆಡಳಿತ ಸುಧಾರಣೆ ಉತ್ತೇಜನಕ್ಕೆ ಇದು ಅನುವು ಮಾಡಿಕೊಡುತ್ತದೆ. ಆತ್ಮ ನಿರ್ಭರ ಭಾರತದ 6 ಪ್ರಮುಖ ಸ್ತಂಭಗಳಲ್ಲಿ 'ಆರೋಗ್ಯ ಹಾಗೂ ಯೋಗಕ್ಷೇಮ'ವೂ ಒಂದಾಗಿದೆ ಎಂಬುದನ್ನು ಗಮನಿಸಬೇಕು. 'ಸ್ವಚ್ಛ ಭಾರತ, ಸ್ವಸ್ಥ ಭಾರತ'ದ ಆದ್ಯತೆ ಎಂದರೆ ನಗರ ಪ್ರದೇಶಗಳಲ್ಲಿ ಕಸದ ಸೂಕ್ತ ನಿರ್ವಹಣೆ ಹಾಗೂ ಶುದ್ಧ ಗಾಳಿ. ಇವೆರಡೂ ಬಹು ಮುಖ್ಯ ಎಂಬುದು ನಿಜ. ಆದರೆ ಸಾರ್ವಜನಿಕ ಸ್ವಚ್ಛ ಶೌಚಾಲಯಗಳೂ ಮನೆಯಿಂದ ಹೊರ ಬರುವ ಮಹಿಳೆಯರಿಗೆ ಮೂಲಭೂತವಾದದ್ದು ಎಂಬುದನ್ನೂ ನಾವು ಮರೆಯಬಾರದು.


ಜೆಂಡರ್ ಸ್ಪಂದನಶೀಲ ಬಜೆಟ್ (ಜಿ.ಆರ್.ಬಿ) ಎಂದರೆ, ವಿವಿಧ ವಲಯಗಳಿಗೆ ಬರೀ ಹಣ ಹಂಚಿಕೆ ಮಾಡುವಂತಹದ್ದಲ್ಲ. ಜೆಂಡರ್ ಕಣ್ಣಿನಿಂದ ಅಥವಾ ಹೆಣ್ಣು ನೋಟದಿಂದ ಇಡೀ ಬಜೆಟ್ ಅನ್ನು ಪರಿಶೀಲಿಸುವ ಕಸರತ್ತು ಇಲ್ಲಿರಬೇಕು.

ಮಹಿಳೆ ಹಾಗೂ ಪುರುಷನ ಮೇಲೆ ರಾಷ್ಟ್ರೀಯ ಬಜೆಟ್‌ಗಳು ಭಿನ್ನವಾಗಿ ಪರಿಣಾಮ ಬೀರುತ್ತವೆ ಹಾಗೂ ಇವು ಪಿತೃಪ್ರಧಾನ ಸಾಮಾಜಿಕ ಮೌಲ್ಯಗಳು ಹಾಗೂ ಪೂರ್ವಗ್ರಹಗಳನ್ನು ಪುಷ್ಟೀಕರಿಸಬಹುದು ಎಂಬ ಗ್ರಹಿಕೆಯನ್ನು ಆಧರಿಸಿ ಜಿ.ಆರ್.ಬಿ ಪರಿಕಲ್ಪನೆ ಸೃಷ್ಟಿಯಾಯಿತು ಎಂಬುದು ನಮಗೆ ನೆನಪಿರಬೇಕು. 2005–06ರಿಂದ ಜೆಂಡರ್ ಬಜೆಟಿಂಗ್ ಆರಂಭವಾಯಿತು. 2019 ರ ಬಜೆಟ್ ಭಾಷಣದಲ್ಲಿ ಸಚಿವೆ ನಿರ್ಮಲಾ ಸೀತಾರಾಮನ್ ಅವರು ನಾರಿಯನ್ನು ನಾರಾಯಣಿ ಎಂದು ಬಣ್ಣಿಸಿ, 15 ವರ್ಷಗಳ ಜೆಂಡರ್ ಬಜೆಟಿಂಗ್ ನ ಮೌಲ್ಯ ಮಾಪನಕ್ಕೆ ಸಮಿತಿಯೊಂದನ್ನು ರಚಿಸುವುದಾಗಿ ಪ್ರಕಟಿಸಿದ್ದರು. ಈ ಸಮಿತಿ ಈಗ ಜೆಂಡರ್ ಬಜೆಟಿಂಗ್ ಸುಧಾರಿಸಲು ಶಿಫಾರಸುಗಳ ವರದಿಯನ್ನು ಸಲ್ಲಿಸಿದೆ ಎನ್ನಲಾಗಿದ್ದು ಈ ಬಗ್ಗೆ ಹೆಚ್ಚಿನ ವಿವರಗಳು ಪ್ರಕಟವಾಗಿಲ್ಲ. ಈ ಶಿಫಾರಸುಗಳು ಜೆಂಡರ್ ಬಜೆಟಿಂಗ್ ಪ್ರಕ್ರಿಯೆಯಲ್ಲಿ ಹೆಚ್ಚಿನ ಸೂಕ್ಷ್ಮತೆ ತರಬಹುದೇ? ಕಾಯೋಣ.

ಚೀಫ್ ಜಸ್ಟಿಸ್ ಸರ್!..

ಪುಟ 12 ರಿಂದ

ಹೋರಾಟಕ್ಕೆ ಹಿನ್ನಡೆ ಉಂಟು ಮಾಡುವಂತವುಗಳು ಎಂದು, ಅತ್ಯಾಚಾರಗಳಿಗೆ ಬಲಿಯಾದವರು ಮತ್ತು ಮತ್ತು ಅವರ ಹಕ್ಕುಗಳನ್ನು ಕುರಿತಂತೆ ಕಾನೂನುಗಳು ಮತ್ತು ಕಣ್ಣೋಟಗಳಲ್ಲಿ ಬದಲಾವಣೆಗಾಗಿ ಸಂಸತ್ತಿನ ಒಳಗೂ ಮತ್ತು ಹೊರಗೂ ನಡೆಯುತ್ತಿರುವ ಮಹಿಳಾ ಆಂದೋಲನಗಳ ಭಾಗವಾಗಿರುವ ನಾನು ನಂಬಿದ್ದೇನೆ" ಎನ್ನುತ್ತ ಬೃಂದಾ ಕಾರಟ್ ಅವರು ತನ್ನ ಪತ್ರವನ್ನು ಈ "ಟಿಪ್ಪಣಿಗಳನ್ನು ಮತ್ತು ನಿರ್ಧಾರಗಳನ್ನು ಹಿಂತೆಗೆದುಕೊಳ್ಳಬೇಕೆಂಬ ಒಂದು ಕೋರಿಕೆ ಎಂಬುದಾಗಿ ಪರಿಗಣಿಸಬೇಕು" ಎಂದು ಮನವಿ ಮಾಡಿಕೊಳ್ಳುತ್ತ ದೇಶದ ಸರ್ವೋಚ್ಚ ನ್ಯಾಯಾಲಯದ ಅಧಿಕಾರ ಮತ್ತು ಶಕ್ತಿಯನ್ನು ಲೈಂಗಿಕ ದಾಳಿಗೆ ಒಳಗಾಗಿರುವವರಿಗೆ, ಅದರಲ್ಲೂ ವಿಶೇಷವಾಗಿ ಸಂತ್ರಸ್ತೆಯರು ಅಪ್ರಾಪ್ತವಯಸ್ಕರಾಗಿದ್ದಾಗ, ನೆರವಾಗಲು ಬಳಸಲಾಗವುದೇ ಹೊರತು, ದಾಳಿಮಾಡಿದವರಿಗಲ್ಲ ಎಂದು ಮಹಿಳೆಯರು ಆಶಿಸುತ್ತಾರೆ ಎಂದು ದೇಶದ ಮುಖ್ಯ ನ್ಯಾಯಾಧೀಶರಿಗೆ ಹೇಳಿದ್ದಾರೆ.



ವ್ಯಂಗ್ಯಚಿತ್ರ: ಆರ್. ಪ್ರಸಾದ್, ಇಕನಾಮಿಕ್ ಟೈಮ್ಸ್

ಪುಟ 11 ರಿಂದ

ಕಾರ್ಮಿಕ ಆಂದೋಲನದಲ್ಲಿ ಮಾರ್ಕ್ಸ್‌ವಾದಿ ಚಿಂತನೆಯ ಆರಂಭ

ರಾಜಕೀಯ ಹೋರಾಟದ ವಿಸ್ತಾರ ಮತ್ತು ದೇಶದಲ್ಲಿ ಕಾರ್ಮಿಕ–ವರ್ಗದ ತತ್ವಶಾಸ್ತ್ರದ ತ್ವರಿತ ಪ್ರಸರಣಕ್ಕೆ ಕಾರಣವಾಯಿತು.

ಸಮಾಜವಾದಕ್ಕೆ ಬದ್ಧರಾಗಿದ್ದವರು ಅಥವಾ ಕಾಂಗ್ರೆಸ್‌ನಲ್ಲಿ ಅಥವಾ ಹೊರಗೆ ಎಡಪಂಥೀಯ ಒಲವು ಹೊಂದಿದ್ದವರು ಮತ್ತು ಟ್ರೇಡ್ ಯೂನಿಯನ್ ಚಳವಳಿಯಲ್ಲಿ ಸಮರಶೀಲ ದೃಷ್ಟಿಕೋನ ಹೊಂದಿದ್ದವರು ಹತ್ತಿರ ಬಂದು ಕಾರ್ಮಿಕ ವರ್ಗದ ರಾಜಕೀಯ ಸಂಘಟನೆಗಳ ಪ್ರಾಥಮಿಕ ರೂಪಗಳು ಹೊರಬರಲು ಪ್ರಾರಂಭಿಸಿದವು. ವರ್ಕರ್ಸ್ ಅಂಡ್ ಪೀಸಂಟ್ಸ್ ಪಾರ್ಟಿ(ಕಾರ್ಮಿಕ–ರೈತರ ಪಕ್ಷ) ಎಂಬ ಹೆಸರನ್ನು ಹೊಂದಿದ್ದ ಈ ಸಂಸ್ಥೆಗಳು ದೇಶದ ವಿವಿಧ ಭಾಗಗಳಲ್ಲಿ ಅಸ್ತಿತ್ವಕ್ಕೆ ಬಂದವು. ಅಪೂರ್ಣತೆಗಳು ಮತ್ತು ರಾಜಕೀಯ ಅಸ್ಪಷ್ಟತೆಯ ಹೊರತಾಗಿಯೂ, ಇದು ಹೊಸ ರಾಜಕೀಯ ಶಕ್ತಿಗಳ ಪ್ರಗತಿಯನ್ನು ಮತ್ತು ಭಾರತದ ಕಾರ್ಮಿಕ ವರ್ಗದ ರಾಜಕೀಯ ಜಾಗೃತಿಯನ್ನು ನರೂಪಿಸಿತು.

1919 ರಲ್ಲಿ ಲೆನಿನ್ ಅವರು ಕಮ್ಯುನಿಸ್ಟ್ ಇಂಟರ್ನ್ಯಾಷನಲ್ (ಥರ್ಡ್ ಇಂಟರ್ನ್ಯಾಷನಲ್) ಸ್ಥಾಪಿಸಿದ ನಂತರ, ಈ ಅಂತರರಾಷ್ಟ್ರೀಯದ ಮೂರನೇ ಅಧಿವೇಶನ ಜೂನ್ 1921 ರಲ್ಲಿ ಮಾಸ್ಕೋದಲ್ಲಿ ನಡೆಯಿತು. ಕಾರ್ಮಿಕ ವರ್ಗದ ವಿಶ್ವವ್ಯಾಪಿ ಕ್ರಾಂತಿಕಾರಿ ಹೋರಾಟದ ಸಂಘಟನೆಗೆ ಈ ಅಧಿವೇಶನ ಅಪಾರ ಕೊಡುಗೆ ನೀಡಿತು.

ವಿಶ್ವ ಸಾಮ್ರಾಜ್ಯಶಾಹಿಯ ಸಶಸ್ತ್ರ ಹಸ್ತಕ್ಷೇಪವನ್ನು ಯಶಸ್ವಿಯಾಗಿ ಸೋಲಿಸಿ, ಸೋವಿಯತ್ ರಷ್ಯಾ ಆ ಕ್ಷಣದಲ್ಲಿ ತ್ವರಿತಗತಿಯಲ್ಲಿ ಸಾಗಿದ್ದು, ಒಂದು ಕಡೆ ಬಂಡವಾಳಶಾಹಿಯ ಕುಸಿತದ ಐತಿಹಾಸಿಕ ಅನಿವಾರ್ಯತೆ ಮತ್ತು ಇನ್ನೊಂದೆಡೆ ಹೊಸ ಸಮಾಜವಾದಿ ವ್ಯವಸ್ಥೆಯ ತಡೆಯಲಾಗದ ಪ್ರಗತಿಯನ್ನು ದೃಢಪಡಿಸಿತು. ವಿಶ್ವ ಸಮಾಜವಾದಿ ಕ್ರಾಂತಿಯ ಕೋಟೆಯಾಗಿ ನಿಂತ ಸೋವಿಯತ್ ರಷ್ಯಾ ಸಾಮ್ರಾಜ್ಯಶಾಹಿ ದೇಶಗಳ ದುಡಿಯುವ ಜನಸಮೂಹವನ್ನು ಮತ್ತು ವಸಾಹತುಗಳ ತುಳಿತಕ್ಕೊಳಗಾದ ಜನರನ್ನು ಕ್ರಾಂತಿಕಾರಿ ಹೋರಾಟಗಳಲ್ಲಿ ಮುನ್ನಡೆಯಲು ಪ್ರೋತ್ಸಾಹಿಸಿತು.

ವಿಶ್ವ ಕ್ರಾಂತಿಕಾರಿ ಪ್ರಕ್ರಿಯೆಯನ್ನು ಕುಂಠಿತಗೊಳಿಸಿದರೂ, ಅದನ್ನು ತಡೆಯಲು ಬೂರ್ಜ್ವಾಗಳು ಮತ್ತು ಸುಧಾರಣಾವಾದಿಗಳು ಶಕ್ತಿಹೀನರಾಗಿದ್ದರು. ಬಂಡವಾಳಶಾಹಿಯ ಸಾರ್ವತ್ರಿಕ ಬಿಕ್ಕಟ್ಟು ಮತ್ತಷ್ಟು ತೀವ್ರಗೊಂಡಿತು ಮತ್ತು ವಾಸ್ತವ ಪರಿಸ್ಥಿತಿಯು ಕ್ರಾಂತಿಕಾರಿಯಾಗಿಯೇ ಉಳಿಯಿತು.

ಈ ವಿಶ್ವ ಪರಿಸ್ಥಿತಿಯ ಮಧ್ಯೆ ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್‌ನ ಮೂರನೇ ಅಧಿವೇಶನ ಕಾರ್ಮಿಕ ವರ್ಗದ ನಡುವೆ ಕಾರ್ಮಿಕ ಸಂಘಗಳ ಮತ್ತು ಕಮ್ಯುನಿಸ್ಟರ ಕಾರ್ಯಭಾರಗಳ ಬಗ್ಗೆ ಚರ್ಚಿಸಿತು. ಸುಧಾರಣಾವಾದಿಗಳು ಮುಂದಿಟ್ಟ, ರಾಜಕೀಯ ಹೋರಾಟದಲ್ಲಿ ಟ್ರೇಡ್ ಯೂನಯನ್ ತಟಸ್ಥತೆಯ ಕಲ್ಪನೆಯನ್ನು ಅಧಿವೇಶನ ಬಲವಾಗಿ ವಿರೋಧಿಸಿತು.

ಜುಲೈ 3 ರಿಂದ ಜುಲೈ 19, 1921 ರವರೆಗೆ ಮಾಸ್ಕೋದಲ್ಲಿ ಕ್ರಾಂತಿಕಾರಿ ಕಾರ್ಮಿಕ ಮತ್ತು ಕೈಗಾರಿಕಾವಾರು ಕಾರ್ಮಿಕ ಸಂಘಗಳ ಮೊದಲ ಅಂತರರಾಷ್ಟ್ರೀಯ ಸಭೆ ನಡೆಯಿತು. ಈ ಹೊತ್ತಿಗೆ ಕ್ರಾಂತಿಕಾರಿ ಕಾರ್ಮಿಕ ಸಂಘಗಳು ಹಲವಾರು ದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದವು ಮತ್ತು ಕಾರ್ಮಿಕ ಸಂಘಗಳ ಅಧಿವೇಶನ ಒಂದು ಏಕೀಕೃತ ಸಮರಶೀಲ ಸಂಘಟನೆಯನ್ನು, ಒಂದೇ ಅಂತರರಾಷ್ಟ್ರೀಯ ಪ್ರಧಾನ ಕೇಂದ್ರ ರೆಡ್ ಟ್ರೇಡ್ ಯೂನಿಯನ್ ಇಂಟರ್ನ್ಯಾಷನಲ್ (ಪ್ರೊಫ್ಯೆಂಟರ್ನ್). ಸ್ಥಾಪಿಸಲು ನಿರ್ಧರಿಸಿತು. ಅದೇ ಸಮಯದಲ್ಲಿ ಅಧಿವೇಶನ ಕ್ರಾಂತಿಕಾರಿ ಕಾರ್ಮಿಕರಿಗೆ ಸುಧಾರಣಾವಾದಿ ಸಂಘಗಳನ್ನು ತ್ಯಜಿಸದೆ ಮತ್ತು ಪ್ರತ್ಯೇಕ, ಟ್ರೇಡ್ ಯೂನಿಯನ್ ಗುಂಪುಗಳನ್ನು ರಚಿಸದೆ, ಅವುಗಳನ್ನು ವಶಪಡಿಸಿಕೊಳ್ಳುವಂತೆ ನಿರ್ದೇಶಿಸಿತು.

ಬಂಡವಾಳಶಾಹಿ ಮತ್ತು ಫ್ಯಾಸಿಸಂನ ಆಕ್ರಮಣಗಳ ವಿರುದ್ಧ ಮತ್ತು ಸಾಮ್ರಾಜ್ಯಶಾಹಿ ಯುದ್ಧದ ಅಪಾಯದ ವಿರುದ್ಧ ಕ್ರಾಂತಿಕಾರಿ ಹೋರಾಟದ ಆಧಾರದ ಮೇಲೆ ಟ್ರೇಡ್ ಯೂನಿಯನ್ ಚಳುವಳಿಯನ್ನು ಏಕೀಕರಿಸುವ ವಿಚಾರಗಳನ್ನು ಅಧಿವೇಶನ ಸಕ್ರಿಯವಾಗಿ ಬೆಂಬಲಿಸಿತು.


ಕ್ರಾಂತಿಕಾರಿ ಕಾರ್ಮಿಕ ಸಂಘಗಳ ಪ್ರತ್ಯೇಕ ಅಂತರರಾಷ್ಟ್ರೀಯ ಕೇಂದ್ರವನ್ನು ಸ್ಥಾಪಿಸುವುದರ ಜೊತೆಗೆ, ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಆಂದೋಲನವು ವಿಶ್ವ ಕಾರ್ಮಿಕ ಸಂಘ ಚಳವಳಿಯ ಏಕತೆಗೆ ಹೆಚ್ಚು ಉತ್ಸುಕವಾಗಿತ್ತು. ಟ್ರೇಡ್ ಯೂನಿಯನ್ ಚಳವಳಿಯ ಏಕತೆಗಾಗಿ ಹೋರಾಟ ಜನಸಮೂಹವನ್ನು ಆಕರ್ಷಿಸುವ ಅತ್ಯುತ್ತಮ ವಿಧಾನ ಮತ್ತು ಮಾರ್ಗ ಎಂದಿತು.

ಜುಲೈ 1924 ರಲ್ಲಿ ಮಾಸ್ಕೋದಲ್ಲಿ ನಡೆದ ಪ್ರೊಫಿಂಟರ್ನ್‌ನ ನಾಲ್ಕನೇ ಅಧಿವೇಶನ, ಕಾರ್ಮಿಕ ಸಂಘಗಳ ಏಕತೆಯ ಅಂತರರಾಷ್ಟ್ರೀಯದ ಘೋಷಣೆಯನ್ನು ಮತ್ತಷ್ಟು ದೃಢಪಡಿಸಿತು ಮತ್ತು ಆಮ್‌ಸ್ಟರ್‌ಡ್ಯಾಮ್ ಇಂಟರ್ನ್ಯಾಷನಲ್ ಮತ್ತು ಜನರಲ್ ಕೌನ್ಸಿಲ್ ಆಫ್ ಬ್ರಿಟಿಷ್ ಟ್ರೇಡ್ ಯೂನಿಯನ್‌ಗಳೊಂದಿಗೆ ಮಾತುಕತೆಗಳನ್ನು ಪ್ರಾರಂಭಿಸಲು ನಿರ್ಧರಿಸಿತು, ಅವುಗಳಲ್ಲಿನ ಎಡಪಂಥೀಯರು ಕಾರ್ಮಿಕ ಸಂಘಗಳ ಚಳವಳಿಯ ಏಕತೆಗೆ ಒಲವು ತೋರಿಸಿದರು.

ಈ ಸಮಯದಲ್ಲಾಗಲೇ, ಇಟಲಿಯಲ್ಲಿ ಫ್ಯಾಸಿಸಂ, ಕಾರ್ಮಿಕ ವರ್ಗದ ಕ್ರಾಂತಿಕಾರಿ ಚಳವಳಿಗೆ ಗಂಭೀರ ಅಪಾಯವಾಗಿ ಮೂಡಿಬಂದಿತ್ತು. ಆದ್ದರಿಂದ ಅಧಿವೇಶನ ಇಟಲಿಯಲ್ಲಿ ಫ್ಯಾಸಿಸಂ– ವಿರೋಧಿ ಚಳವಳಿಯ ಗುರಿಗಳ ಬಗ್ಗೆ ಚರ್ಚಿಸಿತು ಮತ್ತು ಫ್ಯಾಸಿಸಂ ವಿರುದ್ಧದ ಹೋರಾಟದ ಫಲಿತಾಂಶವು ವಿಶಾಲ ಜನಸಮೂಹದ, ಮುಖ್ಯವಾಗಿ ಇಡೀ ಕಾರ್ಮಿಕ ವರ್ಗ ಮತ್ತು ಕಮ್ಯುನಿಸ್ಟ್ ಪಕ್ಷದ ಚಟುವಟಿಕೆಯ ಮಟ್ಟವನ್ನು ಅವಲಂಬಿಸಿದೆ ಎಂದು ಒತ್ತುಕೊಟ್ಟು ಹೇಳಿತು.

ಕಾರ್ಮಿಕ ವರ್ಗದ ಐಕ್ಯ–ವೇದಿಕೆ(ಯುನೈಟೆಡ್–ಫ್ರಂಟ್) ತಂತ್ರಗಳು ಮತ್ತು ಫ್ಯಾಸಿಸಂ ವಿರುದ್ಧದ ಹೋರಾಟದ ವಿಧಾನವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ರೂಪಿಸಿ ಕಾರ್ಯಗತಗೊಳಿಸಲಾಗುತಿದ್ದಾಗ, ರಾಷ್ಟ್ರೀಯ ವಿಮೋಚನಾ ಚಳವಳಿಯ ಉತ್ಕರ್ಷವು ಸಾಮ್ರಾಜ್ಯಶಾಹಿ ವಿರೋಧಿ ಶಕ್ತಿಗಳನ್ನು ಹೆಚ್ಚಿನ ಚಟುವಟಿಕೆಗೆ ಪ್ರೇರೇಪಿಸಿತು. ಫೆಬ್ರವರಿ 1926 ರಲ್ಲಿ ಬರ್ಲಿನ್‌ನಲ್ಲಿ ಹಲವಾರು ಸಾಮ್ರಾಜ್ಯಶಾಹಿ–ವಿರೋಧಿ ಸಂಘಟನೆಗಳ ಪ್ರತಿನಿಧಿಗಳು ಭೇಟಿಯಾಗಿ ವಸಾಹತುಶಾಹಿ ದಬ್ಬಾಳಿಕೆಯ ವಿರುದ್ಧ ಲೀಗ್ ಅನ್ನು ರಚಿಸಿದರು

ಅದರಂತೆ, ವಸಾಹತುಶಾಹಿ ದಬ್ಬಾಳಿಕೆ ಮತ್ತು ಸಾಮ್ರಾಜ್ಯಶಾಹಿಯ ವಿರುದ್ಧದ ವಿಶ್ವ ಅಧಿವೇಶನ 10 ಫೆಬ್ರವರಿ 1927 ರಂದು ಬ್ರಸೆಲ್ಸ್‌ನಲ್ಲಿ ಪ್ರಾರಂಭವಾಯಿತು. ಅಧಿವೇಶನದಲ್ಲಿ 37 ಮೆಟ್ರೋಪಾಲಿಟನ್ ಮತ್ತು ವಸಾಹತು ದೇಶಗಳ ದಮನಿತ ಜನರ, ಕಾರ್ಮಿಕ ವರ್ಗ ಮತ್ತು ಬುದ್ಧಿಜೀವಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಮತ್ತು ಬ್ರಿಟಿಷ್, ಭಾರತ ಮತ್ತು ಚೀನೀ ನಿಯೋಗಗಳು ಜಂಟಿಯಾಗಿ ಮಂಡಿಸಿದ ನಿರ್ಣಯವನ್ನು ಅಧಿವೇಶನ ಅಂಗೀಕರಿಸಿತು. ಆದು ಸಾಮ್ರಾಜ್ಯಶಾಹಿ ದೇಶಗಳ ಕಾರ್ಮಿಕ ವರ್ಗವನ್ನು ದಮನಿತ ಜನರೊಂದಿಗೆ ಜೊತೆ–ಜೊತೆಯಾಗಿ ಹೋರಾಡಲು ಮತ್ತು 'ವರ್ಗ ಹೋರಾಟದ ಸಿದ್ಧಾಂತಕ್ಕೆ ಅನುಗುಣವಾಗಿ ವಿಮೋಚನೆ ಸಾಧಿಸಬೇಕೆಂದು ಒತ್ತಾಯಿಸಿತು.



ಚೀನಾ ಬಡತನದ ವಿರುದ್ಧ 'ಪೂರ್ಣ ವಿಜಯ' ಸಾಧಿಸಿದೆ ಎಂದು ಚೀನಾದ ಅಧ್ಯಕ್ಷ ಕ್ಸಿ ಜಿಂಪಿಂಗ್ ಘೋಷಿಸಿದ್ದಾರೆ. ಚೀನಾಕ್ಕೆ ಕಳೆದ 8 ವರ್ಷಗಳಲ್ಲಿ ಕೊನೆಯ 10 ಕೋಟಿ ಜನರನ್ನು ಬಡತನದ ರೇಖೆಯಿಂದ ಮೇಲೆತ್ತಲು ಸಾಧ್ಯವಾಗಿದೆ. 1978ರ ಸುಧಾರಣೆಗಳ ನಂತರ 77 ಕೋಟಿ ಗ್ರಾಮೀಣ ಬಡವರನ್ನು ಬಡತನದ ರೇಖೆಗಿಂತ ಮೆಲೆತ್ತಲು ಸಾಧ್ಯವಾಗಿದೆ. ಅಂತರರಾಷ್ಟ್ರೀಯ ಬಡತ'ನದ ರೇಖೆಯ ಪ್ರಕಾರ 1970 ದಶಕದ ಕೊನೆಯಿಂದ ಜಾಗತಿಕವಾಗಿ ಬಡತನ ನಿವಾರಣೆಯ ಶೇ. 70 ಪಾಲು ಚೀನಾದ ಕೊಡುಗೆ ಎಂದು ವಿಶ್ವಬ್ಯಾಂಕ್ ಹೇಳಿದೆ. ಬಡತನದ ಪೂರ್ಣ ನಿವಾರಣೆಯ ಗುರಿಯನ್ನು 2030ರ ಒಳಗೆ ಮಾಡಬೇಕೆಂದು ವಿಶ್ವಸಂಸ್ಥೆ ನಿಗದಿಸಿತ್ತು. ಚೀನಾ 10 ವರ್ಷಗಳ ಮೊದಲೇ ಅದನ್ನು ಸಾಧಿಸಿದೆ. ಅಭಿವೃದ್ಧ ಬಂಡವಾಳಶಾಹಿ ದೇಶಗಳ ಪ್ರಭುತ್ವಗಳಿಗೆ ಬಡತನದ ಪೂರ್ಣ ನಿವಾರಣೆಯ ಚೀನಾದ ಈ ಸಾಧನೆ ನುಂಗಲಾರದ ತುತ್ತಾಗಿದೆ. ಹಾಗಾಗಿ ಚೀನಾದ ಈ ಸಾಧನೆ ಹುಸಿ. ಚೀನಾದ ಯಾವ ಆರ್ಥಿಕ ಅಂಕೆಸಂಖ್ಯೆಗಳೂ ವಿಶ್ವಾಸಾರ್ಹವಲ್ಲ. ಬಡತನ ರೇಖೆಯನ್ನು ಬದಲಾಯಿಸಿ ಬಡತನ ನಿವಾರಣೆಯ ಘೋಷಣೆ ಮಾಡಲಾಗಿದೆ ಎಂದು ಸಾಮ್ರಾಜ್ಯಶಾಹಿ ಮಾಧ್ಯಮಗಳು ಅಪಪ್ರಚಾರ ಆರಂಭಿಸಿವೆ. ಆದರೆ ಅದಕ್ಕೆ ಯಾವುದೇ ಆಧಾರಗಳನ್ನು ಒದಗಿಸಿಲ್ಲ.

'ಬಡತನದ ವಿರುದ್ಧ ಚೀನಾದ ಪೂರ್ಣ ವಿಜಯ'

ಜಗದ ಸುತ್ತ

ವಸಂತರಾಜ ಎನ್.ಕೆ.

ಚೀನಾ ಬಡತನದ ವಿರುದ್ಧ 'ಪೂರ್ಣ ವಿಜಯ' ಸಾಧಿಸಿದೆ ಎಂದು ಫೆಬ್ರುವರಿ 25, 2021 ರಂದು ಚೀನಾದ ಅಧ್ಯಕ್ಷ ಕ್ಸಿ ಜಿಂಪಿಂಗ್ ಘೋಷಿಸಿದ್ದಾರೆ. ಇಂದಿನ ಬಡತನದ ರೇಖೆಯ ಕೆಳಗೆ ಇರುವ ಕೊನೆಯ 9.9 ಕೋಟಿ ಗ್ರಾಮೀಣ ಬಡವರು, 832 ಬಡ ಕೌಂಟಿಗಳು, 1.28 ಲಕ್ಷ ಬಡ ಹಳ್ಳಿಗಳು ತಮ್ಮ ಜೀವನದ ಮಟ್ಟವನ್ನು ಬಡತನದ ರೇಖೆಗಿಂತ ಏರಿಸುವಲ್ಲಿ ಸಫಲರಾಗಿದ್ದಾರೆ. ಕೊವಿದ್ ಮಹಾಸೋಂಕಿನ ಪರಿಣಾಮವಾಗಿ ಜಗತ್ತಿನಲ್ಲಿ ಇನ್ನೂ 20.7 ಕೋಟಿ ಜನ ಬಡತನದ ರೇಖೆಯ ಕೆಳಗೆ ಹೋಗಲಿದ್ದಾರೆ. ಇದರೊಂದಿಗೆ ಜಗತ್ತಿನ ಒಟ್ಟು ಬಡವರ ಸಂಖ್ಯೆ 100 ಕೋಟಿ ಮೀರಬಹುದು. ಹಾಗಾಗಿ, 2030ರ ಹೊತ್ತಿಗೆ ಜಗತ್ತಿನಲ್ಲಿ ಬಡತನವನ್ನು ಪೂರ್ಣವಾಗಿ ಹೋಗಲಾಡಿಸುವ ಗುರಿ ತಲುಪಲು ಅಸಾಧ್ಯವಾಗಬಹುದು, ಎಂದು ವಿಶ್ವಸಂಸ್ಥೆಯ ಬೆಳವಣಿಗೆ ಕುರಿತ ಅಂಗಸಂಸ್ಥೆ ಯು.ಎನ್.ಡಿ.ಪಿ ಅಂದಾಜು ಮಾಡಿದ್ದರ ಹಿನ್ನೆಲೆಯಲ್ಲಿ ಚೀನಾದ ಈ ಸಾಧನೆ ಗಮನಾರ್ಹವಾದದ್ದು.

ಚೀನಾಕ್ಕೆ ಕಳೆದ 8 ವರ್ಷಗಳಲ್ಲಿ ಕೊನೆಯ 10 ಕೋಟಿ (ಈಗಿನ ಬಡತನದ ರೇಖೆಯ ಪ್ರಕಾರ) ಜನರನ್ನು ಬಡತನದ ರೇಖೆಯಿಂದ ಮೇಲೆತ್ತಲು ಸಾಧ್ಯವಾಗಿದೆ. 1978ರ ಸುಧಾರಣೆಗಳ ನಂತರ 77 ಕೋಟಿ ಬಡವರನ್ನು ಬಡತನದ ರೇಖೆಗಿಂತ ಮೆಲೆತ್ತಲು ಸಾಧ್ಯವಾಗಿದೆ. ಅಂತರರಾಷ್ಟ್ರೀಯ ಬಡತನದ ರೇಖೆಯ ಪ್ರಕಾರ 1970 ದಶಕದ ಕೊನೆಯಿಂದ ಜಾಗತಿಕವಾಗಿ ಬಡತನ ನಿವಾರಣೆಯ ಶೇ. 70 ಪಾಲು ಚೀನಾದ ಕೊಡುಗೆ ಎಂದು ವಿಶ್ವಬ್ಯಾಂಕ್ ಹೇಳಿದೆ.

ಚೀನಾದ ಪ್ರತಿ ಶೇ.1 ಜಿಡಿಪಿ ಏರಿಕೆಯೊಂದಿಗೆ, ಗ್ರಾಮೀಣ ಬಡತನ ಶೇ.0.8 ರಷ್ಟು ಕಡಿಮೆಯಾಗುತ್ತಾ ಬಂದಿದೆ. ಈಚಿನ ಅವಧಿಯಲ್ಲಿ ಪ್ರತಿ ತಿಂಗಳು 10 ಲಕ್ಷ ಜನರ ಬಡತನ ನಿವಾರಣೆಯಾಗುತ್ತಾ ಬಂದಿದೆ. ಚೀನಾದ ಬಡವರ (ಬಡತನದ ಕೆಳಗಿರುವವರ) ಆದಾಯ 2015ರಲ್ಲಿ ಸರಾಸರಿ 2,982 ಯುವಾನ್ (ಚೀನಾದ ನಾಣ್ಯ : 1 ಯುವಾನ್ = 11.26 ರೂಪಾಯಿ) ನಿಂದ 2020ರಲ್ಲಿ 10,740 ಯುವಾನ್ ಗೆ ಏರಿದೆ. ಕೊವಿದ್ ನ ದುಷ್ಪರಿಣಾಮಗಳು ಇದ್ದಾಗ್ಯೂ ಚೀನಾದ ಈ ಸಾಧನೆ ಗಮನಾರ್ಹವಾದದ್ದು.

ಚೀನಾದ ಈಗಿನ ಬಡತನದ ರೇಖೆಯು ಬಹು ಆಯಾಮದ್ದಾಗಿದ್ದು ಅದನ್ನು ಅಂತರರಾಷ್ಟ್ರೀಯ ಸಂಘಟನೆಗಳ ಮಾನದಂಡ ಮತ್ತು ರಾಷ್ಟ್ರೀಯ ಪರಿಸ್ಥಿತಿಗಳಿಗೆ ಅನುಗುಣವಾಗಿ ನಿಗದಿ ಮಾಡಲಾಗಿದೆ. ಬಡತನ ರೇಖೆಯನ್ನು ನಿಗದಿ ಮಾಡುವಾಗ ಆದಾಯ, ಶಿಕ್ಷಣ, ಆರೋಗ್ಯ ಮತ್ತು ಜೀವನ ಮಟ್ಟಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ. ರೇಖೆಯನ್ನು 2010ರ ಸ್ಥಿರ ಮೌಲ್ಯದಲ್ಲಿ 2300 ಯುವಾನ್ ವಾರ್ಷಿಕ ಆದಾಯ ಅಥವಾ ಪ್ರತಿ ವ್ಯಕ್ತಿಗೆ ಪ್ರತಿ ದಿನ 2.3 (ಕೊಳ್ಳುವ ಶಕ್ತಿಯ ಸಮನಾದ) ಡಾಲರುಗಳಿಗೆ ಸಮನಾಗಿತ್ತು. 2020ರಲ್ಲಿ 4000 ಯುವಾನ್ ವಾರ್ಷಿಕ ಆದಾಯಕ್ಕೆ ಸಮನಾಗಿತ್ತು. ಬಡತನದ ರೇಖೆ ಜೀವನಾವಶ್ಯಕ ವಸ್ತುಗಳ ನಿಜ ಬೆಲೆಗೆ ತಳಕು ಹಾಕಿಕೊಂಡಿದ್ದು ಹಣದುಬ್ಬರದ ಪರಿಣಾಮ ಇದರ ಮೇಲಾಗುವುದಿಲ್ಲ. ಇಂದಿನ ಪೂರ್ಣ ವಿಜಯದ ಆಧಾರವನ್ನು ಚೀನಾದ ಕ್ರಾಂತಿಯ ನಂತರ ಜಾರಿ ಮಾಡಲಾದ ಸಮಗ್ರ ಭೂಸುಧಾರಣೆಗಳು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಹಾಗೂ ಕೃಷಿಯಲ್ಲಿ ಸಾಧಿಸಲಾದ ವ್ಯಾಪಕ ಬದಲಾವಣೆಗಳು ಹಾಕಿದ್ದವು ಎಂದು ಮರೆಯುವಂತಿಲ್ಲ. ಕಾಲ ಕಾಲಕ್ಕೆ ಗ್ರಾಮೀಣ ಆರ್ಥಿಕ ಸುಧಾರಣೆಗಳು, ಪ್ರಾದೇಶಿಕ ಬೆಳವಣಿಗೆಯ ಬಡತನದ ನಿವಾರಣೆಗೆ ಯೋಜನೆಗಳನ್ನು ಹಾಕಲಾಯಿತು.

2020ರ ಹೊತ್ತಿಗೆ 'ಎಲ್ಲ ಆಯಾಮಗಳಲ್ಲಿ ಸಾಕಷ್ಟು ಸಮೃದ್ಧ ಸಮಾಜ' ಆಗುವ ಗುರಿಯ ಭಾಗವಾಗಿ, ಅದನ್ನು ಸಾಧಿಸಲು ಬಡತನ ನಿವಾರಣೆಯ ಮೂಲಭೂತ ಅಗತ್ಯ ಎಂದು ಪರಿಗಣಿಸಲಾಗಿತ್ತು. ಹಾಗಾಗಿ, ಬಡತನದ ಪ್ರಮಾಣವನ್ನು ಅರ್ಧದಷ್ಟು ಕಡಿತ ಮಾಡುವ ವಿಶ್ವಸಂಸ್ಥೆಯ 2015 ರ ಸಹಸ್ರಮಾನ ಅಭಿವೃದ್ಧಿ ಗುರಿಗಳನ್ನು ಸಾಧಿಸಿದ ಮೊದಲ ದೇಶವಾಗಿ ಚೀನಾ ಹೊಮ್ಮಿತ್ತು. ಆ ನಂತರ ಚೀನಾ ಆಳವಾದ ಬಡ ಪ್ರದೇಶಗಳು, ಆಳವಾದ ಬಡತನದಲ್ಲಿರುವ ಜನವಿಭಾಗಗಳ ಬಡತನ ನಿವಾರಣೆ ಮೇಲೆ ಗಮನ ಕೇಂದ್ರೀಕರಿಸಿತ್ತು.

ಚೀನಾ ಬಡತನ ನಿವಾರಣೆ ಯೋಜನೆಯನ್ನು 'ಆರು ನಿಖರ ಕ್ರಮಗಳು' ಮತ್ತು 'ಐದು ಬ್ಯಾಚ್ ಗಳು' ಇವುಗಳ ಸಹಾಯದಿಂದ ಜಾರಿ ಮಾಡಲಾಯಿತು. 'ಆರು ನಿಖರ ಕ್ರಮಗಳು' ಹೀಗಿದ್ದವು : 1. ಬಡವರನ್ನು ನಿಖರವಾಗಿ ಗುರುತಿಸುವುದು 2. ನಿಖರ ಪ್ರಾಜೆಕ್ಟುಗಳನ್ನು ಏರ್ಪಡಿಸುವುದು 3. ನಿಧಿಯ ಸೂಕ್ತ ಬಳಕೆ 4. ಕುಟುಂಬಗಳನ್ನು ಗುರಿಯಾಗಿಟ್ಟುಕೊಂಡ ಕ್ರಮಗಳು 5. ಗ್ರಾಮಗಳಲ್ಲಿ ಬಡತನ–ನಿವಾರಣೆ ಅಧಿಕಾರಿಗಳನ್ನು ಇರಿಸುವುದು 6. ಬಡತನ ಪರಿಹಾರ/ನಿರ್ವಹಣೆಗಳ ಅಳೆಯಬಹುದಾದ ಪರಿಣಾಮಗಳು. 'ಐದು ಬ್ಯಾಚ್ ಗಳು' ಹೀಗಿದ್ದವು : 1. ಉದ್ಯೋಗ ದೊರಕಿಸಲು ಉತ್ಪಾದನೆ ಹೆಚ್ಚಿಸುವುದು 2. ಸ್ಥಳಾಂತರಗಳ ಮೂಲಕ 3. ಪ್ರಾಕೃತಿಕ ಪರಿಸರದ ಸಂರಕ್ಷಣೆಯ ಉದ್ಯೋಗ ಒದಗಿಸುವುದು 4. ಶಿಕ್ಷಣದ ಮೂಲಕ 5. ಜೀವನಾವಶ್ಯಕ ಭತ್ಯೆಗಳ ಮೂಲಕ. 2014ರಲ್ಲಿ ಬಡವರನ್ನು ಗುರುತಿಸಲು 8 ಲಕ್ಷ ಸಿಬ್ಬಂದಿಯನ್ನು ನೇಮಿಸಿತು. 2015ರಲ್ಲಿ ಇದು 20 ಲಕ್ಷಕ್ಕೆ ಏರಿತು. ಬಡವರನ್ನು ಗುರುತಿಸಲು ಮನೆ, ಆಹಾರ, ಕೆಲಸದ ಸಾಮರ್ಥ್ಯ ಮತ್ತು ಶಾಲಾಮಕ್ಕಳ ಸಂಖ್ಯೆಗಳನ್ನು ಮಾನದಂಡವಾಗಿ ಬಳಸಲಾಯಿತು.

ಚೀನಾ ಕಮ್ಯುನಿಸ್ಟ್ ಪಕ್ಷದ 18ನೇ ಮಹಾಧಿವೇಶನದಲ್ಲಿ ಪ್ರದೇಶಗಳ ನಡುವೆ, ನಗರ–ಗ್ರಾಮಗಳ ನಡುವೆ ಅಭಿವೃದ್ಧಿಯ ಅಸಮಾನತೆಗಳನ್ನು ಹೋಗಲಾಡಿಸವುದು ಎಲ್ಲ ಹಂತಗಳ ಪಕ್ಷದ ಮತ್ತು ಸರಕಾರದ ಜವಾಬ್ದಾರಿ ಎಂದು ವಿಧಿಸಿತು. ತೀವ್ರ ಮತ್ತು ಆಳ ಬಡತನದ ಪ್ರದೇಶಗಳು ಮತ್ತು ಜನವಿಭಾಗಗಳನ್ನು ಗುರುತಿಸಿ ಬಡತನ ಪರಿಹಾರ–ನಿವಾರಣೆ ಕ್ರಮಗಳನ್ನು ಕೈಗೊಳ್ಳುವುದು 13ನೇ ಪಂಚವಾರ್ಷಿಕ ಯೋಜನಾ (2016–20) ಅವಧಿಯಲ್ಲಿ ಆದ್ಯತೆಯಾಯಿತು. ಪ್ರಾಂತೀಯ ಪಕ್ಷ ಮತ್ತು ಸರಕಾರಗಳ ಜವಾಬ್ದಾರಿ ಕೇಂದ್ರೀಯ ಯೋಜನೆ ಮತ್ತು ಉಳಿದ ಹಂತಗಳ ಪಕ್ಷ ಮತ್ತು ಸರಕಾರಗಳ ಜವಾಬ್ದಾರಿ ಅದರ ಜಾರಿಯೆಂದು ನಿಗದಿ ಮಾಡಲಾಯಿತು. ಪಕ್ಷದ ಸಮಿತಿ ಸದಸ್ಯರು ಮತ್ತು ಸರಕಾರದ ಅಧಿಕಾರಿಗಳಿಗೆ ಯೋಜನೆ, ಜಾರಿ ಮತ್ತು ಸಾಮಾಜಿಕ ಅಣಿನೆರೆಸುವಿಕೆಯ ಜವಾಬ್ದಾರಿಗಳನ್ನು ಹಂಚಲಾಯಿತು. ಈ ಜವಾಬ್ದಾರಿ ಕೊಡಲಾದ ಆಳ ಮತ್ತು ತೀವ್ರ ಬಡತನದ ಪ್ರದೇಶಗಳ ಅಧಿಕಾರಿಗಳು ಈ ಯೋಜನೆ ಮೂಗಿಯುವ ವರೆಗೆ ವರ್ಗಾವಣೆಯನ್ನು ತಡೆ ಹಿಡಿಯಲಾಯಿತು. 5ಲಕ್ಷ ಆಯ್ದ ಪಕ್ಷದ ಗ್ರಾಮೀಣ ಶಾಖೆಗಳ ಕಾರ್ಯದರ್ಶಿಗಳನ್ನು ಈ ಯೋಜನೆಯಲ್ಲಿ ತೊಡಗಿಸಲಾಯಿತು. ಈ ಯೋಜನೆಯ ಜಾರಿಗೆ ಲಕ್ಷಾಂತರ ಸ್ಥಳೀಯ ಸಂಗಾತಿಗಳಿಗೆ ಅಗತ್ಯ ಬೆಂಬಲ ನೀಡಲು 2.5 ಲಕ್ಷ ತಂಡಗಳು ಮತ್ತು 30 ಲಕ್ಷ ಸಂಗಾತಿಗಳನ್ನು ಕಳಿಸಲಾಯಿತು. ಕಳೆದ 8 ವರ್ಷಗಳಲ್ಲಿ ಬಡತನ ನಿವಾರಣೆಗೆ 1600 ಶತಕೋಟಿ ಯುವಾನ್ ಹೂಡಿಕೆ ಮಾಡಲಾಯಿತು. 2016–2020 ಅವಧಿಯಲ್ಲಿ 832 ತೀವ್ರ ಬಡತನದ 832 ಪ್ರದೇಶಗಳ ಬಡತನ ನಿವಾರಣೆಗೆ ವಾರ್ಷಿಕ ನಿಧಿ ಕೆಲವು ಕೋಟಿ ಯುವಾನ್ ಗಳಿಂದ 36 ಕೋಟಿ ಯುವಾನ್ ಗಳಿಗೆ ಏರಿತು. ಬಡತನ ನಿವಾರಣೆಯಾಗಿದೆಯೆ ಇಲ್ಲವೆ ಎಂಬ ನಿರ್ಣಯವನ್ನು ಸ್ವತಂತ್ರ ವಿವಿ ಸಾಮಾಜಿಕ ಸಂಘಟನೆಗಳ ತಂಡಗಳು ಮಾಡಿದವು. ಒಂದು ಪ್ರದೇಶ, ಹಳ್ಳಿ ಅಥವಾ ಕುಟುಂಬದಲ್ಲಿ ಬಡತನ ನಿವಾರಣೆಯಾಗಿದೆಯೆ ಇಲ್ಲವೆ ಎಂದು ನಿರ್ಣಯಿಸಲು – ಬಡತನ ರೇಖೆಗಿಂತ ಹೆಚ್ಚಿರುವ ಸ್ಥಿರ ವಾರ್ಷಿಕ ಆದಾಯ, ಅಗತ್ಯ ಆಹಾರ, ಬಟ್ಟೆ, ಶಿಕ್ಷಣ ಆರೋಗ್ಯ ಸೇವೆಗೆ ಅವಕಾಶ ಮುಂತಾದ ಮಾನದಂಡಗಳನ್ನು ನಿಗದಿಸಲಾಯಿತು. ಈ ತಂಡಗಳು ಬಡತನ ನಿವಾರಣೆ ಅಧಿಕಾರಗಳ ಸಾಧನೆಗಳ ಮೂಲ್ಯಾಂಕನವನ್ನೂ ಮಾಡಿದವು.

ಬಡತನ ನಿವಾರಣೆ ಅಂತಿಮ ಗುರಿಯಲ್ಲ. ಗ್ರಾಮೀಣ ಪುನರುಜ್ಜೀವನ ಮತ್ತು ಸತತ ಅಭಿವೃದ್ಧಿಯ ಗುರಿಯತ್ತ ಪಯಣದ ಆರಂಭ, ಎಂದು ಚೀನಾ ಅಧ್ಯಕ್ಷ ಹೇಳಿದ್ದಾರೆ. ಬಡತನದ ಪೂರ್ಣ ನಿವಾರಣೆಯ ಗುರಿಯನ್ನು 2030ರ ಒಳಗೆ ಮಾಡಬೇಕೆಂದು ವಿಶ್ವಸಂಸ್ಥೆ ನಿಗದಿಸಿತ್ತು. ಚೀನಾ 10 ವರ್ಷಗಳ ಮೊದಲೇ ಅದನ್ನು ಸಾಧಿಸಿದೆ.

ಕೊವಿದ್ ವೈರಾಣು ಒಡ್ಡಿದ ಸವಾಲುಗಳನ್ನು ಎದುರಿಸಲಾಗದೆ ಕುಸಿದ ಅಭಿವೃದ್ಧ ಬಂಡವಾಳಶಾಹಿ ದೇಶಗಳ ಪ್ರಭುತ್ವಗಳು ಅದರ ದೀರ್ಘಕಾಲೀನ ಆರ್ಥಿಕ ದುಷ್ಪರಿಣಾಮಗಳನ್ನು ಎದುರಿಸಲಾಗದೆ ಬಂಡವಾಳಶಾಹಿ ಜಗತ್ತಿನಲ್ಲಿ ಬಡತನದ ತೀವ್ರ ಏರಿಕೆಯ ಸಾಧ್ಯತೆಯನ್ನು ಎದುರು ನೋಡುತ್ತಿವೆ. ಅವರಿಗೆ ಬಡತನದ ಪೂರ್ಣ ನಿವಾರಣೆಯ ಚೀನಾದ ಈ ಸಾಧನೆ ನುಂಗಲಾರದ ತುತ್ತಾಗಿದೆ. ಹಾಗಾಗಿ ಚೀನಾದ ಈ ಸಾಧನೆ ಹುಸಿ. ಚೀನಾದ ಯಾವ ಆರ್ಥಿಕ ಅಂಕೆಸಂಖ್ಯೆಗಳೂ ವಿಶ್ವಾಸಾರ್ಹವಲ್ಲ. ಬಡತನ ರೇಖೆಯನ್ನು ಬದಲಾಯಿಸಿ ಬಡತನ ನಿವಾರಣೆಯ ಘೋಷಣೆ ಮಾಡಲಾಗಿದೆ ಎಂದು ಸಾಮ್ರಾಜ್ಯಶಾಹಿ ಮಾಧ್ಯಮಗಳು ಅಪಪ್ರಚಾರ ಆರಂಭಿಸಿವೆ. ಆದರೆ ಅದಕ್ಕೆ ಯಾವುದೇ ಆಧಾರಗಳನ್ನು ಒದಗಿಸಿಲ್ಲ.

JANASHAKTHI KANNADA VARA PATRIKE MARCH 8-14, 2021 Price: Rs. 10/- Date of Publication: 5 MARCH 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21





ಕಾರ್ಮಿಕರ "ಕೋಟಿ ಹೆಜ್ಜೆ ವಿಧಾನ ಸೌಧದೆಡೆಗೆ" ಹರಿದು ಬಂದ ಜನಸಾಗರ



ಕಾರ್ಮಿಕ ವಿರೋಧಿ ಕಾರ್ಮಿಕ ಸಂಹಿತೆಗಳ ರದ್ದತಿಗಾಗಿ, ಉದ್ಯೋಗ ಭದ್ರತೆಗಾಗಿ, ಬೆಲೆ ಏರಿಕೆ ತಡೆಗಟ್ಟಿ, ರಾಜ್ಯದ ಜಿಎಸ್‌ಟಿ ಪಾಲು ಪರಿಹಾರಕ್ಕಾಗಿ, ರೈತ ವಿರೋಧಿ ಕೃಷಿ ಕಾಯ್ದೆಗಳ ರದ್ದತಿಗಾಗಿ ಆಗ್ರಹಿಸಿ ಇಂದು ಸಿಐಟಿಯು ವತಿಯಿಂದ ಬೃಹತ್ ಕಾರ್ಮಿಕರ ಕೋಟಿ ಹೆಜ್ಜೆ ಮೂಲಕ ಬಜೆಟ್ ಅಧಿವೇಶನ ಚಲೋ ನಡೆಸಿದರು.

ಮೆಜೆಸ್ಟಿಕ್‌ನ ರೈಲ್ವೆ ನಿಲ್ದಾಣ ದಿಂದ ಆರಂಭಗೊಂಡ ಮೆರವಣಿಗೆ ಸ್ವಾತಂತ್ರ್ಯ ಉದ್ಯಾನವನದಲ್ಲಿ ಸಮಾವೇಶಗೊಂಡಿತು. ಈ ಬೃಹತ್ ರ‍್ಯಾಲಿಯಲ್ಲಿ ಮೂವತ್ತೈದು ಸಾವಿರಕ್ಕೂ ಹೆಚ್ಚಿನ ಕಾರ್ಮಿಕರು ಭಾಗವಹಿಸಿದ್ದು, ರಾಜ್ಯ ದಲ್ಲಿ ಅಧಿಕಾರ ನಡೆಸುತ್ತಿರುವ ಬಿಜೆಪಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು.

ಕೇಂದ್ರ ಮತ್ತು ರಾಜ್ಯ ಸರಕಾರಗಳು ಜಾರಿಗೊಳಿಸಿರುವ ರೈತ ಹಾಗೂ ಕಾರ್ಮಿಕ ವಿರೋಧಿ ಕಾನೂನುಗಳನ್ನು ಕೈಬಿಡಬೇಕು ಮತ್ತು ರಾಜ್ಯದ ಸಂಘಟಿತ, ಅಸಂಘಟಿತ ಕಾರ್ಮಿಕರ ಉದ್ಯೋಗ ಭದ್ರತೆಗಾಗಿ ಹಾಗೂ ಗುತ್ತಿಗೆ ಹೊರಗುತ್ತಿಗೆ ಕಾರ್ಮಿಕರ ಹಕ್ಕುಗಳ ರಕ್ಷಣೆಗಾಗಿನ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ವತಿಯಿಂದ ಬೃಹತ್ ಪ್ರತಿಭಟನೆಯನ್ನು ನಡೆಸಲಾಯಿತು.

ಬಿಸಿಯೂಟ ನೌಕರರು, ಹಮಾಲಿ ಕಾರ್ಮಿಕರು ಹಾಗೂ ಆಟೋ ಚಾಲಕರು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಎರಡನೇ ದಿನಕ್ಕೆ ಅಹೋರಾತ್ರಿ ಧರಣಿ ಮುಂದಯವರೆಸಿದರು.

ಈ ಬೃಹತ್ ರ‍್ಯಾಲಿಯಲ್ಲಿ ಕೈಗಾರಿಕಾ ಕಾರ್ಮಿಕರು ಸೇರಿದಂತೆ ವಿವಿಧ ಗುತ್ತಿಗೆ ಕಾರ್ಮಿಕರು, ಅಂಗನವಾಡಿ, ಬಿಸಿಯೂಟ ನೌಕರರು, ಗ್ರಾಮ ಪಂಚಾಯ್ತಿ ನೌಕರರು, ಮುನ್ಸಿಪಲ್ ನೌಕರರು, ಸಾರಿಗೆ ನೌಕರರು, ಪ್ಲಾಂಟೇಷನ್ ನೌಕರರು, ಕಟ್ಟಡ ಕಾರ್ಮಿಕರು, ಬೀಡಿ ಕಾರ್ಮಿಕರು, ಮನೆಗೆಲಸ ಹಾಗೂ ವಲಸೆ ಕಾಮಿಕರು ಸೇರಿದಂತೆ ವಿಮಾ ಪ್ರತಿನಿಧಿಗಳು ಹಾಗೂ ಬೀದಿಬದಿ ವ್ಯಾಪಾರಿಗಳ ಸಾವಿರಾರು ಕಾರ್ಮಿಕರು ಭಾಗವಹಿಸಿದ್ದರು.

ಪ್ರತಿಭಟನಾ ಸ್ಥಳಕ್ಕೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಚಿವರಾದ ಶಶಿಕಲಾ ಜೊಲ್ಲೆ ಅಗಮಿಸಿ, ಮನವಿಯನ್ನು ಸ್ವೀಕರಿಸಿದರು, ಅಂಗನವಾಡಿ ನೌಕರರು ಎದುರಿಸುತ್ತಿರುವ ಸಮಸ್ಯೆಗಳನ್ನು ನಿವಾರಿಸುವುದಾಗಿ ಅವರು ಭರವಸೆಯನ್ನು ನೀಡಿದರು.

ಕಾರ್ಮಿಕ ಸಚಿವರಾದ ಶಿವರಾಂ ಹೆಬ್ಬಾರ ಧರಣಿ ಸ್ಥಳಕ್ಕೆ ಆಗಮಿಸಿ ಕಾರ್ಮಿಕರ ಕಷ್ಟಗಳನ್ನು ಕೇಳಿದರು. ಮುಖ್ಯಮಂತ್ರಿ ಹಾಗೂ ಇಲಾಖೆಯ ಅಧಿಕಾರಿಗಳ ಜೊತೆ ಚರ್ಚಿಸಿ ಶೀಘ್ರದಲ್ಲೆ ಕೆಲ ಸಮಸ್ಯೆಗಳನ್ನು ಇತ್ಯರ್ಥಗೊಳಿಸುವುದಾಗಿ ಭರವಸೆ ನೀಡಿದರು.

ಈ ಪ್ರತಿಭಟನೆಯಲ್ಲಿ ಸಿಐಟಿಯು ಎಸ್. ವರಲಕ್ಷ್ಮಿ, ರಾಜ್ಯಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ರಾಜ್ಯ ಖಜಾಂಚಿ ಪರಮೇಶ್ವರ್, ರಾಜ್ಯ ಪದಾಧಿಕಾರಿಗಳಾದ ಕೆ. ಎನ್ ಉಮೇಶ್, ಬಿ. ಉಮೇಶ್, ಸಿ.ಆರ್ ಶ್ಯಾನಭೋಗ್, ಜಿ. ಜಯರಾಮ್, ಟಿ.ಲೀಲಾವತಿ, ಕೆ.ಶಂಕರ್, ಬಿ.ಬಾಲಕೃಷ್ಣ ಶೆಟ್ಟಿ, ಹೆಚ್.ಎನ್. ಗೋಪಾಲಗೌಡ, ಎನ್.ವೀರಸ್ವಾಮಿ, ಕೆ.ಪ್ರಕಾಶ, ಶಾಂತ ಎನ್. ಘಂಟೆ, ಆರ್. ಎಸ್ ಬಸವರಾಜು, ಹರೀಶ್ ನಾಯ್ಕ್, ಗೈಬು ಜೈನ್‌ಖಾನ್, ಎಚ್. ಸುನಂದಾ, ಮಹೇಶ್ ಪತ್ತಾರ್, ಸಯ್ಯದ್ ಮುಜೀಬ್, ಕೆ. ಮಹಾಂತೇಶ್, ನಿರುಪಾದಿ ಬೆಣಕಲ್, ಮಾಲಿನಿ ಮೆಸ್ತಾ, ಯಮುನಾ ಗಾಂವ್ಕರ್, ಎನ್. ಪ್ರತಾಪ್ ಸಿಂಹ ಸೇರಿದಂತೆ ಅನೇಕರಿದ್ದರು.

ವಸತಿ ಸೇರಿದಂತೆ ವಿವಿಧ ಬೇಡಿಕೆಗಳಿಗಾಗಿ ಹಮಾಲಿ ಕಾರ್ಮಿಕರ ಪ್ರತಿಭಟನೆ



'ಎಂಎಸ್‌ಪಿ ಕೊಡಿಸಿ ರಾಷ್ಟ್ರೀಯ ಆಂದೋಲನ' ಆರಂಭ



JANASHAKTHI KANNADA VARA PATRIKE: Printed, Published by G.N.NAGARAJ, No. 12, 18th Cross, Sampangirama Nagar, Bangalore 560027, Karnataka on behalf of COMMUNIST PARTY OF INDIA (MARXIST) and Printed at : Kriya Prakashana, No. 12, 18th Cross, Sampangirama Nagar, Bangalore 560027
Editor : G.V.SRIRAMA REDDY